ಪಂಚಾಯಿತಿಗಳಿಗೆ ತರಿಸಿದ ಟ್ಯೂಬಲೈಟಗಳನ್ನು ಮತ್ತು ಹೆಂಚು, ನಾಟ, ಸಿಮೆಂಟ್ ಇತ್ಯಾದಿಗಳನ್ನು ಮಾರಿಕೊಂಡಿರುವ ವಿಷಯ ಬೆಳಕಿಗೆ ಬಂದಿದೆ. ಈ ಬಗ್ಗೆ ಸರ್ಕಾರದ ಗಮನ ಸೆಳೆದು ಸದರಿ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ತನಿಖೆ ನಡೆಸಬೇಕೆಂದು ಕೋರಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಉತ್ತರವನ್ನು ತರಿಸಿಕೊಡುತ್ತೇನೆ ಸ್ವಾಮಿ.

ವಿತ್ತೀಯ ಕಾರ್ಯಕಲಾಪಗಳು ೧೯೮೮–೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ, ರೇಷ್ಮೆ, ಮೀನುಗಾರಿಕೆ, ಬಂದರು, ಮತ್ತು ಜಲಸಾರಿಗೆ ಗಣಿ ಮತ್ತು ಭೂವಿಜ್ಞಾನ, ಯುವಜನ ಸೇವೆ } ಮಂತ್ರಿಗಳಿಂದ ಉತ್ತರ

ಹಾಗೂ ಬೇಡಿಕೆ ಕ್ರ. ಸಂ. ೬—ಉದ್ಯಮಗಳು. ೯—ವಿದ್ಯುಚ್ಛಕ್ತಿ, ೮—ಸಣ್ಣ ಕೈಗಾರಿಕೆಗಳು

(ಬೇಡಿಕೆಗಳನ್ನು ಮಂಡಿಸಲಾಯಿತು.)

ಅಧ್ಯಕ್ಷರು.—ಈಗ ರೇಷ್ಮೆ ವ್ಯವಸಾಯ, ರಾಜ್ಯ ವಿಧಾನ ಮಂಡಲ ಹಾಗೂ ನ್ಯಾಯ ಪರಿಪಾಲನೆ ಬೇಡಿಕೆಗಳ ಮೇಲೆ ಮಾನ್ಯ ಮಂತ್ರಿಗಳ ಉತ್ತರ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ರೇಷ್ಮೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ರೇಷ್ಮೆ ಇಲಾಖೆ ಮತ್ತು ಕಾನೂನು ಇಲಾಖೆಗಳ ಬಗ್ಗೆ ಈ ಸದನದಲ್ಲಿ ದೀರ್ಘವಾದ, ವಿವರಣಾತ್ಮಕವಾದ ಚರ್ಚೆ ನಡೆದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಾರಂಭದಲ್ಲಿ ನಾನು ರೇಷ್ಮೆ ಇಲಾಖೆಗೆ, ಸಂಬಂಧಪಟ್ಟ ವಿಚಾರಗಳ ಬಗ್ಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ರೇಷ್ಮೆ ಇಲಾಖೆಯ ಬಗ್ಗೆ ಮಾನ್ಯ ಇಬ್ಬರು ಸದಸ್ಯರು ಮಾತನಾಡಿದ್ದಾರೆ. ಮಾನ್ಯ ರಾಜೂಗೌಡರು ಮತ್ತು ವೆಂಕಟರಾಮಯ್ಯನವರು ಮಾತನಾಡಿದ್ದಾರೆ. ಮಾನ್ಯ ರಾಜೂಗೌಡರು ಈ ರೇಷ್ಮೆ ಉದ್ಯಮ ಹೆಚ್ಚು ಇರತಕ್ಕ ಪ್ರದೇಶದಿಂದ ಬಂದಿರತಕ್ಕವರು. ಈ ಮನೆಯ ಹಿರಿಯ ಶಾಸಕರೂ ಆಗಿರುವುದರ ಜೊತೆಗೆ

(ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿದ್ದರು)

ಅವರು ರೇಷ್ಮೆ ಬೆಳೆ ಬೆಳೆಯತಕ್ಕಂಥ ಪ್ರದೇಶದಿಂದ ಬಂದಿರುವುದರಿಂದ ರೇಷ್ಮೆ ಬೆಳೆಯ ಬಗ್ಗೆ, ಈ ಉದ್ಯಮದ ಬಗ್ಗೆ ವಿಶೇಷವಾದಂಥ ಆಳವಾದಂಥ ಅನುಭವದ ಹಿನ್ನೆಲೆಯಲ್ಲಿ ಅಧಿಕಾರ ವಾಣಿಯಿಂದ ಮಾತನಾಡತಕ್ಕಂಥ ಶಕ್ತಿಯನ್ನು ಪಡೆದಿದ್ದಾರೆ. ಅವರು ಈ ಇಲಾಖೆಯ ಹಲವಾರು ವಿಷಯಗಳ ಮೇಲೆ ತಮ್ಮ ಅನುಭವದ ಹಿನ್ನಲೆಯಲ್ಲಿ ಅಧಿಕಾರ ವಾಣಿಯ ವಿಚಾರವನ್ನು ಅಲೆಅಲೆಯಾಗಿ ಹರಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇನ್ನು ಶ್ರೀ ವೆಂಕಟರಾಮಯ್ಯನವರು ಅವರದೇ ಆದಂಥ ಧಾಟಿಯಲ್ಲಿ 'ಕೊಟ್ಟರೆ ಶಾಪ ಬಿಟ್ಟರೆ ಬಾಣ' ಎನ್ನುವಂತೆ ಕೆಲವು ಮಾತುಗಳನ್ನು ರೇಷ್ಮೆ ಇಲಾಖೆಯ ಬಗ್ಗೆ ಹೇಳಿ ಚುಕ್ತಾ ಮಾಡಿದ್ದಾರೆ. ಸನ್ಮಾನ್ಯ ಇಬ್ಬರು ಸದಸ್ಯರೂ ಈಗ ಈ ಮನೆಯಲ್ಲಿ ಇದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಸನ್ಮಾನ್ಯ ರಾಜುಗೌಡರು ಈ ಇಲಾಖೆಯಲ್ಲಿ ಅಡಿಶನಲ್ ಡೈರೆಕ್ಟರ್ ಒಬ್ಬರನ್ನು ನೇಮಕ ಮಾಡಬೇಕೆಂದು ಹೇಳಿ ಇದನ್ನು ಬೇಗ ಮಾಡಬೇಕೆಂದು ಹೇಳಿದ್ದರು. ಈಗಲೇ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಸನ್ಮಾನ್ಯ ಶ್ರೀ ರಾಜೂಗೌಡರು ರೇಷ್ಮೆ ಉತ್ಪನ್ನವನ್ನು ಜಾಸ್ತಿ ಮಾಡುವುದಕ್ಕೋಸ್ಕರ ಎಕರೆ ಉತ್ಪನ್ನವನ್ನು ಹೆಚ್ಚಿಸಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ ಎರಡನೆಯದಾಗಿ, ಮಳೆಯ ಆಶ್ರಯದಲ್ಲಿ ಬೆಳೆಯತಕ್ಕಂಥ ಪ್ರದೇಶವನ್ನು ನೀರಾವರಿಗೆ ಪರಿವರ್ತನೆ ಮಾಡಬೇಕೆಂದು ಕೂಡ ಸಲಹೆ ಮಾಡಿದ್ದಾರೆ. ಸನ್ಮಾನ ಅಧ್ಯಕ್ಷರೇ, ಎಕರೆ ಉತ್ಪನ್ನವನ್ನು ವಿಸ್ತರಣೆ ಮಾಡುವುದರ ಬಗ್ಗೆ ಕೆಲವು ವಿವರಗಳನ್ನು ನಾನು ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈ ವಿವರಗಳು ಅವರಿಗೆ ಸಮರ್ಪಕವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ರೇಷ್ಮೆ ಉದ್ಯಮದ ಪ್ರಗತಿಯ ಬಗ್ಗೆ ಸಾಕಷ್ಟು ಮಾಹಿತಿ ಇದೆ. ಈ ರಾಜ್ಯದಲ್ಲಿ ೧ ಲಕ್ಷ ೩೯ ಸಾವಿರ ಹೆಕ್ಟೇರ್‌ನಲ್ಲಿ ಹಿಪ್ಪುನೇರಳೆ ಬೆಳೆಯನ್ನು ಬೆಳೆಯಲಾಗುತ್ತಿದ್ದು ೬೧ ಸಾವಿರದ ೫ ನೂರು ಎಕರೆ ಮಳೆಯ ಆಶ್ರಯದಲ್ಲಿ ಇರುತ್ತದೆ. ೭೭ ಸಾವಿರದ ೬೦೦ ಹೆಕ್ಟೇರ್

ನೀರಾವರಿ ಸೌಲಭ್ಯ ಇರುವ ಪ್ರದೇಶದಲ್ಲಿದೆ. ವರ್ಷೇವರ್ಷೇ ನೀರಾವರಿ ಪ್ರದೇಶ ಹೆಚ್ಚಾಗುತ್ತಲಿದೆ. ೧೯೮೦-೮೧ರಲ್ಲಿ ೪೯,೬೦೦ ಹೆಕ್ಟೇರ್ ನೀರಾವರಿ ಸೌಲಭ್ಯವನ್ನು ಹೊಂದಿದ್ದರೆ ೧೯೮೭-೮೮ರಲ್ಲಿ ೭೭,೬೦೦ ಹೆಕ್ಟೇರ್ ಆಗಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಹಾಗೂ ವಿಶ್ವ ಬ್ಯಾಂಕ್ ಯೋಜನೆಯಲ್ಲಿ ಕಾಲುವೆಗಳನ್ನು ಕೋಡಿ ಪಂಪುಸೆಟ್ಟುಗಳನ್ನು ಅಳವಡಿಸಲಿಕ್ಕೆ ಹಣ ಒದಗಿಸುತ್ತಾ ಬಂದಿದ್ದೇವೆ. ಚಿತ್ರದುರ್ಗ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ಮತ್ತು ಹಿಪ್ಪುನೇರಳೆಯಲ್ಲಿ ನೀರಾವರಿ ಸೌಲಭ ಹೊಂದಿದ ಕೋಲಾರ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚು ಹೆಚ್ಚು ಪ್ರದೇಶ ನೀರಾವರಿ ಸೌಲಭ್ಯ ಹೊಂದಿರುವುದು ಕಂಡುಬಂದಿದೆ. ಅಲ್ಲಿ ಹೇಮಾವತಿ, ಕಬಿನಿ ನೀರಾವರಿ ಯೋಜನೆಗಳಲ್ಲಿ ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಹೆಚ್ಚಿನ ಸೌಲಭ್ಯ ಒದಗಿಸಲಿಕೆ ಅವಕಾಶ ಇದೆ. ಈ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಿಗೆ ಈ ವಿವರಣೆಯಿಂದ ಇದು ಗೊತ್ತಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಮಳೆಯ ಆಶ್ರಯದಲ್ಲಿ ಬೆಳೆಯಂತಕ್ಕಂಥ ರೇಷ್ಮೆಯನ್ನು ಹೆಚ್ಚು ಮಾಡಬೇಕು ಎಂದು ಹೇಳಿದ್ದಾರೆ. ಇದನ್ನು ಮಾಡಿದ್ದೇವೆ. ಮಳೆಯ ಆಶ್ರಯದಲ್ಲಿ ಬೆಳೆಯಂತಕ್ಕಂಥ ರೇಷ್ಮೆ ಉತ್ಪಾದನೆ ಹೆಚ್ಚಾಗುತ್ತಿದೆ. ಈ ಅಂಕಿಅಂಶಗಳಿಂದ ಇದು ಗೊತ್ತಾಗುತ್ತದೆ. ಮಳೆ ಆಶ್ರಯದಲ್ಲಿ ಬೆಳೆಯುವ ಎಕರೆ ಉತ್ಪನ್ನ ೬೪ ಕೆ.ಜಿ. ಗೂಡುಗಳು ಮತ್ತು ೬.೭೫ ಕೆ.ಜಿ. ರೇಷ್ಮೆ. ನೀರಾವರಿ ಯೋಜನೆ ಆಶ್ರಯದಲ್ಲಿ ಒಂದು ಎಕರೆ ಉತ್ಪಾದನೆಯಲ್ಲಿ ೧೯೨ ಕೆ.ಜಿ. ಗೂಡುಗಳು ಮತ್ತು ೨೦.೩೬ ಕೆ.ಜಿ. ರೇಷ್ಮೆ ಆಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆಯೆಂದು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ರೇಷ್ಮೆ ಇಲಾಖೆಯ ವರದಿಯನ್ನು ಸನ್ಮಾನ್ಯ ಸದಸ್ಯರು ಪೂರ್ಣವಾಗಿ ಅಧ್ಯಯನ ಮಾಡಿ ಅದರಲ್ಲಿ ಸೂಚ್ಯವಾದ ವಿವರಗಳನ್ನಾಗಲೀ, ವಿಷಯಗಳನ್ನಾಗಲೀ ಪೂರ್ಣವಾಗಿ ತಿಳಿದುಕೊಂಡು ಮನನಮಾಡಿ ಅದನ್ನು ಹೃದ್ಗತ ಮಾಡಿಕೊಂಡಿದ್ದಾರೆ ಎಂಬ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಹಿಂದಿನ ವರ್ಷಗಳ ವರದಿಗಳನ್ನು ನೋಡಿದರೆ ಕೈಗಾರಿಕಾ ಇಲಾಖೆಯ ಒಂದು ಭಾಗವಾಗಿ ರೇಷ್ಮೆ ಇಲಾಖೆಯನ್ನು ಪರಿಗಣಿಸಿ ಒಂದು ಸಣ್ಣ ಟಿಪ್ಪಣಿ ಮಾದರಿಯ ವರದಿಯನ್ನು ಕೊಡುತ್ತಿದ್ದರು. ನನಗೆ ಈ ಖಾತೆ ಬಂದಿದ್ದು ಹೋದ ತಿಂಗಳು ೫ನೇ ತಾರೀಕಿಗೆ. ಆದರೂ ಕೂಡ ಪ್ರತ್ಯೇಕವಾಗಿ, ರೇಷ್ಮೆ ಇಲಾಖೆಗೆ ಒಂದು ಪೂರ್ಣವಾದ ವರದಿಯನ್ನು, ವಿವರಣಾತ್ಮಕವಾದ ವರದಿಯನ್ನು ಕೊಡಬೇಕೆಂಬ ಉದ್ದೇಶದಿಂದ. ಅವರು ತಯಾರು ಮಾಡಿದ ವರದಿಯನ್ನು ಬದಲಾಯಿಸಿ, ಪೂರ್ಣ ವರದಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಬಹಳ ಶ್ರಮವಹಿಸಿ ಕೆಲಸ ಮಾಡಿದ್ದೀರಿ...

ಶ್ರೀ ಎ, ಲಕ್ಷ್ಮೀಸಾಗರ್.— ಶ್ರಮವಹಿಸಿ ಮಾಡಿದರೆ ಫಲ ಸಿಗುವುದು. ಶ್ರಮವಿಲ್ಲದೆ ಮಾಡುವ ಕೆಲಸದಿಂದ ಏನೂ ಪ್ರಯೋಜನ ಸಿಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ರಾಜೂಗೌಡರು ವಿಶ್ವಬ್ಯಾಂಕ್ ನೆರವಿನ ಬಗ್ಗೆ ಮಾತನಾಡಿದ್ದಾರೆ. ನಾನು ಕೆಲವು ಅಂಶಗಳನ್ನು ಪೂರ್ವಭಾವಿಯಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶ್ವಬ್ಯಾಂಕ್ ನೆರವಿನಲ್ಲಿ ಆಗಬೇಕಾದ ಕೆಲಸಗಳು ಬಹುಮಟ್ಟಿಗೆ ಮುಗಿದಿವೆ ಎಂದು ಪ್ರಾರಂಭದಲ್ಲೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಏನು ವರದಿ ಮಾಡಿದ್ದಾರೆ, ಅವುಗಳನ್ನು ಪರಿಶೀಲನೆ ಮಾಡಿದ್ದಾರೆ. ವಿಶ್ವಬ್ಯಾಂಕ್ ತಂಡದವರು ಬಂದು ಆಗಿರತಕ್ಕಂಥ ಕೆಲಸಗಳ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ ೧೦೦ಕ್ಕೆ ೯೫ಕ್ಕಿಂತಲೂ ಜಾಸ್ತಿ ಪ್ರಮಾಣದ ವಿಶ್ವಬ್ಯಾಂಕ್ ಯೋಜನೆಯ ಕೆಲಸಗಳು ಪೂರ್ಣಗೊಂಡಿವೆ. ಇನ್ನು ಉಳಿದಿರತಕ್ಕ ಕೆಲಸಗಳು ಎರಡು ಎಂದು ತಿಳಿಸಿದ್ದಾರೆ, ಮೊದಲನೆಯದು ಕೆಲವು ಕಟ್ಟಡಗಳು ಆಗಿಲ್ಲವೆಂದು ತಿಳಿದು ಬಂದಿದ್ದಕ್ಕೆ, ತನಿಖೆ ಮಾಡಿದಾಗ, ಕೋಲ್ಡ್ ಸ್ಟೋರೇಜ್ ಇರತಕ್ಕಂಥ ಕೆಲಸ ಮುಗಿದಿಲ್ಲವೆಂದು ಹೇಳಿದ್ದಾರೆ. ಸಿವಿಲ್ ಕೆಲಸ ಆಗಿದೆ, ಬಿಲ್ ಪಾವತಿ ಮಾಡಬೇಕಾಗಿದೆ. ಕೋಲ್ಡ್ ಸ್ಟೋರೇಜ್ ಬಗ್ಗೆ ನಾನಾ ಕಾರಣಗಳಿಂದ ಕೆಲಸ ಪೂರ್ಣವಾಗಿಲ್ಲ. ಇಷ್ಟನ್ನು ಬಿಟ್ಟರೆ, ಎಲ್ಲಾ ಕೆಲಸಗಳೂ ವಿಶ್ವಬ್ಯಾಂಕ್ ನೆರವಿನಿಂದ ಪೂರ್ಣವಾಗಿ ಆಗಿವೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಇವುಗಳ ಬಗ್ಗೆ ನನ್ನ ವರದಿಯಲ್ಲಿ ಪುಟ ೪ರಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸನ್ಮಾನ್ಯ ರಾಜೂಗೌಡರು, ಪುಟ್ಟಸ್ವಾಮಿಯವರು ತಮ್ಮ ಮಾತನ್ನು ಈ ರೇಷ್ಮೆ ಇಲಾಖೆಯ ಬಗ್ಗೆ ತಿಳಿಸಿದ್ದಾರೆ. ಅವರು ಏನು ಹೇಳುತ್ತಾರೆ ಎಂದರೆ, ಒಂದು ನೂರು ಕೋಟಿ ರೂಪಾಯಿಗಳ ವಿಶ್ವಬ್ಯಾಂಕ್ ನೆರವಿನ ಯೋಜನೆಯಿಂದ ರೇಷ್ಮೆ ಬೆಳೆಗಾರರಿಗೆ ಆದ ಸೌಲಭ್ಯ ಏನು, ಈ ಯೋಜನೆಯ ಪೂರ್ತಿ ಹಣವನ್ನು ಮಾರ್ಕೆಟ್ ಕಟ್ಟಡಗಳು,

ಪ್ರೈವೇಟ್ ಕಟ್ಟಡಗಳು, ವಾಹನ, ಸಿಬ್ಬಂದಿಗೆ ಖರ್ಚಾಗಿದೆ, ಶೇಕಡ, ೧೦ ಭಾಗ ಕೂಡ ರೇಷ್ಮೆಗೆ ಖರ್ಚು ಮಾಡಿಲ್ಲವೆಂದು ಟೀಕೆ ಮಾಡಿದ್ದಾರೆ ಅವರಿಗೆ ನನ್ನ ವರದಿಯನ್ನು ನೋಡಬೇಕೆಂದು ಈಗಾಗಲೇ ಹೇಳಿದ್ದೇನೆ. ಆ ವರದಿಯನ್ನು ಮತ್ತೆ ಓದಿ ಸಮಯವನ್ನು ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಹೇಳಿರುವ ಎರಡು ಮುಖ್ಯವಾದ ಅಂಶಗಳು, ವಿಶ್ವಬ್ಯಾಂಕ್ ನೆರವಿನಿಂದ ಬಂದಿರತಕ್ಕ ಹಣವನ್ನು ಹೆಚ್ಚಿಗೆ ಕಟ್ಟಡಗಳಿಗೆ ಮತ್ತೆ ಇನ್‌ಫ್ರಾಸ್ಟ್ರಚ್ಚರ್ ಎಂದು ಏನು ಹೇಳುತ್ತೇವೆ ಇಂಥಾದ್ದಕ್ಕೆ ಜಾಸ್ತಿ ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ. ಶೇಕಡ ೧೦ ಭಾಗ ಹಣವನ್ನು ರೇಷ್ಮೆ ಇಲಾಖೆಗೆ, ಹಿಪ್ಪುನೇರಳೆ ವ್ಯವಸಾಯಕ್ಕೆ ಖರ್ಚು ಮಾಡಿಲ್ಲವೆಂದು ಹೇಳಿದ್ದಾರೆ. ನಾನು ಅವರಿಗೆ ಉತ್ತರ ರೂಪವಾಗಿ, ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶ್ವಬ್ಯಾಂಕ್ ನೆರವಿನಿಂದ ನಮ್ಮ ಇನ್‌ಫ್ರಾಸ್ಟ್ರಕ್ಚರ್ ಬಲಪಡಿಸುವಂಥ ಕೆಲಸ ಇದರಲ್ಲಿ ಮುಖ್ಯವಾಗಿ ಅಡಕವಾಗಿರತಕ್ಕಂಥ ಅಂಶ. ಇನ್‌ಫ್ರಾಸ್ಟ್ರಕ್ಚರ್ ಬಲಪಡಿಸದ ಹೊರತು ರೇಷ್ಮೆ ಉತ್ಪಾದನೆ, ರೇಷ್ಮೆ ಉದ್ಯಮದ ಯಾವ ಕೆಲಸವೂ ಸರಿಯಾಗಿ ಆಗುವುದಕ್ಕೆ ಸಾಧ್ಯವಿಲ್ಲ. ಎನ್ನುವುದನ್ನು ಮಾನ್ಯ ರಾಜೂಗೌಡರು ಮಂತ್ರಿ ಪುಟ್ಟಸ್ವಾಮಿಯವರು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಈ ಕಾರಣಕ್ಕೋಸ್ಕರ ಈ ಹಣವನ್ನು ಖರ್ಚು ಮಾಡುವ ಉದ್ದೇಶ, ಇನ್‌ಫ್ರಾಸ್ಟ್ರಕ್ಚರ್ ಬಲಪಡಿಸುವುದು ಆ ಕೆಲಸ ನಡೆದಿದೆ. ಶೇಕಡ ೧೧ರಷ್ಟು ಕೂಡ ರೇಷ್ಮೆ ಇಲಾಖೆಗೆ ಹಿಪ್ಪುನೇರಳೆ ಬೆಳೆಯುವುದಕ್ಕೆ ಉಪಯೋಗಿಸಿಲ್ಲವೆಂದು ಹೇಳಿದ್ದಾರೆ. ಇದು ಅಷ್ಟು ಸಮಂಜಸವಾದ ಟೀಕೆಯಲ್ಲವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹಲವಾರು ಕೆಲಸಗಳು ನಡೆದಿವೆ. ವಿಶ್ವಬ್ಯಾಂಕ್ ನೆರವಿನ ಒಟ್ಟು ೧೧೧ ಕೋಟಿ ಯೋಜನೆಯಲ್ಲಿ, ೩೪ ಕೋಟಿ ರೂಪಾಯಿಗಳನ್ನು ಇನ್‌ಫ್ರಾಸ್ಟ್ರಕ್ಚರ್ ಸೌಲಭ್ಯಗಳಿಗೆ ಉಪಯೋಗಿಸಲಾಗಿದೆ. ಮುಖ್ಯವಾಗಿ ಬೆಳೆಗಾರರು ಹಳೆದ ಗೂಡುಗಳಿಗೆ ಬೇಕಾದ ಸ್ಥಳಾವಕಾಶ ಇರಲಿಲ್ಲ, ಅದಕ್ಕಾಗಿ ಮಾರುಕಟ್ಟೆ, ಕಟ್ಟಡಗಳನ್ನು ಕಟ್ಟಲಾಗಿದೆ. ಇದು ಇಲ್ಲದಿದ್ದರೆ ರೇಷ್ಮೆ ಬೆಳೆಗಾರರಿಗೆ ತೊಂದರೆಯಾಗುತ್ತಿತ್ತು. ಈಗ ಎಲ್ಲಾ ಕಡೆ

೧-೩೦ ಪಿ.ಎಂ.

ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗಿದೆ. ಇದನ್ನು ಈಗಾಗಲೇ ಹೇಳಿದ್ದೇನೆ. ರೇಷ್ಮೆ ಮೊಟ್ಟೆಗಳನ್ನು ತಯಾರಿಸಲು ಬೇಕಾದ ಸ್ಥಳಾವಕಾಶವನ್ನು ಮಾಡಿ ಅಲ್ಲಿ ನೈರ್ಮಲ್ಯತೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಈ ರೀತಿ ಬಿತ್ತನೆ ಕೋಠಿಗಳನ್ನು ಕಟ್ಟಲಾಗಿದೆ. ಈ ರೀತಿ ಮೊಟ್ಟೆಗಳನ್ನು ಅನಾರೋಗ್ಯಕರವಾದ ಪರಿಸ್ಥಿತಿಯಲ್ಲಿ ತಯಾರಿಸುವ ಬದಲು ಅದಕ್ಕಾಗಿ ಸೂಕ್ತ ಕಟ್ಟಡಗಳನ್ನು ಕಟ್ಟಲಾಗಿದೆ, ಇದರಿಂದ ರೇಷ್ಮೆ ಬೆಳೆಗಾರರಿಗೆ ನೇರವಾದ ಸೌಲಭ್ಯ ಒದಗಿದಂತಾಗಿದೆ. ಈ ಯೋಜನೆಯಲ್ಲಿ ವಿಸ್ತರಣಾ ಕೇಂದ್ರಗಳನ್ನು, ಚಾಕಿ ಸಾಗಾಣಿಕೆ ಕೇಂದ್ರಗಳನ್ನು ತೆರೆದು ಬೆಳೆಗಾರರಿಗೆ ನೇರವಾದ ಸೌಲಭ್ಯ ಒದಗುವಂತೆ ಮಾಡಲಾಗಿದೆ, ಉತ್ತಮ ಗುಣಮಟ್ಟದ ಹಿಪ್ಪುನೇರಳೆ ತಳಿಗಳಾದ ಎಂ.-೫, ಎಸ್. ೩೪ ಇವುಗಳನ್ನು ಹೆಚ್ಚು ಹೆಚ್ಚಾಗಿ ನಾಟಿ ಮಾಡಲು ಸೌಲಭ್ಯ ಒದಗಿಸಲಾಗಿದೆ. ಸ್ಥಳೀಯ ಹಿಪ್ಪುನೇರಳೆ ತಳಿಯನ್ನು ಉತ್ತಮ ತಳಿಗಳಿಂದ ಬದಲಾಯಿಸಲಾಗಿದೆ. ಸುಮಾರು ೪೧,೮೦೭ ಹೆಕ್ಟೇರ್ ಪ್ರದೇಶದಲ್ಲಿ ಬಹಳ ಉತ್ತಮ ಗುಣಮಟ್ಟದ ತಳಿಗಳನ್ನು ನೆಡಲಾಗಿದೆ. ಸುಮಾರು ಶೇಕಡಾ ೩೦ರಷ್ಟು ಇದು ಜಾಸ್ತಿಯಾಗಿದೆ. ಈ ಯೋಜನೆಯ ರೀತ್ಯಾ ಎಲ್ಲಾ ಕಾರ್ಯಕ್ರಮಗಳಿಗೆ ಸಿಬ್ಬಂದಿ ಅವಶ್ಯಕ. ಆದುದರಿಂದ ಬೇಕಾದ ಸಿಬ್ಬಂದಿಯನ್ನು ಒದಗಿಸಿಲಾಗಿದೆ. ವಿಸ್ತರಣಾ ಕಾರ್ಯಕ್ರಮದಲ್ಲಿ ಮುಖ್ಯವಾಗಿ ಹಳ್ಳಿಗಳಲ್ಲಿ ರೈತರ ಸಂಪರ್ಕ ಅವಶ್ಯಕ. ಇದಕ್ಕಾಗಿ ವಾಹನಗಳನ್ನು ಇಲಾಖಾ ಸಿಬ್ಬಂದಿಗೆ ಒದಗಿಸುವುದು ಅವಶ್ಯಕ. ಈ ರೀತಿ ಇನ್‌ಫ್ರಾಸ್ಟ್ರಕ್ಚರ್‌ಗಳನ್ನು ಹೆಚ್ಚು ಮಾಡಿ ಮುಂದಿನ ವಿಸ್ತರಣಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳತಕ್ಕಂಥ ದೊಡ್ಡ ಹೆಜ್ಜೆಯನ್ನು ಇಟ್ಟಿದ್ದೇವೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಯೋಜನೆಯ ಅನೇಕ ಕಾರ್ಯಕ್ರಮಗಳ ಪರಿಣಾಮವಾಗಿ ರಾಜ್ಯ ರೇಷ್ಮೆ ಉತ್ಪಾದನೆ ೨೯೦೦ ಟನ್ ಇದ್ದುದು ೪೯೦೦ ಟನ್ ಆಗಿದೆ. ಬರೇವ ಸಾಲುಗಳಲ್ಲಿ ೩೨೦೦ ಟನ್ ಉತ್ಪಾದನೆ ಗುರಿ ಇದೆ. ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚು ರೇಷ್ಮೆ ಉತ್ಪಾದನೆಯಾಗುವ ವಿಶ್ವಾಸ ಇದೆ. ಸನ್ಮಾನ್ಯ ರಾಜೂಗೌಡರು ಈ ಯೋಜನೆಯ ಶೇಕಡಾ ೧೦ ಭಾಗ ಹಣವನ್ನೂ ರೇಷ್ಮೆ ವ್ಯವಸಾಯಕ್ಕೆ ಉಪಯೋಗಿಸಿಲ್ಲ ಎಂದು ಏನು ಟೀಕೆ ಮಾಡಿದ್ದಾರೆ ಅದರಲ್ಲಿ ಅಷ್ಟು ಹುರುಳಿಲ್ಲ. ಅಷ್ಟು ಬಲ ಇಲ್ಲ. ರೇಷ್ಮೆ ಜಾಸ್ತಿ ಉತ್ಪಾದನೆಯಾಗಿರುವುದು ಇದನ್ನು ತೋರಿಸುತ್ತದೆ ಎಂದು ಹೇಳುತ್ತೇನೆ, ವಿಶ್ವಬ್ಯಾಂಕ್ ಯೋಜನೆಯಲ್ಲಿ ರೇಷ್ಮೆ ಉತ್ಪಾದನೆಯನ್ನು ಹೆಚ್ಚು ಮಾಡುವಂತಹ ಕೆಲಸ ಇದರಿಂದಾಗಿದೆ ಎನ್ನುವುದನ್ನು ನಾವು ಕಾಣಬಹುದು. ಇನ್ನೊಂದು ಸನ್ಮಾನ್ಯ

ರಾಜೂಗೌಡರು ಹೇಳಿರುವುದು ಏನೆಂದರೆ ನೆರೆರಾಜ್ಯವಾದ ತಮಿಳು ನಾಡಿನಲ್ಲಿ ೧೯೮೦–೮೧ರಲ್ಲಿ ೪೬೭೭ ಟನ್ ಇದ್ದ ರೇಷ್ಮೆ ಉತ್ಪಾದನೆ, ೧೯೮೬–೮೭ರಲ್ಲಿ ೮೫೦ ಟನ್ ಆಗಿದೆ, ಇದೇ ರೀತಿ ಆಂಧ್ರ ಪ್ರದೇಶದಲ್ಲಿ ಕೂಡಾ ಉತ್ಪಾದನೆ ಜಾಸ್ತಿಯಾಗಿದೆ, ಆದರೆ ಕರ್ನಾಟಕದಲ್ಲಿ ಜಾಸ್ತಿಯಾಗಿಲ್ಲ ಏತಕ್ಕೆ ಆಗಲಿಲ್ಲ ಎಂದು ಕೇಳಿದರು. ಆಂಧ್ರ ಪ್ರದೇಶದಲ್ಲಿ ೧೯೮೦–೮೧ರಲ್ಲಿ ೭೯೭ ಟನ್ ಇದ್ದುದು, ೧೯೮೬–೮೭ ರಲ್ಲಿ ೧೫೦೦ ಟನ್ ಆಗಿದೆ. ಕರ್ನಾಟಕದಲ್ಲಿ ಈ ಯೋಜನೆಯ ಪರಿಣಾಮದಿಂದ ರೇಷ್ಮೆ ಉತ್ಪಾದನೆಯಲ್ಲಿ ಏರಿಕೆಯಾಗಿರುವುದು ಗಮನಾರ್ಹವಾಗಿದೆ. ಎಕರೆ ಉತ್ಪಾದನೆಯಲ್ಲೂ ಜಾಸ್ತಿಯಾಗಿದೆ. ೧೯೮೬–೮೭ ರಲ್ಲಿ ೧೫೬೦ ಟನ್ ರೇಷ್ಮೆ ಉತ್ಪಾದನೆಯಾಗಿದೆ. ತಮಿಳುನಾಡು ಮತ್ತು ಆಂಧ್ರಪ್ರದೇಶಗಳು ಎಲ್ಲೋ ಹಿಂದೆ ಬಿದ್ದು ಹೋಗಿವೆ. ವಿಶ್ವಬ್ಯಾಂಕ್ ನೆರವನ್ನು ಪಡೆದುಕೊಂಡಿದ್ದರಿಂದ, ರೇಷ್ಮೆ ಉತ್ಪಾದನೆ ಜಾಸ್ತಿಯಾಗಿದೆ ಎಂಬ ಮಾತನ್ನು ನಾನು ಸಮರ್ಥವಾಗಿ ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ, ಎರಡನೇ ಯೋಜನೆಯ ಎರಡನೇ ಫೇಸನ್ನು ಅವರು ಈಗಾಗಲೇ ನೋಡಿದ್ದಾರೆ. ವಿಶ್ವಬ್ಯಾಂಕಿನವರು ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಉಳಿದಿರತಕ್ಕಂಥ ಕೆಲಸಗಳು ಈ ತಿಂಗಳ ಕೊನೆಯ ಒಳಗೆ ಆಗುತ್ತವೆ. ಎಲ್ಲಾ ಕೆಲಸಗಳೂ ಆಗಿದೆ ಎಂಬ ಮಾತನ್ನು ಹೇಳಿದ್ದೇನೆ. ಇದು ಆದಮೇಲೆ ವಿಶ್ವಬ್ಯಾಂಕ್ ನೆರವನ್ನು ಹೆಚ್ಚಾಗಿ ಖಾಸಗಿಯವರಿಗೆ ಉತ್ತೇಜನ ಕೊಡತಕ್ಕಂಥ ಕಾರ್ಯಕ್ರಮಗಳಿಗೆ ಅಳವಡಿಸಲಾಗಿದೆ. ಇದನ್ನು ನಾನು ಒತ್ತಿ ಹೇಳಬೇಕಾಗಿದೆ. ವಿಶ್ವಬ್ಯಾಂಕಿನ ನೆರವಿನ ಯೋಜನೆಯಲ್ಲಿ ಕಾರ್ಯಗತವಾಗುತ್ತಿರಕ್ಕಂಥ ಎಲ್ಲ ಕೆಲಸಗಳ ಪರಿಣಾಮ ಹೆಚ್ಚಾಗಿ ಖಾಸಗಿಯವರಿಗೆ ಉತ್ತೇಜನ ಕೊಡತಕ್ಕಂಥ ಒಂದು ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಖಾಸಗಿಯವರಿಗೆ ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಸ್ಥಾಪಿಸಲು ಸೌಲಭ್ಯ, ಖಾಸಗಿ ಮೊಟ್ಟೆ ತಯಾರು ಮಾಡುವವರಿಗೆ ಸೌಲಭ್ಯ, ಬೆಳೆಗಾರರಿಗೆ ಹಿಪ್ಪುನೇರಳೆ ನಾಟಿ ಮಾಡಲು ಬೇಕಾದ ಹಣದ ಸೌಲಭ್ಯ ಹುಳು ಸಾಕುವ ಮನೆಗಳನ್ನು ಕಟ್ಟಲು ಸಾಲ ಸೌಲಭ್ಯ ಬಾವಿಗಳನ್ನು ತೆಗೆಸಲು ಹಣದ ಸೌಲಭ್ಯ ಮಾಡಿಕೊಡತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇಂತಹ ಯೋಜನೆ, ವಿಶ್ವಬ್ಯಾಂಕ್‌ನ ಪರಿಶೀಲನಾ ಹಂತದಲ್ಲಿರುವುದರಿಂದ, ಉದ್ಯಮದಲ್ಲಿ ಅನುಭವಿಗಳಾದಂಥವರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕು. ಅವರ ಒಂದು ಸಲಹೆಯನ್ನು ನಾವು ಕೇಳಬೇಕು. ಬೆಳಗಾರರ ಸಲಹೆಯನ್ನು ಕೇಳಬೇಕೆಂದು ಮಾನ್ಯ ರಾಜುಗೌಡರು ಹೇಳಿದ್ದಾರೆ. ನಾವು ಅವರ ಸಲಹೆಯನ್ನು ಒಪ್ಪಿಕೊಂಡಿದ್ದೇವೆ. ಅವರನ್ನೂ ಕೂಡಾ ಕೇಳತಕ್ಕಂಥ ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ದೇವೆ.

ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ರಾಜೂಗೌಡರು ಮಾತನಾಡುತ್ತಾ ಹೇಳಿದರು ರೋಗಗ್ರಸ್ತ ಮೊಟ್ಟೆಗಳನ್ನು ಕೊಡದ ಹಾಗೆ ಒಂದು ವ್ಯವಸ್ಥೆ ಮಾಡಿದರೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ಅನುಕೂಲವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ವಾದವನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ ನಾವು ಏನು ಮಾಡಿದ್ದೇವೆಂದು ಈ ಸಮಯದಲ್ಲಿ ವಿವರಗಳನ್ನು ಕೊಡಬೇಕಾದದ್ದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ರೇಷ್ಮೆ ಬಿತ್ತನೆ ಕೋಠಿಗಳು ರೇಷ್ಮೆ ಬೆಳೆಗಾರರಿಗೆ ಮೊಟ್ಟೆಗಳನ್ನು ಒದಗಿಸುತ್ತಾರೆ. ಇವು ಕೆಲವು ಸಾರಿ ವಾತಾವರಣದ ಏರುಪೇರಿನಿಂದ ಹುಳುಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸಲು ಚಾಕಿ ಸಾಕಾಣಿಕೆ ಕೇಂದ್ರಗಳನ್ನು ರಾಜ್ಯದಲ್ಲಿ ಅಳವಡಿಸಲಾಗಿದ್ದು ರೋಗ ಹತೋಟಿ ಕಾರ್ಯಕ್ರಮಗಳನ್ನು ಅನುಸರಿಸಿದಲ್ಲಿ ಬೆಳೆ ನಷ್ಟವನ್ನು ತಪ್ಪಿಸಬಹುದು. ಹುಳು ಸಾಕಾಣಿಕೆಯಲ್ಲಿ ಆಧುನಿಕ ರೀತಿಯನ್ನು ಅನುಸರಿಸುವುದನ್ನು ಹಾಗೂ ರೋಗನಿಯಂತ್ರಣಕ್ಕಾಗಿ ಕ್ರಿಮಿನಾಶಕ ಸಿಂಪರಣಾ ಕಾರ್ಯಕ್ರಮವನ್ನು ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಹಾಕಿಕೊಳ್ಳಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟರಾಮಯ್ಯನವರೂ ಕೂಡ ಹೇಳಿದ್ದಾರೆ. ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ರೀತಿಯ ಬೃಹತ್ ಪ್ರಮಾಣದ ಸಿಂಪರಣಾ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಫಾರ್ಮಲಿನ್ ದ್ರಾವಕ ಮತ್ತು ಬ್ಲೀಚಿಂಗ್ ಪೌಡರ್ ಕ್ರಿಮಿನಾಶಕಗಳನ್ನು ಉಪಯೋಗಿಸಲಾಗುತ್ತಿದೆ. ಇದರ ಪರಿಣಾಮವಾಗಿ ರೇಷ್ಮೆ ಹುಳುಗಳು ರೋಗಕ್ಕೆ ತುತ್ತಾಗುವುದನ್ನು ತಪ್ಪಿಸಿ ಬೆಳೆ ನಷ್ಟವನ್ನು ತಡೆಗಟ್ಟಬಹುದಾಗಿದೆ. ಸನ್ಮಾನ್ಯ ಅಧ್ಯಕ್ಷರೇ ಇನ್ನೊಂದು ವಿಚಾರವನ್ನು ಮಾನ್ಯ ರಾಜೂಗೌಡರು ಪ್ರಸ್ತಾಪ ಮಾಡಿದ್ದಾರೆ ಅದೇನೆಂದರೆ ರೇಷ್ಮೆ ಬೆಳೆ ವಿಮಾ ಯೋಜನೆ ಬಗ್ಗೆ. ಕರ್ನಾಟಕ ರಾಜ್ಯದಲ್ಲಿ ಬೈವೋಲ್ಟೀನ್ ರೇಷ್ಮೆ ಬೆಳೆಗೆ ವಿಮಾ ಯೋಜನೆಯನ್ನು ಅಳವಡಿಸಲಾಗಿದೆ. ಇದಕ್ಕೆ ಸಾಕಷ್ಟು ಪೂರಕವಾಗಿ ಸಹಾಯಕವಾದ ಕೆಲಸ ರೈತರಿಂದ ಬರಲಿಲ್ಲ. ಸರಿಯಾಗಿ ಕಂತುಗಳನ್ನು ಕಟ್ಟಲಿಲ್ಲ. ಇದರಲ್ಲಿ ದುರುಪಯೋಗ

ಹಾಗುತ್ತಿದೆ ಎನ್ನುವ ದೂರುಗಳು ಬಂದಿದ್ದರಿಂದ ಅದನ್ನು ಈಗ ಕೈಬಿಡಲಾಗಿದೆ. ಅದಕ್ಕೆ ರೈತರು ಹೊಂದಾಣಿಕೆಯಾದರೆ, ಸಹಾಯ ಮಾಡಿದರೆ ಆ ಯೋಜನೆಯನ್ನು ನಾವು ಮುಂದುವರಿಸುತ್ತೇವೆ. ಈ ಎಲ್ಲಾ ಕಾರ್ಯಕ್ರಮಗಳನ್ನೂ ಇಲಾಖೆ ಹಾಕಿಕೊಂಡಿದೆ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ ಸನ್ಮಾನ್ಯ ರಾಜೂಗೌಡರು ಮಾತನಾಡುತ್ತಾ ಬೈವೋಲ್ಟೀನ್ ರೇಷ್ಮೆ ಗೂಡುಗಳ ಉತ್ಪಾದನಾ ಗುರಿಯನ್ನು ಸಾಧಿಸಲಾಗದಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ ಬೈವೋಲ್ಟಿನ್ ರೇಷ್ಮೆ ತಳಿಯನ್ನು ಹೆಚ್ಚು ಮಾಡಬೇಕೆನ್ನುವ ಗುರಿ ನಮ್ಮದು ಇದ್ದರೂ ಸಹ ನಾನಾ ಕಾರಣಗಳಿಂದ ಅದು ಸಾಧ್ಯವಾಗಲಿಲ್ಲ. ಆದರೆ ಇದರಲ್ಲಿ ನಾವೇನು ಅಪಜಯಪಟ್ಟಿಲ್ಲವೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಸಾವಿರ ಮೆಟ್ರಿಕ್ ಟನ್ ಉತ್ಪಾದನಾ ಗುರಿಯನ್ನು ಹಾಕಿಕೊಂಡಿದ್ದರೂ ಬೈವೋಲ್ಟೀನ್ ತಳಿ ಉತ್ಪಾದನೆ ನೂರು ಮೆಟ್ರಿಕ್ ಟನ್‌ಗಿಂತ ಹೆಚ್ಚಾಗಲಿಲ್ಲ. ಇದಕ್ಕೆ ಕಾರಣಗಳು ಹಲವಾರು ಇವೆ. ಅದರಲ್ಲಿ ಕೆಲವು ಕಾರಣಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೈವೋಲ್ಟಿನ್ ಉತ್ಪಾದನಾ ಕಾರ್ಯಕ್ರಮದಲ್ಲಿ ನಿರೀಕ್ಷಿತ ಗುರಿ ಸಾಧಿಸಲು ಸಾಧ್ಯವಾಗಲಿಲ್ಲ. ಆದರೆ ಇದು ಒಂದು ಸಂಪೂರ್ಣ ಅಪಜಯವೂ ಇಲ್ಲ. ವಾಣಿಜ್ಯ ಬೆಳಗಳಿಗಾಗಿ ಉಪಯೋಗಿಸುವ ಮಿಶ್ರ ತಳಿ ಮೊಟ್ಟೆ ತಯಾರಿಕೆಯಲ್ಲಿ ಬೇಕಾದ ಬಿತ್ತನೆ ಗೂಡುಗಳ ಉತ್ಪಾದನೆಯನ್ನು ಸಾಕಷ್ಟು ಮಾಡಲಾಗುತ್ತಿದೆ. ಆದರೆ ನೂಲು ಬಿಚ್ಚಲು ಬೇಕಾದ ಗೂಡುಗಳನ್ನು ಬೆಳೆಯಲಾಗದೇ ಇದ್ದರೂ ಸಹ ರಾಜ್ಯದ ರೇಷ್ಮೆ ಉತ್ಪಾದನಾ ಗುರಿಯನ್ನು ಮುಟ್ಟಲು ಅನುಕೂಲವಾಗಿದೆ. ಬೈವೋಲ್ಟಿನ್ ತಳಿ ಬೈವೋಲ್ಟಿನ್ ರೇಷ್ಮೆ ಮಲ್ಟಿವೋಲ್ಟಿನ್ ರೇಷ್ಮೆಗಿಂತ ಉತ್ತಮವಾಗಿದೆ. ಆದರೆ ರೇಷ್ಮೆ ಬೆಳೆಗಾರರ ಬೈವೋಲ್ಟಿನ್ ತಳಿಗಳನ್ನು ಸಾಕಲು ಬೇಕಾದ ಸ್ಥಳಾವಕಾಶ ಕ್ರಿಮಿನಾಶಕ ಸಲಕರಣೆಗಳು ಮುಖ್ಯವಾಗಿ ಉತ್ತಮ ಹಿಪ್ಪುನೇರಳೆ ತೋಟ ಈ ಅವಶ್ಯಕತೆಗಳನ್ನು ಹೊಂದಿರುವುದಿಲ್ಲ. ಇದರಿಂದಾಗಿ ನಿರೀಕ್ಷಿತ ಗುರಿ ಮುಟ್ಟಿಲ್ಲ ಎನ್ನುವುದು ವೇದ್ಯವಾಗುತ್ತದೆ. ಇಲಾಖೆಯವರು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಂದು ಹೇಳುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಬೈವೋಲ್ಟಿನ್ ರೇಷ್ಮೆ ಉತ್ಪಾದನೆಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಲ್ಲಿ ಮುಖ್ಯವಾಗಿ...

SRI U. BHUPATHI.—I am on a Point of Order. The Minister is almost reading the written speech in the House.

SRI A. LAKSHMISAGAR.—I am only trying to minimise the time. Only the points that are made out and that should be stated correctly are being read.

SRI U. BHUPATHI.—He is almost reading.

SRI A. LAKSHMISAGAR.—I am not reading the speech. There is no written speech. I can tell you it very frankly and very confidently.

ಉಪಾಧ್ಯಕ್ಷರು.—ಅದು ಅಲ್ಲ ಬಿಡಿ.

ಶ್ರೀ ಯು. ಭೂಪತಿ.—ಆ ರೀತಿ ಓದುವುದಕ್ಕೆ ಆಗುವುದಿಲ್ಲ. ದಯಮಾಡಿ ತಾವು ಹೇಳಿ. ಅವರು ರೆಫರೆನ್ಸ್ ಮಾಡಿದರೆ ನನ್ನದೇನೂ ಅಭ್ಯಂತರವಿಲ್ಲ. ಅವರು ಓದುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವೇನು ಹೇಳಿದ್ದೀರೋ ಅದಕ್ಕೆ ಉತ್ತರ ಹೇಳಲು ಕಂಠಪಾಠ ಮಾಡಿಕೊಂಡು ಬಂದು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಯು. ಭೂಪತಿ.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ರೇಷ್ಮೆ ಅಭಿವೃದ್ಧಿಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದರೆ.

ಶ್ರೀ ಯು. ಭೂಪತಿ.—ಮಾನ್ಯ ಉಪಾಧ್ಯಕ್ಷರೇ, ನಾನು ಹೇಳಿದ್ದಕ್ಕೆ ತಾವು ಏನೂ ಹೇಳಲಿಲ್ಲ.

ಉಪಾಧ್ಯಕ್ಷರು.—ಅವರು ಓದುತ್ತಿಲ್ಲ. ರೆಫರ್ ಮಾಡಿ ಹೇಳುತ್ತಿದ್ದಾರೆ ಅಷ್ಟೇ.

SRI U. BHUPATHI.—There is no provision to read speeches. Hon'ble Minister is reading a speech. It is a prepared speech.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಪ್ರಿಪೇರ್ಡ್ ಸ್ಪೀಚ್‌ನ್ನು ಓದುತ್ತಿಲ್ಲ. ನಾನು ಹೇಳುವುದನ್ನು ಸ್ವಲ್ಪ ಕೇಳಿಕೊಳ್ಳಿ. ಇಲ್ಲಿ ಟೀಕಾಕಾರರು ಇದ್ದಾರೆಂದು ನನಗೂ ಗೊತ್ತಿದೆ. ಅದನ್ನು ಗಮನದಲ್ಲಿ ಇಟ್ಟುಕೊಂಡಿರುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.—ಬೇರೆ ಎಲ್ಲಾ ವಿಚಾರದಲ್ಲಿ ಬೃಹಸ್ಪತಿ ತರ ಮಾತನಾಡುತ್ತೀರಿ. ಈ ವಿಚಾರದಲ್ಲಿ ಏಕೆ ಹೇಳುತ್ತಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಬೃಹಸ್ಪತಿ ಅಲ್ಲವೆಂದು ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದೇನೆ. ನಾನು ಬೃಹಸ್ಪತಿ ಎಂದು ಮಾನ್ಯ ಪಟಮಕ್ಕಿ ರತ್ನಾಕರ್‌ರವರು ತಿಳಿದುಕೊಂಡಿದ್ದರೆ, ಅವರು ಕಲ್ಪನಾಲೋಕದಲ್ಲಿ ಇರಬಹುದೇ ಹೊರತು ಬೇರೆ ಕಡೆಯಲ್ಲ. ಬದುಕಿರತಕ್ಕಂಥವರು ಬೃಹಸ್ಪತಿಗಳಾಗುವುದಕ್ಕೆ ಸಾಧ್ಯವಿಲ್ಲ. ಭೂಪತಿಯವರಿಗೆ ನಾನು ಕೆಲವು ಕಾರಣಗಳನ್ನು ಪಟ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ. ನಾನು ಪಟ್ಟಿ ಮಾಡಿಕೊಂಡು ಬಂದಿರುವ ವಿಷಯವನ್ನು ಬಾಯಿಪಾಠ ಮಾಡಿಕೊಂಡು ಹೇಳುವುದಕ್ಕೆ ಆಗುವುದಿಲ್ಲವಾದ್ದರಿಂದ ಕೆಲವನ್ನು ನೋಡಿಕೊಂಡು ಹೇಳಿದ್ದೇನೆ. ನಾನು ಯಾವ ವಿಷಯಗಳನ್ನು ನೋಟ್ ಮಾಡಿಕೊಂಡು ಬಂದಿದ್ದೇನೋ ಅವುಗಳನ್ನು ಮಾತ್ರ ಓದುತ್ತೇನೆ. ಇದು ಪ್ರಿಪೇರ್ಡ್ ಸ್ಪೀಚ್ ಅಲ್ಲ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮೀಸಾಗರ್‌ರವರು ಈಗಾಗಲೇ ಓದಿರುವ ವಿಷಯಗಳಲ್ಲಿ ಎರಡು ಪ್ಯಾರಾಗಳನ್ನು ರೆಕಾರ್ಡ್‌ನಿಂದ ತೆಗೆದು ನೋಡಿ. ಅವುಗಳು ಪ್ರಿಪೇರ್ಡ್ ಸ್ಪೀಚ್ ತರಹವೇ ಇದೆ.

ಉಪಾಧ್ಯಕ್ಷರು.—ಅವರು ಓದುತ್ತಿಲ್ಲ.

ಶ್ರೀ ಯು. ಭೂಪತಿ.—ಅವರು ಓದುತ್ತಿಲ್ಲವೆ ? ತಾವು ಸ್ವಲ್ಪ ಗಮನ ಕೊಟ್ಟು ನೋಡಿ, ಮಾನ್ಯ ಲಕ್ಷ್ಮೀಸಾಗರ್‌ರವರು ಯಾವಾಗಲೂ ಪ್ರಿಪೇರ್ಡ್ ಸ್ಪೀಚ್‌ನ್ನು ಓದಿದ್ದನ್ನು ನಾನು ನೋಡಿಲ್ಲ. ಇವತ್ತು ಮಾತ್ರ ಪ್ರಿಪೇರ್ಡ್ ಸ್ಪೀಚ್‌ನ್ನು ಓದಿರುವುದನ್ನು ನೋಡಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ರಿಟರ್ನ್ ಸ್ಪೀಚ್ ಅಲ್ಲ. ಕೆಲವು ಕಾರಣಗಳನ್ನು ಓದಿ ಹೇಳಬೇಕಾಗುತ್ತದೆ. ಓದಿ ಹೇಳದೆ ಬೇರೆ ಮಾರ್ಗ ಇಲ್ಲ. There is no prohibition under the rules to refer to some points and some matters. There is no prohibition. That is exactly what I am doing...

ಸ್ವಾಮಿ, ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂಬುದನ್ನೆಲ್ಲಾ ಬಾಯಿಪಾಠ ಮಾಡಿ ಹೇಳುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ನಾವು ಹಾಕಿಕೊಂಡಿರುವ ಕಾರ್ಯಕ್ರಮಗಳು ಎಂದರೆ, ರೇಷ್ಮೆ ಹುಳುಗಳನ್ನು ಸಾಕತಕ್ಕ ಮನೆಗಳನ್ನು ಸರಿಯಾದ ರೀತಿಯಲ್ಲಿ ಕಟ್ಟುವುದು, ಸರ್ಕಾರದ ವತಿಯಿಂದ ಚಾಕಿ ಕೇಂದ್ರಗಳನ್ನು ಸ್ಥಾಪಿಸಿ, ಈ ಚಾಕಿ ಕೇಂದ್ರಗಳಲ್ಲಿ ಮರಿಗಳನ್ನು ಬೆಳೆಸಿಕೊಡುವುದು, ಬೈವೋಲ್ಟಿನ್ ತಳಿಗಳನ್ನು ಹೇಗೆ ಸಾಕುವುದು ಎಂಬುದನ್ನು ರೈತರಿಗೆ ತಿಳಿಸಿಕೊಡುವುದು, ರೇಷ್ಮೆ ಬೆಳೆಗಳಿಗೆ ವಿಮಾ ಯೋಜನೆಯನ್ನು ಮಾಡುವುದು. ಬೈವೋಲ್ಟೀನ್ ತಳಿ ರೇಷ್ಮೆ ಬೆಳೆಯತಕ್ಕ ರೈತರುಗಳಿಗೆ ಬೋನಸ್ ಕೊಡುವುದು ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ, ಈ ಕಾರ್ಯಕ್ರಮಗಳು ಪೂರ್ಣವಾಗಿ ಫಲಪ್ರದವಾಗುವುದಕ್ಕೆ ಇನ್ನೂ ಸಾಕಷ್ಟು ಸಮಯ ಬೇಕಾಗುತ್ತದೆ. ಆದರೂ ಈ ಎಲ್ಲಾ ಕಾರ್ಯಕ್ರಮಗಳನ್ನೂ ಮಾಡಬೇಕೆಂದು ಪ್ರಯತ್ನ ಮಾಡಿದ್ದೇವೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ, ರೇಷ್ಮೆ ಅಭಿವೃದ್ಧಿಗೆ ಅವಶ್ಯಕವಾಗಿ ಬೇಕಾಗಿರುವ ಶೈತ್ಯಾಗಾರಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಇವುಗಳನ್ನು ಸ್ಥಾಪನೆ ಮಾಡುವುದಕ್ಕೆ ನಾವು ಹೊರಟಿದ್ದೇವೆ. ಆಮೇಲೆ ಸಂಶೋಧನಾ ಕೇಂದ್ರಗಳ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಧರ್ಮಸಿಂಗ್.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಇದು ಹೊಸ ಖಾತೆಯಾಗಿರುವುದರಿಂದ ಎಲ್ಲಾ ವಿಷಯಗಳನ್ನೂ ಸರಿಯಾಗಿ ಹೇಳುವುದಕ್ಕಾಗುತ್ತಿಲ್ಲ ಅದಕ್ಕೇ ಮಾನ್ಯ ಭೂಪತಿಯವರು, ಲಕ್ಷ್ಮೀಸಾಗರ್‌ರವರು ರಿಟನ್ ಸ್ಪೀಚ್ ಮಾಡುತ್ತಿದ್ದಾರೆಂದು ಹೇಳಿದ್ದು. ರೇಷ್ಮೆ ಇಲಾಖೆಯು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಅಡಿಷನಲ್ ಆಗಿ ಹೊಸದಾಗಿ ಕೊಟ್ಟಿರುವುದರಿಂದ ಸರಿಯಾಗಿ ಉತ್ತರ ಹೇಳುವುದಕ್ಕಾಗುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಸಂಶೋಧನಾ ಕೇಂದ್ರಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಕೆಲವು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಮಾನ್ಯ ಧರ್ಮಸಿಂಗ್‌ರವರು ಈ ಇಲಾಖೆ ಮೇಲೆ ಚರ್ಚೆ ನಡೆದಾಗ ಇರಲೇ ಇಲ್ಲ. ಈಗ ಏನೋ ಸಮಾಧಾನದಿಂದ ಕುಳಿತಿದ್ದಾರೆ. ಮಾನ್ಯ ಖರ್ಗೆಯವರು ಮಾತ್ರ ಯಾವಾಗಲೂ ಮಾನ್ಯ ಧರ್ಮಸಿಂಗ್‌ರವರು ಈ ಇಲಾಖೆಯ ಮೇಲಿನ ಚರ್ಚೆಯನ್ನು ಕೇಳಿರಲಿಲ್ಲ. ಇವೊತ್ತು ಬಂದು ಕುಳಿತಿದ್ದಾರೆ ಅಷ್ಟೆ. ಸಮಾಧಾನದಿಂದ ಎಲ್ಲವನ್ನೂ ಕೇಳಲಿ ಎಂದು ನನ್ನ ಇಚ್ಛೆ.

ಶ್ರೀ ಧರ್ಮಸಿಂಗ್.—ರಾಜೂಗೌಡರು ಮಾತನಾಡುವಾಗ ನಾನು ಇದ್ದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ತಾವು ಇಲಾಖೆಯ ಚರ್ಚೆಯನ್ನು ಕೇಳಿರಲಿಲ್ಲ. ಖರ್ಗೆಯವರು ಯಾವಾಗಲೂ ಇದ್ದರು. ಇನ್ನು ಮುಖ್ಯ ವಿಷಯಕ್ಕೆ ಬರುತ್ತಾ ಈ ಕೃಷಿಯ ಬಗ್ಗೆ ಸಂಶೋಧನೆಯ ಕೆಲಸ ಏನೂ ನಡೆಯುತ್ತಾ ಇಲ್ಲ ಎಂದು ಹೇಳಿದ್ದಾರೆ. ಈ ಸಂಶೋಧನೆಯ ಕೆಲಸವು ಸ್ವಲ್ಪ ವಿಳಂಬದ ಕೆಲಸವಾಗಿದೆ. ಆದರೆ ಮೂಲ ಭೂತವಾಗಿ ಈ ಕೆಲಸ ಹೊಸ ತಳಿಗಳನ್ನು ಸೃಷ್ಟಿ ಮಾಡುವುದರಲ್ಲಿ ಅವುಗಳನ್ನು ಫೀಲ್‌ಟ್ರಯಲ್ ಮೂಲಕ ಯಶಸ್ವಿ ಆಗುತ್ತದೆಯೋ ಇಲ್ಲವೋ ಎಂಬುದನ್ನು ಅವರು ಮಾಡುತ್ತಾ ಇದ್ದಾರೆ. ವಿಶ್ವವಿದ್ಯಾನಿಲಯಗಳಲ್ಲಿ ಈ ಬಗ್ಗೆ ಕೆಲಸ ನಡೆಯುತ್ತಾ ಇದೆ ಬೆಂಗಳೂರು ಮೈಸೂರು ಮತ್ತು ಕೃಷಿ ವಿಶ್ವವಿದ್ಯಾನಿಲಯ ಮತ್ತು ತಲಗಟ್ಟಪುರದಲ್ಲಿರತಕ್ಕಂಥ ಸಂಶೋಧನ ಕೇಂದ್ರದಲ್ಲಿ ಕೆಲಸ ನಡೆಯುತ್ತಾ ಇದೆ. ಸಂಶೋಧನ ಕೆಲಸದ ಪೂರ್ಣ ಅನುಕೂಲ ಮತ್ತು ಅದರಿಂದ ಬರತಕ್ಕಂಥ ಅನುಕೂಲ ಬೇಗ ಸಿಗುವುದಿಲ್ಲ. ಒಂದು ವೇಳೆ ಸರಿ ಎಂದು ಹೇಳಿದರೂ ಕೂಡ ಆ ಸಂಶೋಧನೆಯ ಫಲ ರೈತರಿಗೆ ಸಮಾಧಾನಕರವಾಗಿ ಅದನ್ನು ಕಾರ್ಯಗತ ಮಾಡುವುದಕ್ಕೆ ಅವರಿಗೆ ಭರವಸೆ ಬರುವಷ್ಟು ಸಮಯ ಬೇಕಾಗುತ್ತದೆ. ಆದುದರಿಂದ ಈ ಕೆಲಸವು ಸ್ವಲ್ಪ ನಿಧಾನವಾಗುತ್ತದೆ. ಆದರೆ ಸಂಶೋಧನೆಯ ಕೆಲಸ ಆಗುತ್ತಾ ಇಲ್ಲ ಎಂದು ಹೇಳುವುದು ಅಷ್ಟು ಸಮರ್ಪಕವಾದ ವಾದ ಅಲ್ಲ ಎಂದು ಹೇಳುತ್ತೇನೆ. ಇನ್ನು ರೇಷ್ಮೆಗೂಡಿನ ವಹಿವಾಟಿನ ಬಗ್ಗೆ ರಾಜೂಗೌಡರು ಹೇಳಿದ್ದಾರೆ ಅಂದರೆ ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ಎಲ್ಲಾ ರೇಷ್ಮೆಗೂಡಿನ ಮತ್ತು ಅದರಿಂದ ಬರತಕ್ಕಂಥ ರೇಷ್ಮೆನೂಲಿನ ಎಲ್ಲಾ ಭಾಗಗಳೂ ಮಾರುಕಟ್ಟೆಗೆ ಬರುತ್ತಾ ಇಲ್ಲ ಶೇಕಡ ೬೦ರಷ್ಟು ಮಾತ್ರ ಬರುತ್ತಾ ಇದೆ, ಮಿಕ್ಕಿದ್ದು ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರುತ್ತಾ ಇಲ್ಲ ಎಂದು ಹೇಳಿದ್ದಾರೆ. ಆ ಮಾತು ಸ್ವಲ್ಪ ಹೆಚ್ಚೂ ಕಡಿಮೆ ವಾಸ್ತವಾಂಶಗಳಿಂದ ಕೂಡಿದೆ, ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ ನಮ್ಮಲ್ಲಿ ೪೯೦೦ ಮೆಟ್ರಿಕ್ ಟನ್ ನಷ್ಟು ಕಕೂನ್ಸ್ ಬರುತ್ತರ. ಆದರೆ ನಮಗೆ ಲೆಕ್ಕಕ್ಕೆ ಸಿಗುವುದು ೩ ಸಾವಿರ ಮೆಟ್ರಿಕ್ ಟನ್‌ಗಳಷ್ಟು ಮಾತ್ರ. ೧೯೦೦ ಮೆಟ್ರಿಕ್‌ಗಳಷ್ಟು ಉತ್ಪಾದಿಸಿದ ರೇಷ್ಮೆಯು ಲೆಕ್ಕಕ್ಕೆ ಸಿಗುತ್ತಾ ಇಲ್ಲ. ಬೆಳೆದ ರೇಷ್ಮೆ ವಿನಿಮಯ ಕೇಂದ್ರದ ಮೂಲಕವೇ ಹೊರಗಡೆ ಬರಬೇಕು, ಮಾರಾಟವಾಗಬೇಕು ಎಂಬ ನಿಯಮವು ಇದೆ. ಆದರೆ ಈ ಶೇಕಡ ೪೦ರಷ್ಟು ರೇಷ್ಮೆ ಲೆಕ್ಕಕ್ಕೆ ಸಿಗುತ್ತಾ ಇಲ್ಲ. ಆದ್ದರಿಂದ ಅದು ಹೊರಗಡೆ ಹೋಗುತ್ತಾ ಇದೆ ಎಂದು ವೇದ್ಯವಾಗುತ್ತದೆ. ಈ ಬಗ್ಗೆ ಸಾಕಷ್ಟು ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಉಸ್ತುವಾರಿ ಕೆಲಸಗಳು ನಡೆಯುತ್ತಾ ಇದೆ. ಇದನ್ನು ಉಲ್ಲಂಘಿಸಿದವರ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆಯೂ ನಿಯಮಗಳು ಇವೆ. ರೇಷ್ಮೆ ಗೂಡನ್ನು ಮತ್ತು ನೂಲು ತೆಗೆದವರು. ನೇರವಾಗಿ ವಿನಿಮಯ ಕೇಂದ್ರಕ್ಕೆ ಹೋಗಬೇಕೆಂದು ಕಾನೂನು ಇದ್ದರೂ ಕೂಡ ಅದನ್ನು ತಪ್ಪಿಸಿಕೊಂಡವರ ಮೇಲೆ ಕಠಿಣ ಕ್ರಮವನ್ನು ಹಾಕಿಕೊಂಡಿದ್ದೇವೆ. ಕೇಸ್‌ನ್ನು ಹಾಕಿದ್ದೇವೆ. ಮತ್ತು ಇದಕ್ಕೆ ನೂಲು ಬಿಚ್ಚುವವರ ಮಟ್ಟದಲ್ಲಿ ಈ ರೇಷ್ಮೆ ಮಾರುಕಟ್ಟೆಗೆ ಮತ್ತು ವಿನಿಮಯ ಕೇಂದ್ರಕ್ಕೆ ಬರುವುದು ತಪ್ಪಿಹೋಗುತ್ತದೆ ಎಂಬ ಚಿತ್ರ ಕಾಣುತ್ತಾ ಇದೆ. ನಮ್ಮ ಕಡೆಯಿಂದ ಆಗುವ ಬಿಗಿಯಾದ ಕೆಲಸವನ್ನೆಲ್ಲಾ ನಡೆಸಿದ್ದೇವೆ. ಆದರೆ ಇದರಿಂದ ಶೇಕಡ ನೂರರಷ್ಟು ಅನುಕೂಲವಾಗಲಿಲ್ಲ ಎಂಬ

ಮಾತು ನಿಜ. ಅದಕ್ಕೆ ಎಲ್ಲೆಲ್ಲಿ ರೇಷ್ಮೆ ಬೆಳೆಯು ಹೆಚ್ಚಾಗಿ ಬರುತ್ತದೋ, ಆ ಭಾಗದ ಶಾಸಕರ ಸಹಕಾರ, ಸಹಾಯ ಅಗತ್ಯ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ, ಮತ್ತು ಅವರಲ್ಲಿ ಈ ಕುರಿತು ಮನವಿಯನ್ನು ಕೂಡ ಮಾಡಿಕೊಳ್ಳುತ್ತೇನೆ.

ಇನ್ನು ಊಜಿ ನೊಣದ ಹಾವಳಿ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ವ್ಯಾಪಕವಾದಂಥ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ರೇಷ್ಮೆ ಬೆಳೆಯತಕ್ಕಂಥವರಿಗೆ ಈ ಬಗ್ಗೆ ತಿಳುವಳಿಕೆ ನೀಡುವುದು, ರೇಡಿಯೋ ಮತ್ತು ಪುಸ್ತಕಗಳ ಮೂಲಕ ಸೂಕ್ತ ಸಲಹೆ ಮತ್ತು ಮಾಹಿತಿಗಳನ್ನು ನೀಡುವುದು, ಚಲನಚಿತ್ರಗಳನ್ನು ಈ ಕುರಿತಾಗಿ ತೋರಿಸುವುದು ಮುಂತಾದ ಕಾರ್ಯಕ್ರಮಗಳ ಮೂಲಕ ಊಜಿ ನೊಣಗಳ ನಿಯಂತ್ರಣವನ್ನು ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಹಾಗೆಯೇ ರೈತರಿಗೆ ನೈಲಾನ್ ಪರದೆಯನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ, ೧೯೮೭-೮೮ನೇ ಸಾಲಿನಲ್ಲಿ ೭.೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೈಲಾನ್ ಪರದೆಗಳನ್ನು ಶೇಕಡಾ ೬೦ರಷ್ಟು ಸಬ್ಸಿಡಿ ಕೊಟ್ಟು ಜನರಿಗೆ ಕೊಟ್ಟಿದ್ದೇವೆ. ಇದರಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆ ಕಂಡುಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ನೊಣದ ಕಾಟ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೭೨.೧೪ ಲಕ್ಷ ರೂಪಾಯಿಗಳನ್ನು ನಿಯಂತ್ರಣ ಕೆಲಸಕ್ಕಾಗಿ ಉಪಯೋಗಿಸಲಾಗಿದೆ. ಇದರ ಜೊತೆಗೆ ಯೂಜಿಸೈಡ್ ಔಷಧಿಗಳನ್ನು ಕೂಡ ಕಂಡುಹಿಡಿದಿದ್ದಾರೆ. ಆದರೆ ಅದರ ಉಪಯೋಗ ರೈತರಿಗೆ ಸರಿಯಾಗಿ ಆಗುತ್ತದೆ ಎಂಬ ಮನವರಿಕೆ ಇನ್ನೂ ಆಗಿಲ್ಲ. ಆ ಕೆಲಸವನ್ನು ಮಾಡತಕ್ಕಂಥ ಪ್ರಯತ್ನಗಳು ನಡೆದಿವೆ,

ಶ್ರೀ ಎ. ಲಕ್ಷ್ಮೀಸಾಗರ್.—ರಾಜೂಗೌಡರು ರೇಷ್ಮೆ ವಿನಿಮಯ ಕೇಂದ್ರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪಂಡಿತರ ಪರಿಣಿತರ ಒಂದು ಸಲಹಾ ಸಮಿತಿ ರಚನೆ ಮಾಡಬೇಕೆಂದರು. ಈ ಸಲಹಾ ಸಮಿತಿಯನ್ನು ರಚನೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಷ್ಟು ದಿವಸದಲ್ಲಿ ಮಾಡುತ್ತೀರಿ ಎಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.— ಇದರಲ್ಲಿ ರೇಷ್ಮೆ ನೂಲುವವರು, ರೀಲರ್ಸ್, ವೀವರ್ಸ್, ಟ್ರೇಡರ್ಸ್ ಎಲ್ಲಾ ಇದ್ದಾರೆ. ಅವರ ಸಲಹೆಯನ್ನು ತೆಗೆದುಕೊಂಡ ನಂತರ ನಿರ್ಣಯ ತೆಗೆದುಕೊಳ್ಳುತ್ತೇನೆ ಇನ್ನು ರೇಷ್ಮೆ ವಿನಿಮಯ ಕೇಂದ್ರದಲ್ಲಿ ಅವ್ಯವಹಾರ ಇದೆ ಎಂದು ಹೇಳಿದರು. ಒಂದಾದರೂ ಇನ್‌ಸ್ಟೆನ್ಸ್ ಕೊಡಿ ಎಂದು ಕೇಳಿದ್ದಕ್ಕೆ ಇಲ್ಲಿಯವರೆಗೂ ಕೊಡಲಿಲ್ಲ. ಒಂದು ಮಾತನ್ನು ಹೇಳುತ್ತೇನೆ. ನಾನು ಮಂತ್ರಿಯಾದ ಮೇಲೆ ನನ್ನ ಕ್ಷೇತ್ರದ ಪಕ್ಕದಲ್ಲೇ ಇರುವ ಕೇಂದ್ರಕ್ಕೆ ಫ್ಲೈಯಿಂಗ್ ವಿಸಿಟ್ ಅಂತಾರಲ್ಲಾ ಹಾಗೆ ಹೋಗಿದ್ದೆ, ಅಲ್ಲಿ ಎಲ್ಲಾ ಕಂಪ್ಯೂಟರೀಕರಣ ಮಾಡಿದ್ದಾರೆ. ಅಲ್ಲಿಗೆ ಬರುವ ಎಲ್ಲಾ ಬಗೆಯ ರೇಷ್ಮೆಯನ್ನೂ ಕೂಡ ತಂದಿರುತ್ತಾರೆ. ಆಮೇಲೆ ವರ್ಗೀಕರಣ ಮಾಡುತ್ತಾರೆ. ಸುಮಾರು ೧೫೦೦ ಮಂದಿ ರೇಷ್ಮೆ ನೂಲು ಕೊಳ್ಳುವವರು, ಟ್ವಿಸ್ಟರ್ಸ್, ವೀವರ್ಸ್, ಟ್ರೇಡರ್ಸ್ ಇರುತ್ತಾರೆ. ಬೆಲೆ ನಿಷ್ಕರ್ಷೆ ಆದಮೇಲೆ ಯಾವ ಬೆಲೆಗೆ ಯಾವ ಗುಣಮಟ್ಟದ ರೇಷ್ಮೆ ಆಕ್ಷನ್‌ನಲ್ಲಿ ಕೊನೆಯ ಬೆಲೆಯಾಗಿದೆ ಎಂದು ಕಂಪ್ಯೂಟರ್ ತೋರಿಸುತ್ತದೆ. ಆ ಬೆಲೆಯನ್ನು ಒಪ್ಪುವ ರೈತನಿಗೆ ಅಂದು ಸಂಜೆಯೇ ದುಡ್ಡು ಕೊಡುವ ವ್ಯವಸ್ಥೆ ಇದೆ. ಯಾರಿಗೆ ಇಷ್ಟವಿರುವುದಿಲ್ಲವೋ ಅಂಥವರು ಮಾಲನ್ನು ದಾಸ್ತಾನು ಮಾಡಲು ಜಾಗ ಕೊಟ್ಟು ಆ ದಾಸ್ತಾನಿನ ಮೇಲೆ ಶೇಕಡಾವಾರು ಮುಂಗಡ ಹಣ ಕೊಡುವ ವ್ಯವಸ್ಥೆ ಇದೆ. ಅಲ್ಲಿ ನಾನು ಕೇಳಿದಾಗ ಹಿಂದಿಗಿಂತಲೂ ಈಗ ಸಮರ್ಪಕವಾಗಿದೆ ಎಂದು ಹೇಳಿದರು. ಈ ವಿನಿಮಯ ಕೇಂದ್ರ ಬಂದಮೇಲೆ ಸೀಲಿಂಗ್ ಪ್ರೈಸ್ ಮತ್ತು ಫ್ಲೋರ್ ಪ್ರೈಸ್ ನೋಡಿದರೆ ವರ್ಷವರ್ಷಕ್ಕೂ ಒಂದು ಕೆಜಿ ರೇಷ್ಮೆ ಬೆಲೆ ಜಾಸ್ತಿಯಾಗುತ್ತಿದೆಯೋ ಹೊರತು ಕಡಿಮೆಯಾಗುತ್ತಿಲ್ಲ. ಇದರಿಂದ ಬೆಳೆಗಾರನಿಗೆ ತೊಂದರೆಯಾಗಿಲ್ಲ. ಉತ್ತಮ ರೀತಿಯ ಫಲ ದೊರಕುವ ಚಿತ್ರ ಕಾಣುತ್ತಿದೆ. ಪ್ರತಿ ವರ್ಷ ಇದರ ಬೆಲೆ ಜಾಸ್ತಿಯಾಗುತ್ತಿದೆ. ಆದರೆ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು. ರೇಷ್ಮೆ ಬೆಲೆಯಲ್ಲಿ ಸ್ಥಿರೀಕರಣವಾಗಿದೆ. ಈ ರೇಷ್ಮೆ ಉದ್ಯಮದಲ್ಲಿ ನಾನಾ ಹಂತದಲ್ಲಿ ಅನೇಕ ಜನರು ಲಾಭ ಮಾಡುತ್ತಿದ್ದಾರೆ ಎಂದರು. ಹೌದು ಬೆಳೆಗಾರನಿಂದ ಹಿಡಿದು ರೇಷ್ಮೆ ಬಟ್ಟೆ ಕೊಡುವವರೆಗೂ ನಾನಾ ಜನರಿದ್ದಾರೆ, ಅವರಿಗೆಲ್ಲ ಯಾವ್ಯಾವ ಪ್ರಮಾಣದಲ್ಲಿ ಲಾಭ ಬರುತ್ತದೆಂದು ಕೇಂದ್ರ ರೇಷ್ಮೆ ಮಂಡಲಿಯವರು ಲೆಕ್ಕ ಹಾಕಿದ್ದರ ಪ್ರಕಾರ ಬೆಳೆಗಾರನಿಗೆ ನಮ್ಮ ಕಾರ್ಯಕ್ರಮಗಳೆಲ್ಲದರ ಫಲವಾಗಿ ಶೇಕಡ ೫೧.೫ ರಷ್ಟು ಲಾಭ ಸಿಗುತ್ತದೆ. ಅಂದರೆ

ಒಟ್ಟು ಬೆಲೆಯು ಸಿಂಹ ಪಾಲು ಬೆಳೆಗಾರನಿಗೆ ಸಿಕ್ಕಿ ಉಳಿದದ್ದರಲ್ಲಿ ಟ್ವಿಸ್ಟರ್ಸ್, ರೀಲರ್ಸ್, ಬಣ್ಣ ಹಾಕುವವರಿಗೆ ಮುಂತಾದವರಿಗೆ ಹೋಗುತ್ತದೆ.

ರೇಷ್ಮೆ ಬೆಳೆದದೆಲ್ಲಾ ರೇಷ್ಮೆ ವಿನಿಮಯ ಕೇಂದ್ರಕ್ಕೆ ಬರಬೇಕೆನ್ನುವುದು ನಮ್ಮ ಉದ್ದೇಶ ಇದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಈಗಾಗಲೇ ನಗದು ಹಣ ನೀಡಿಕೆ ಮಾಡುತ್ತಿದ್ದೇವೆ. ಸಣ್ಣ ವರ್ತಕರಿಗೆ ತೊಂದರೆಯಾಗಿದೆಯೆಂದು ಮಾನ್ಯ ರಾಜೂಗೌಡರು ಹೇಳಿದ್ದಾರೆ ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟರೆ ಅದರ ಬಗ್ಗೆ ತನಿಖೆ ನಡೆಸಿ ಕಠಿಣವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ಮುಂದೆ ನೋಡುವುದಿಲ್ಲವೆಂದು ಹೇಳುತ್ತಿದ್ದಾರೆ, ಮುಂದೆ ಇಲ್ಲ, ಹಿಂದೆ ಇಲ್ಲ......

ಶ್ರೀ ಎ. ಲಕ್ಷ್ಮೀಸಾಗರ್.—ಸರಕಾರಕ್ಕೆ ಹಿಂದೆ ಮುಂದೆ ಜನ ಇದ್ದಾರೆ ಅವರ ಶ್ರೀರಕ್ಷೆ ಇರುವವರೆಗೆ, ಮಲ್ಲಿಕಾರ್ಜುನ ಖರ್ಗೆಯವರ ಅಣತಿ ಬೇಕಾಗಿಲ್ಲ, ಅವರ ಮರ್ಯಾದೆ ಬೇಕಾಗಿಲ್ಲ ಮತ್ತು ಅವರ ಸಹಾನುಭೂತಿ ಕೂಡ ಬೇಕಾಗಿಲ್ಲ, ಕೊಡಿ ಎಂದು ಕೇಳುತ್ತೇವೆ. ಆದರೆ ಅವರ ಮರ್ಜಿಯೊಳಗಂತೂ ನಾವು ಇಲ್ಲವೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರ ಪಕ್ಕದಲ್ಲಿ ಸಿಂಧ್ಯರವರು ಇದ್ದರು, ಈಗ ಅವರೂ ಹೊರಟು ಹೋದರು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಪಾರ್ಟಿ ಅಥವಾ ಅವರ ಕೃಪಾಕಟಾಕ್ಷದ ಘೋಷಣಾ ಮಂಡಲಿಯ ಆಶ್ರಯದಲ್ಲಿ ಬೆಳೆಯಂತಕ್ಕಂತಹ ರಾಜಕೀಯ ಕಲ್ಚರ್ ಅನ್ನು ನಾವು ಬೆಳೆಸಿಕೊಂಡು ಬಂದಿಲ್ಲ. ನಮ್ಮ ಹಿಂದೆ ಜನ ಇದ್ದಾರೆ, ಮುಂದೆ ಜನ ಇದ್ದಾರೆ. ಈ ಕಡೆ ಇದ್ದಾರೆ, ಆ ಕಡೆ ಇದ್ದಾರೆ ಎಲ್ಲಾ ಕಡೆ ಇದ್ದಾರೆ. ಜನರ ಆಶೀರ್ವಾದ ನಮಗೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸರ್ವ ವ್ಯಾಪ್ತಿ ನೀವೇ ಇದ್ದೀರಿ ನಿಮ್ಮನ್ನು ಬಿಟ್ಟರೆ ಬೇರೆ ಯಾರೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ರೇಷ್ಮೆ ವಿನಿಮಯ ಕೇಂದ್ರದಲ್ಲಿ ಈ ರೀತಿ ಹಣ ಕೊಡತಕ್ಕಂತಹ...

ಶ್ರೀ ಕೆ. ಹೆಚ್. ಪಾಟೀಲ್.—ಮೇಲೂ ಇದ್ದಾರೆ ಕೆಳಗೂ ಇದ್ದಾರೆ ಎಲ್ಲರನ್ನೂ ಕೆಳಗೆ ಸಾಕಿ ಜನರ ಮೇಲೆ ನಿಂತಿದ್ದೀರಿ. ಮೇಲೆ ನೋಡುವವನು ದೇವರಿದ್ದಾನೆ.

ಶ್ರೀ ಎ. ಲಕ್ಷ್ಮೀಸಾಗರ್.— ದೇವರು ಎಲ್ಲಾ ಕಡೆ ಇದ್ದಾನೆಂದು ಹೇಳಿದ್ದಾರೆ.

(ಈ ಹಂತದಲ್ಲಿ ಮಾನ್ಯ ಕಾನೂನು ಸಚಿವರು ದೇವರು ಎಲ್ಲಾ ಕಡೆ ಇದ್ದಾನೆ ಎಂಬ ಬಗ್ಗೆ ಶ್ಲೋಕವನ್ನು ಉಚ್ಚರಿಸಿದರು)

ತದ್ದೈ ಚಿತಿ
ತನ್ಮೈ ಚಿತಿ
ತದ್ದೂರೆ
ತದ್ವಂತಿಕೆ
ತದ್ದಂತರಸ್ಯ ಸರ್ವಸ್ಯ
ತದುಸರ್ವಸ್ಯರಾಸ್ಯಾ ಬಾಹ್ಯತಃ

ಶ್ರೀ ಕೆ. ಹೆಚ್. ಪಾಟೀಲ್.—'' ಮಲಗಿ ಪರಮಾದರದಿ ಪಾಡಲು ಕುಳಿತು ಕೇಳುವ ಪಾಡಲು ಕುಳಿತರೆ, ನಿಂತರೆ ನಲಿವೆ, ನಲಿದರೆ ಒಲಿವೆ ನಿಮಗೆಂಬನು ಶುಲಭನೋ ತನ್ನವರನರಗಳಿಗೆ ಬಿಟ್ಟಗಲನುರಮಾದವಾ, ಸೇಲಿಸಲರಿಯದ ಪಾಮರರು ಬಳಲುವರು ಭವದೊಳಗೆ''

ಶ್ರೀ ಎ. ಲಕ್ಷ್ಮೀಸಾಗರ್.—ವೆರಿ ಗುಡ್. ಗದುಗಿನ ನಾರಣಪ್ಪನೂ ಕೂಡ ಅದೇ ಮಾತನ್ನು ಹೇಳಿದ್ದಾನೆ.

ಶ್ರೀ ಬಿ. ಬಸವಲಿಂಗಪ್ಪ.—ಇವರಿಬ್ಬರ ಮಾತನ್ನು ಕೇಳಿದ ಮೇಲೆ ಇವರಿಬ್ಬರೂ ಭ್ರಮೆಯಿಂದ ನರಳುತ್ತಿದ್ದಾರೆಂದು ಅನಿಸುತ್ತದೆ. ಅಯ್ಯಪ್ಪನಿಗೆ ಬೇರೆ ಕೆಲಸವೇ ಇಲ್ಲ ಬರೀ ಓದುವುದೇ ಕೆಲಸ ಓದಿ ಏನು ಬೇಕಾದರೂ ಹೇಳುತ್ತಾರೆ ಈಗ ಅವರು ಹೇಳಿದ್ದು ನಮಗಂತೂ ಅರ್ಥವಾಗಿಲ್ಲ, ಅದು ಅವರಿಗೂ ಅರ್ಥವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಯಾರೋ ಹೇಳಿದ್ದಾರೆಂದು ಇವರು ಇಲ್ಲಿ ಅದನ್ನು ಹೇಳಿದ್ದು. ನಿಮ್ಮ ಸ್ವಂತದ್ದೇನಾದರೂ ಇದ್ದರೆ ಹೇಳಿ ಅದು ಬಿಟ್ಟು ದೇವರು ಇದ್ದಾನೆಯೋ ಇಲ್ಲವೋ ಅಂತ......

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರನ್ನು ನಾನು ಬಹಳ ವರ್ಷಗಳಿಂದ ಬಲ್ಲೆ ವಕೀಲನಾಗಿ ಬಲ್ಲೆ, ಶಾಸಕನಾಗಿ ಬಲ್ಲೆ, ಉಪ ಮಂತ್ರಿಯಾಗಿ ಬಲ್ಲೆ ಇಲ್ಲಿಯೇ ಕುಳಿತು ಅವರು ಮಂತ್ರಿಯಾಗಿ ಕೆಲಸ ಮಾಡುತ್ತಿದ್ದರು. ಅಂತಹ ಸಮಯದಲ್ಲಿ ಅವರ ಕಾರ್ಯಾಚರಣೆಯ ಬಗ್ಗೆ ದಿಟ್ಟತನದ ಕೆಲವು ವಿಚಾರಗಳನ್ನು ಕೇಳಿದ್ದೇನೆ. ಅವರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ.ನಿಮ್ಮದು ಯಾವುದಾದರೂ ಇದೆಯೇ ಎಂದು. ಮೊದಲು ಅವರದ್ದು ಯಾವುದು ಇದೆ ಎಂದು ಹೇಳಿದರೆ ನನ್ನ ವಿಚಾರವನ್ನು ಆಮೇಲೆ ಹೇಳುತ್ತೇನೆ. ಪುಸ್ತಕ ಓದಬೇಕು ಪುಸ್ತಕ ಇರುವುದು ಓದುವುದಕ್ಕೆ. ಮನುಷ್ಯರು ಮೋಸ ಮಾಡಬಹುದು ಪುಸ್ತಕ ಮೋಸ ಮಾಡುವುದಿಲ್ಲ ನಾನು ಅದನ್ನು ನಂಬಿದ್ದೇನೆ. ಮೋಸ ಮಾಡುವ ಪುಸ್ತಕವನ್ನು ತೆಗೆದು ಹಾಕಬಹುದು ಮೋಸ ಮಾಡುವ ಮನುಷ್ಯರನ್ನು ತೆಗೆದು ಹಾಕುವುದು ಕಷ್ಟವಾಗುತ್ತದೆ. ನಿಮಗೆ ಅನುಭವವಿಲ್ಲದೇ ಹೋದರೆ ಇಲ್ಲಿ ಬನ್ನಿ ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಯಾವ ಪುಸ್ತಕ ಓದಬೇಕೆನ್ನುವುದೇ ಪ್ರಶ್ನೆ. ಅದಕ್ಕೇ ನಾನು ಬೂಸಾ ಪುಸ್ತಕವೆಂದು ಕರೆದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅದು ವಿವೇಚನೆಗೆ ಸಂಬಂಧಪಟ್ಟಿದ್ದು. ಕೆಲವರಿಗೆ ನೂರರಲ್ಲಿ ೯೦ ಭಾಗ ಅಭಿವಿವೇಚನೆ ೧೦ ಭಾಗ ವಿವೇಚನೆಯಿರುತ್ತದೆ. ಅಂತಹವರಿಗೆ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಆದರೆ ಗುಣಾವಗುಣಗಳನ್ನು ತುಲನಾತ್ಮಕ ದೃಷ್ಟಿಯಿಂದ ನೋಡತಕ್ಕಂತಹ ವಿವೇಚನಾ ಶಕ್ತಿ ಮನುಷ್ಯನಿಗೆ ಮಾತ್ರವಿದೆ ಎನ್ನುವ ತತ್ವವನ್ನು ಮಾನ್ಯ ಬಸವಲಿಂಗಪ್ಪನವರು ಒಪ್ಪಿಕೊಂಡಿದ್ದೇ ಆದರೆ ಅವನವನ ಮನಸ್ಸಿನ ತಿಳುವಳಿಕೆಯ, ವಿಸ್ತರಣೆಯ ಆಧಾರದ ಹಿನ್ನೆಲೆ ಅನುಭವದ ಹಿನ್ನೆಲೆಯಲ್ಲಿ, ಯಾವುದನ್ನು ಎಷ್ಟು ಮಾಡಬೇಕೆಂದು ಸೀಮಾರೇಖೆ ಗುರುತನ್ನು ಹಾಕಿಕೊಳ್ಳುತ್ತಾನೆ, ಅವರೂ ಕೂಡ ಹಾಕಿಕೊಂಡಿದ್ದಾರೆಂದು ನನ್ನ ಭಾವನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಮಾತನಾಡಿದ್ದಾರೆಂದು ಅವರಿಗೇ ಅರ್ಥವಾಗುತ್ತಿಲ್ಲ. ನೀವು ಏನು ಮಾತನಾಡಿದಿರಿ ಅದರ ಅರ್ಥ ಹೇಳಿ ನೋಡೋಣ.

ಶ್ರೀ ಯು. ಭೂಪತಿ.—ನೀವು ಏನು ಹೇಳಿದಿರಿ ನಮಗಂತೂ ಗೊತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನನಗೆ ಅರ್ಥವಾಗದಿದ್ದರೆ ಅವರಿಗೇನೂ ತೊಂದರೆಯಿಲ್ಲ, ಆದರೆ ಅವರು ಅರ್ಥ ಮಾಡಿಕೊಂಡಿದ್ದಾರೆಂದು ನನ್ನನ್ನು ಕೇಳುವುದರಿಂದ ಹೆಚ್ಚು ಅನಾನುಕೂಲವಾಗುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇದು ಯಾವ ಡಿಮ್ಯಾಂಡ್‌ಗೆ ಉತ್ತರ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಿದ್ದು. ಸಂಕೇಶ್ವರಕ್ಕೂ ಇದಕ್ಕೂ ಸಂಬಂಧವಿದೆ. ಅಲ್ಲಿ ರೇಷ್ಮೆ ಬೆಳೆ ಜಾಸ್ತಿಯಾಗಬೇಕೆಂದು ನನ್ನ ಉದ್ದೇಶ, ಅದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಿ, ಏನೇನು ಸಹಾಯ ಬೇಕೋ ಅದನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

೨-೦೦ ಪಿ. ಎಂ.

ರೇಷ್ಮೆ ವಿನಿಮಯ ಕೇಂದ್ರದಲ್ಲಿ ಆರು ಲಕ್ಷ ರೂಪಾಯಿಗಳಷ್ಟು ಕೆ.ಇ.ಬಿ.ಗೆ ಕೊಡಬೇಕಾದಂಥ ಹಣದ ಬಗ್ಗೆ ಅವ್ಯವಹಾರ ನಡೆದಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಕೆ.ಇ.ಬಿ. ನೌಕರರೊಬ್ಬರನ್ನು ಮತ್ತು ಈ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಬ್ಬರ ಮೇಲೆ ಪೋಲೀಸರು ದಸ್ತಗಿರಿ ಮಾಡಿ ವಿಚಾರಣೆಯನ್ನು ನಡೆಸುತ್ತಿದ್ದಾರೆ. ಸುಲಭವಾಗಿ ಸಿಗತಕ್ಕಂಥ ಕಳ್ಳರು ಇದರಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆಂದು

ನನ್ನ ಲಾಯರ್ ಬುದ್ಧಿಯ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ರೆಕಾರ್ಡ್ಸ್ ಇದೆ ಎಂದು ಅಧಿಕಾರಿಗಳೂ ಕೂಡಾ ಹೇಳಿದ್ದಾರೆ. ಆಮೇಲೆ ಬೆಲೆ ಹತ್ತೋಟಿ ಹೆಚ್ಚಾದಾಗ ಇಲ್ಲಿ ಇನ್ನೊಂದು ವಿಚಾರವನ್ನು ಹೇಳುವುದು ಬಿಟ್ಟುಬಿಟ್ಟೆ. ಈ ಸಿಲ್ಕಿನ ಬೆಲೆ ರೈತರಿಗೆ ತೊಂದರೆಯಾಗದೇ ಇರತಕ್ಕಂಥ ಮಟ್ಟದಲ್ಲಿ ಫ್ಲೋರ್‌ಪ್ರೈಸ್ ಇಟ್ಟುಕೊಳ್ಳಬೇಕು ಎನ್ನುವುದು ಮುಖ್ಯವಾದದ್ದು. ಅದು ನಡೆದಿದೆ, ಅದು ಉತ್ತಮ ರೀತಿಯಲ್ಲಿ ನಡೆದಿದೆ. ಸಿಲ್ಕಿನ ಬೆಲೆ ಬಹಳ ಜಾಸ್ತಿಯಾದರೂ ಇದರಿಂದ ತೊಂದರೆಯಾಗುತ್ತದೆ ಎಂದು ಹೇಳಿಬಿಟ್ಟು ಹೇಳುವ ಜನ ನಮ್ಮ ಸಮಾಜದಲ್ಲಿದ್ದಾರೆ ಎರಡು ಗುಂಪುಗಳ ಜನ ಇದ್ದಾರೆ. ನೇಕಾರರಲ್ಲಿ ಮೊದಲನೆಯವರು ಕೈಮಗ್ಗದ ರೇಷ್ಮೆಯನ್ನು ಉಪಯೋಗಿಸಿ ಬಟ್ಟೆಯನ್ನು ತಯಾರು ಮಾಡತಕ್ಕಂಥವರು. ರೇಷ್ಮೆ ಬೆಲೆ ಜಾಸ್ತಿಯಾದರೆ ಕೈಮಗ್ಗದಲ್ಲಿ ತಯಾರು ಮಾಡತಕ್ಕಂಥ ರೇಷ್ಮೆ ಬಟ್ಟೆ ಬೆಲೆ ಜಾಸ್ತಿಯಾಗುತ್ತದೆ, ಕೂಲಿ ಜಾಸ್ತಿಯಾಗುತ್ತದೆ, ಸಮಯ ಜಾಸ್ತಿಯಾಗುತ್ತದೆ. ಅದನ್ನು ಕೊಂಡುಕೊಳ್ಳತಕ್ಕಂಥ ಜನ ಕಡಿಮೆ, ಇದರಿಂದ ನಮಗೆ ಲಾಭ ಏನೂ ಇಲ್ಲ, ತೊಂದರೆಯಾಗುತ್ತದೆ ಎನ್ನತಕ್ಕಂಥ ಮನವಿಯನ್ನು ಸಲ್ಲಿಸಿದ್ದಾರೆ. ಇದರ ಬಗ್ಗೆ ಉತ್ಪ್ರೇಕ್ಷೆ ಭಾಷೆಯನ್ನು ಇದರಲ್ಲಿ ಉಪಯೋಗಿಸಿದರೂ ಕೂಡಾ ಮೂಲದಲ್ಲಿ ಹೇಳತಕ್ಕಂಥ ಮಾತಿನಲ್ಲಿ ಅರ್ಥ ಇದೆ, ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಎರಡು ಮೂರು ಮಗ್ಗಗಳನ್ನು ಇಟ್ಟುಕೊಂಡರೂ ಕೂಡಾ ಇದರಿಂದ ಸ್ವಲ್ಪ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ ಅವರ ಕ್ಷೇತ್ರದಲ್ಲಿಯೂ ನನ್ನ ಕ್ಷೇತ್ರದಲ್ಲಿಯೂ ಆ ಉದ್ಯಮಕ್ಕೆ ಸೇರಿದಂಥ ಅವರ ಜನರಿದ್ದಾರೆ. ಅವರ ತೊಂದರೆಗಳನ್ನು ಕೇಳಿ ನಾನು ಮನದಟ್ಟು ಮಾಡಿಕೊಂಡಿದ್ದೇನೆ. ಈ ವಿಚಾರವನ್ನೂ ಕೂಡಾ ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನೇಕಾರರ ಬೇಡಿಕೆ ಬಗ್ಗೆ ಒಂದು ಸಮಿತಿಯನ್ನು ಮಾಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು, ಇನ್ನೂ ಮಾಡಲಿಲ್ಲ ಎಂದು ಹೇಳಿದ್ದಾರೆ. ಅದರಂತೆ ಸಮಿತಿಯನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇನೆ. ಇನ್ನು ಬೆಲೆ ಸ್ಥಿರೀಕರಣದ ವಿಷಯದಲ್ಲಿ ಸ್ಥಿರೀಕರಣಕ್ಕೆ ಮಾರುಕಟ್ಟೆ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ, ಆ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ಮಾರುಕಟ್ಟೆ ಸ್ಥಿರೀಕರಣದಿಂದ, ಬೆಲೆ ಸ್ಥಿರೀಕರಣದಿಂದ ಹಣ ಬರುವುದಕ್ಕೆ ಪ್ರಾರಂಭವಾಗಿದ್ದು ೮೪–೮೫ರಿಂದ ಸುಮಾರು ೩೫ ಕೋಟಿ ರೂಪಾಯಿ ಈಗ ಇದೆ. ಅವರು ೨೨ ಕೋಟಿ ೨೩ ಕೋಟಿ ರೂಪಾಯಿ ಎಂದು ಹೇಳಿದರು. ವೆಂಕಟರಾಮಯ್ಯನವರು ೨೨ ಕೋಟಿಗೆ ಇಳಿಸಿಬಿಟ್ಟರು. ನನ್ನನ್ನು ಕೇಳಿದ್ದರೆ ಎಷ್ಟು ಎಂದು ಹೇಳುತ್ತಿದ್ದೆ, ಹೋಗಲಿಬಿಡಿ. ಈ ಹಣವನ್ನು ಬೆಲೆ ಸ್ಥಿರೀಕರಣ ನಿಧಿಯೆಂದು ಕರೆದು ಈ ಉದ್ಯಮದ ಎಲ್ಲಾ ಅಂಗಗಳಲ್ಲೂ ಕೆಲಸ ಮಾಡತಕ್ಕಂಥವರ ಕ್ಷೇಮಾಭಿವೃದ್ಧಿ ದೃಷ್ಟಿಯಿಂದ ಖರ್ಚು ಮಾಡಬೇಕೆಂದು ಇದೆ. ಇದು ಜಾರಿಗೆ ಬಂದಿದ್ದು ೮೪–೮೫ರಲ್ಲಿ, ೮೬–೮೭ರಲ್ಲಿ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಲೆಕ್ಕ ಹಾಕಿ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ಅದರಲ್ಲಿ ೮೩ ಲಕ್ಷ ರೂಪಾಯಿ ಖರ್ಚಾಗಿದೆ ಏನೇನು ಕೆಲಸ ಮಾಡಿದ್ದೇವೆ ಎಂಬ ಪಟ್ಟಿ ಓದುವುದು ಅನಾವಶ್ಯಕ. ಏಕೆಂದರೆ ನನಗೆ ಬಾಯಿಪಾಠ ಮಾಡಿ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಅದನ್ನು ಓದುವುದಕ್ಕೆ ಹೋಗುವುದಿಲ್ಲ. ೮೮–೮೯ರಲ್ಲಿ ೫.೪೫ ಕೋಟಿ ರೂಪಾಯಿಗಳ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಉದ್ಯಮದಲ್ಲಿರತಕ್ಕಂಥ ಎಲ್ಲರ ಕ್ಷೇಮಾಭಿವೃದ್ಧಿಗೋಸ್ಕರ ಹೆಚ್ಚು ಹೆಚ್ಚಾಗಿ ಉಪಯೋಗಿಸತಕ್ಕಂಥ ವಿಶಾಲವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ವರ್ಷೇ ವರ್ಷೇ ಈ ಅನುಕೂಲಗಳನ್ನು ಒದಗಿಸಿ ಕೊಡಬೇಕೆಂಬ ಕಾರ್ಯಕ್ರಮಗಳನ್ನು ಹೆಚ್ಚು ಮಾಡುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀ ರಾಜೂಗೌಡರು ರೈತರ ಕೃಷಿ ಭವನ ಕಟ್ಟಲಿಲ್ಲ ಎಂದು ಅಂದುಬಿಟ್ಟರು. ಆದ್ದರಿಂದ ಅವರಿಗೆ ವಿವರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ- ಈ ಕೆಳಕಂಡ ಸ್ಥಳಗಳಲ್ಲಿ ರೇಷ್ಮೆ ಕೃಷಿ ಭವನವನ್ನು ನಿರ್ಮಿಸಲಿಕ್ಕೆ ಪ್ರಸ್ತಾಪಿಸಲಾಗಿದೆ. ರಾಮನಗರದಲ್ಲಿ ಮೂರು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳ ವೆಚ್ಚದಲ್ಲಿ ರೇಷ್ಮೆ ಕೃಷಿ ಭವನ ಮುಕ್ತಾಯಗೊಂಡಿದೆ, ಕುಣಿಗಲ್‌ನಲ್ಲಿ ೩.೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರೇಷ್ಮೆ ಕೃಷಿ ಭವನ ಮುಕ್ತಾಯವಾಗಿದೆ ಕೊಳ್ಳೇಗಾಲದಲ್ಲಿ ೨.೭೮ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈಗ ನಿರ್ಮಿಸಲಾಗುತ್ತಿರುವುದರಿಂದ ರೇಷ್ಮೆ ಕೃಷಿ ಭವನದ ಕೆಲಸ ಮುಂದುವರೆದಿದೆ. ಮಿಕ್ಕ ಏಳು ಪ್ರದೇಶಗಳ ಅಂದಾಜು ಪಟ್ಟಿ ತಯಾರಿಸಿ ಸರ್ಕಾರದ ಅನುಮೋದನೆಗೆ ಕಳಿಸಿಕೊಟ್ಟಿದೆ. ಸಾಲ ಮರುಪಾವತಿಗೋಸ್ಕರ ಇವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ರೀಲರ್ಸ್‌ಗೋಸ್ಕರ ಮತ್ತು ರೇಷ್ಮೆ ಕೃಷಿ ಬೆಳೆಗಾರರಿಗೋಸ್ಕರ ಸಾಲ ಮರುಪಾವತಿ ಮಾಡಿ ಎಂದು ಹೇಳಿದ್ದಾರೆ. ರೇಷ್ಮೆ ಕೃಷಿ ಬೆಳೆಗಾರರ ಬಗ್ಗೆ ಸಾಲ ಮರುಪಾವತಿ ಮಾಡತಕ್ಕ

ಒಂದು ವಿಶೇಷ ಕಾರ್ಯಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆ. ಮಾನ್ಯ ಸಹಕಾರ ಸಚಿವರಾದ ಏಕಾಂತಯ್ಯನವರೊಡನೆ ಸಂಪರ್ಕಿಸಿ, ಸಮಾಲೋಚನೆ ನಡೆಸಿ ರೈತರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕೋ ಅದೇರೀತಿ ಇವರಿಗೂ ಸಹ ಮಾಡಬಹುದು ಎಂಬ ಬಗ್ಗೆ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ನೂಲು ಬಿಚ್ಚುವವರ ಸಹಕಾರ ಸಂಘಗಳಿಗೆ ಕೊಟ್ಟಿರತಕ್ಕಂಥ ಸಾಲದ ಮರು ಪಾವತಿಯನ್ನು ಪುನರ್ ಪರಿಶೀಲನೆ ಮಾಡಿ, ಅವರ ಸಮಯವನ್ನು ಸ್ವಲ್ಪ ಜಾಸ್ತಿ ಮಾಡಿ ಎಂದು ಕೇಳಿದ್ದಾರೆ. ಇದೂ ಕೂಡ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಇವರು ಬಾಕಿಯನ್ನು ಕೊಟ್ಟರೆ ಜಾಸ್ತಿ ಸಾಲವನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವುದನ್ನು ರೈತರು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ, ಅದರಂತೆ ನಡೆಯುತ್ತಾರೆ ಎಂದು ಭಾವಿಸಿದ್ದೇನೆ. ಇನ್ನು ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಲಾಭ ಇಲ್ಲ ನಷ್ಟ ಆಗುತ್ತಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ನನ್ನ ವರದಿಯಲ್ಲಿ ಪೂರ್ಣವಾದಂತಹ ವಿವರಣೆಯನ್ನು ಕೊಟ್ಟಿದ್ದೇನೆ, ನಷ್ಟಕ್ಕೆ ಕಾರಣಗಳನ್ನೂ ಕೊಟ್ಟಿದ್ದೇನೆ ಮತ್ತು ನಷ್ಟವನ್ನು ಕಡಿಮೆ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮದ ಪರಿಣಾಮವಾಗಿ ಕಡಿಮೆ ಆಗಿದೆ ಎನ್ನುವ ಮಾತನ್ನೂ ಸಹ ಹೇಳಿದ್ದೇನೆ. ೮೪-೮೫ರಲ್ಲಿ ನಷ್ಟ ಅಂದಾಜು ೧೫೭-೦೪ ಲಕ್ಷಗಳಿಂದ ಇಲ್ಲಿಯವರೆಗೆ ೮೭-೮೮ರ ಹೊತ್ತಿಗೆ ೧೫೦.೪೭ ಲಕ್ಷಕ್ಕೆ ಇಳಿದಿದೆ. ಯಾವ ಕಾರಣಕ್ಕಾಗಿ ಇಳಿದಿದೆ ಎನ್ನುವುದನ್ನೂ ಸೂಕ್ಷ್ಮವಾಗಿ ಹೇಳಿದ್ದೇನೆ. ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರ ಸಂಖ್ಯೆ ೧೦೫೮. ಈ ಕಡಿಮೆ ಪ್ರಮಾಣದ ನೌಕರರು ಇರತಕ್ಕಂಥ ೪-೫ ಸರ್ಕಾರಿ ರೇಷ್ಮೆ ಕಾರ್ಖಾನೆಗಳಲ್ಲಿ ನೀವು ಯಾಕೆ ಇಷ್ಟು ನಷ್ಟವನ್ನು ಪ್ರತಿ ವರ್ಷ ಅನುಭವಿಸುತ್ತಾ ಇದ್ದೀರಿ, ಇವುಗಳನ್ನು ಮುಚ್ಚಿಬಿಡಿ ಎನ್ನತಕ್ಕ ಮಾತನ್ನು ಮಾನ್ಯ ರಾಜೂಗೌಡರು ಹೇಳಿದ್ದಾರೆ. ಅವರ ಮಾತಿನಲ್ಲಿ ಒಂದೇ ಸಲ ದುಡ್ಡು ಆದರೂ ಕೊಟ್ಟರೆ ನಷ್ಟ ಆಗುವುದಿಲ್ಲ ಎಂದು ಹೇಳಿದ್ದಾರೆ. ಇದರಿಂದ ಹೆಚ್ಚು ಕೆಲಸ ಆಗುತ್ತದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಏಕೆ ಹಾಗೆ ಹೇಳಿದ್ದಾರೆ. ಅಂದರೆ ಅವರು ರೆಕ್‌ಲೆಸ್ ಆಗಿ ಹೇಳಿದ್ದಾರೆ. ನಿಮ್ಮ ಸರ್ಕಾರದ ಕೈಲಿ ಆಗದಿದ್ದರೆ ಹಾಳಾಗಿ ಹೋಗಲಿ ಎಂದು ಹೇಳಿದ್ದಾರೆ, ಚೆನ್ನಾಗಿ ಕೆಲಸ ಮಾಡಲಿ ಅಂತ ಹಾಗೆ ಹೇಳಿದ್ದಾರೆ. ಹಾಳಾಗಿ ಹೋಗಲಿ ಅಂದರೆ ಹಾಳಾಗಿ ಹೋಗಲಿ ಎಂದು ಅರ್ಥ ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕನ್ನಡ ಭಾಷೆಯನ್ನು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕೋ ಅರ್ಥವಾಗುತ್ತಿಲ್ಲ. ಮುಚ್ಚಿ ಬಿಡಿ ಅಥವಾ ತೆಗೆದು ಬಿಡಿ ಎನ್ನುವುದನ್ನು ಬಿಟ್ಟು ಒಂದೇ ಸಲ ಮನೆಗೆ ಕಳಿಸಿಕೊಟ್ಟು ಬಿಡಿ ಎಂದು ಹೇಳುವುದಕ್ಕೆ ಈ ರೀತಿ ಹೇಳಿದ್ದಾರೆ. ನೀವು ಹೇಳತಕ್ಕದ್ದಕ್ಕೂ ಅವರು ಹೇಳತಕ್ಕದ್ದಕ್ಕೂ ಉತ್ತರ ದಕ್ಷಿಣ ಇದ್ದ ಹಾಗೆ ಇದೆ. ನೀವು ಏಕೆ ಈ ಮಾತನ್ನು ಹೇಳುತ್ತಿದ್ದೀರಿ ಎಂದು ನನಗೆ ಗೊತ್ತಿದೆ, ಅವರು ನಿಮ್ಮ ಮನೆಗೆ ಬಂದು ಕುಳಿತುಕೊಳ್ಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಇಟ್ಟುಕೊಂಡರೆ ಇನ್ನೂ ಜಾಸ್ತಿ ತಿನ್ನುತ್ತಾರೆ ಎಂದು ಹೇಳಿದರು.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಲೆಕ್ಕ ಹಾಕುವುದಕ್ಕೆ ಇಲ್ಲಿ ಎಷ್ಟು ನಷ್ಟವಾಗುತ್ತಿದ್ದೆ ಯಾವ ಬಾಬತ್ತಿನಲ್ಲಿ ನಷ್ಟವಾಗುತ್ತಿದೆ, ಯಾವ ಖರ್ಚಿನ ಬಾಬತ್ತಿನಲ್ಲಿ ಸೇರಿದೆ ಎಂದು ಕೇಳಿದ್ದಾರೆ. ಇವರ ಲೆಕ್ಕದ ಪ್ರಕಾರ ನಷ್ಟದ ಪ್ರಮಾಣ ಕೇಜಿ ಒಂದಕ್ಕೆ ೯೧೪.೪೭ ಇದರನ್ನು ಅಪೋರ್ಷನ್ ಮಾಡಬಹುದು ? ಸಂಬಳ ಮತ್ತು ಕೂಲಿ ಕೆ. ಜಿ. ಒಂದಕ್ಕೆ ೩೩೭.೧೦ ಪೈಸೆಗಳು, ಇದು ೮೦ ಪರ್ಸೆಂಟ್ ಆಫ್ ದಿ ಟೋಟಲ್ ಕಾಸ್ಟ್. ಸಂಬಳಕ್ಕೆ ಹೆಚ್ಚು ಹಣ ಖರ್ಚು ಮಾಡಿರುವ ಕಾರಣಕ್ಕೋಸ್ಕರ ಇಲ್ಲಿ ನಷ್ಟ ಜಾಸ್ತಿ ಆಗುತ್ತಿದೆ. ಎನ್ನುವ ಮಾತನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ ಇದನ್ನು ಪರಿಶೀಲನೆ ಮಾಡಿ ಎಂದು ಹೇಳಿದ್ದಾರೆ. ಅವರು ಇನ್ನೂ ಒಂದು ಮಾತನ್ನು ಹೇಳಿದರು, ನೂಲು ಬಿಚ್ಚುವ ಕೇಂದ್ರಗಳಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲಿ ಅವರಿಗೆ ಕೆಲಸ ಕೊಡತಕ್ಕ ವ್ಯವಸ್ಥೆ ಮಾಡಿ, ಕಾಲಕ್ರಮೇಣ ಇವುಗಳನ್ನು ತೆಗೆದುಬಿಡಿ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀ ರಾಜೂಗೌಡರು ಮಾತನಾಡಿದ ಹಿನ್ನೆಲೆಯಲ್ಲಿ ತಾವು ಇಲ್ಲಿ ಉತ್ತರ ಕೊಡಬೇಕು. ಇಲ್ಲಿ ತಾವು ಕೊಟ್ಟಿರುವ ರೇಷ್ಮೆ ಇಲಾಖೆಯ ವಾರ್ಷಿಕ ವರದಿಯಲ್ಲಿ......

ಉಪಾಧ್ಯಕ್ಷರು.—ತಾವು ಅವರು ಉತ್ತರ ಕೊಟ್ಟಮೇಲೆ ಕ್ಲಾರಿಫಿಕೇಷನ್ ಕೇಳಬಹುದು.

x x x x

SRI B. BASAVALINGAPPA.—I would iike to read from Page 12 of your Report Karnataka Silk Industries Corporation Limited, Here, it says:

> "The Corporation has suffered a loss of Rs. 496/- lakhs (provisional) during the year 1987-88 as against a loss of Rs. 425.91 lakhs during 1986-87. The accumnlated losses of the Company upto the year 1987-88 is Rs. 1453.17 lakhs."

ಇಲ್ಲಿ ೧೯೮೬–೮೭ನೇ ಸಾಲಿಗಿಂತ ೧೯೮೭–೮೮ನೇ ಸಾಲಿಗೆ ಹೆಚ್ಚು ನಷ್ಟವಾಗುವಂತೆ ಮಾಡಿದ್ದಾರೆ. ಇದಕ್ಕೆ ಅಲ್ಲಿನ ಅಧಿಕಾರಿಗಳ ಮತ್ತು ಅಲ್ಲಿನ ವ್ಯವಸ್ಥಾಪಕರ ಜವಾಬ್ದಾರಿ ಏನು ? ಇಷ್ಟೊಂದು ಲುಕ್ಸಾನು ಮಾಡುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದರ ಬಗ್ಗೆ ಪಿ. ಎ. ಸಿ. ನವರು ತೀವ್ರವಾದಂಥ ಟೀಕೆಗಳನ್ನು ಮಾಡಿದ್ದಾರೆ ಈ ಇಲಾಖೆಯನ್ನು ನೀವು ಹೋದ ತಿಂಗಳು ೪ನೇ ತಾರೀಖು ವಹಿಸಿಕೊಂಡಿದ್ದೀರಿ. ಇದರ ಬಗ್ಗೆ ಶ್ರದ್ಧೆ ವಹಿಸುತ್ತೇನೆಂದು ಹೇಳಿದ್ದೀರಿ. ಇಷ್ಟೊಂದು ಲುಕ್ಸಾನಿಗೆ ಕಾರಣಕರ್ತರಾಗಿರುವವರ ಮೇಲೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಕೇಸ್ ಹಾಕಲೇಬೇಕು. ಇವರನ್ನು ಜೈಲಿಗೆ ಕಳುಹಿಸಲೇಬೇಕು, ಇಲ್ಲದಿದ್ದರೆ ಎಲ್ಲ ಸಾರ್ವಜನಿಕ ಉದ್ದಿಮೆಗಳು ಇದೇ ರೀತಿ ನಷ್ಟಕ್ಕೆ ಒಳಗಾಗುತ್ತವೆ. ಆಗ ಎಲ್ಲವನ್ನೂ ಮುಚ್ಚಬೇಕಾಗುತ್ತದೆ. ಆಗ ತಾವು ಜನರಿಗೆ ಕೆಲಸ ಕೊಡಬೇಕೆಂಬ ನೀತಿಯನ್ನು ಏನು ಹಾಕಿಕೊಂಡಿದ್ದೀರಿ, ಅದಕ್ಕೆ ಇದು ತದ್ವಿರುದ್ಧವಾಗುತ್ತದೆ. ನೀವೇ ನಿಮ್ಮ ನೀತಿಗೆ ತದ್ವಿರುದ್ಧವಾಗಿ ನಡೆದುಕೊಂಡಂತೆ ಆಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಮಹತ್ತರವಾದ ಸಲಹೆ ಕೊಟ್ಟಿದ್ದಾರೆ. ಅಪೂರ್ವವಾದ ಸಲಹೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರ ಮತ್ತು ನನ್ನ ನಡುವೆ ನಡೆದಂಥ ಮಾತಿನ ಚಕಮಕಿ ನಡವಳಿಕೆಯನ್ನು ಪ್ರೊಸೀಡಿಂಗ್ಸ್‌ನಿಂದ ಎಕ್ಸ್‌ಪಂಜ್ ಮಾಡಿ.

SRI B. BASAVALINGAPPA.—Why do you want to expunge ? I want to know, why ? You must tell me why you have expunged this See, what is now before the House cannot be expunged. You must tell me the reason. They are all unparliamentary?

ಉಪಾಧ್ಯಕ್ಷರು.—ಆ ರೀತಿ ಮಾತನಾಡುವುದು ನಿಮ್ಮ ಗೌರವಕ್ಕೆ ತಕ್ಕುದ್ದಲ್ಲ ಎಂತಹ ವ್ಯಕ್ತಿಯೂ ಇಲ್ಲಿ ಕಲ್ಲು ತರಹ ಕೂರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಆ ಭಾಗವನ್ನು ರೆಕಾರ್ಡಿನಿಂದ ತೆಗೆದುಹಾಕಿ ಎಂದು ಆರ್ಡರ್ ಮಾಡಿದ್ದೇನೆ

ಶ್ರೀ ಬಿ. ಬಸವಲಿಂಗಪ್ಪ.—ನೀವು ಕಲ್ಲು ಎಂದು ನಾನು ಹೇಳಲಿಲ್ಲ. ಆದ್ದರಿಂದ ನೀವು ಯಾವ ಭಾಗವನ್ನು ಎಕ್ಸ್‌ಪಂಜ್ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು.—ನೀವು ಹಿರಿಯ ಸದಸ್ಯರಾಗಿದ್ದೀರಿ. ಆದ್ದರಿಂದ ಇಲ್ಲಿ ಯಾವ ತರಹ ಮಾತನಾಡಬೇಕು ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಹಳ್ಳಿಯಲ್ಲಿ ಮಾತನಾಡುವ ತರಹ ಇಲ್ಲಿ ಮಾತನಾಡಬಾರದು.

ಶ್ರೀ ಬಿ. ಬಸವಲಿಂಗಪ್ಪ.—ನೀವೂ ಸಹ ಅಧ್ಯಕ್ಷರು ಎಂದು ತಿಳಿದುಕೊಂಡು ಇಲ್ಲಿ ಮಾತನಾಡಬೇಕು.

---

x ಉಪಾಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ.

ಉಪಾಧ್ಯಕ್ಷರು.—ನೀವೂ ಸಹ ಸದಸ್ಯರಾಗಿ ಈ ಮನೆಗೆ ಗೌರವ ತರುವ ರೀತಿಯಲ್ಲಿ ಮಾತನಾಡಬೇಕು. ಕಲ್ಲಿನ ತರಹ ಕುಳಿತುಕೊಳ್ಳುವುದಕ್ಕೆ ಇಲ್ಲಿ ಯಾರೂ ಬಂದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಗೌರವ ಏನ್ರಿ ನಾವೆಲ್ಲಾ 20 ವರ್ಷಗಳಿಂದ ಇದ್ದೇವೆ, ನಮಗೆ ಗೊತ್ತಿದೆ, ಯಾವುದು ಅನ್‌ಪಾರ್ಲಿಮೆಂಟರಿ, ಯಾವುದು ಪಾರ್ಲಿಮೆಂಟರಿ ಎಂದು.

ಉಪಾಧ್ಯಕ್ಷರು.—ನಾನು ಹೇಳಿದ್ದನ್ನು ದಯವಿಟ್ಟು ತಿಳಿದುಕೊಳ್ಳಿ. ನಮ್ಮ ನಿಮ್ಮ ನಡುವೆ ಅದೇಥ ಮಾತಿನ ಘರ್ಷಣೆಯನ್ನು ತೆಗೆದುಹಾಕಿ ಎಂದು ಹೇಳಿದೆ. ಆದರಲ್ಲಿ ಏನು ತಪ್ಪಿದೆ?

ಶ್ರೀ ಬಿ. ಬಸವಲಿಂಗಪ್ಪ.—ಯಾವ ವಿಚಾರ ಅದನ್ನು ಹೇಳಿ. ಕಲ್ಲು ಎನ್ನುವುದೋ ಮತ್ತೆ ಬೇರೆ ಎಲ್ಲವನ್ನೋ.

ಉಪಾಧ್ಯಕ್ಷರು.—ಕಲ್ಲು ಕುಳಿತ ಹಾಗೆ ಕುಳಿತಿದ್ದೀರಿ ಎಂದು ಹೇಳಿದ್ದನ್ನು ತೆಗೆಯಿರಿ ಎಂದು ಹೇಳಿದ್ದು.

ಶ್ರೀ ಬಿ. ಬಸವಲಿಂಗಪ್ಪ.—''ಕಲ್ಲು'' ಎಂಬುದನ್ನು ಮಾತ್ರ ತೆಗೆಯುತ್ತೀರಾ ಅಷ್ಟು ಹೇಳಿ ''ಕಲ್ಲು'' ತೆಗೆಯುತ್ತೇವೆ ಎಂದು ಹೇಳಿ ''ಗುಂಡಿ'' ತೆಗೀತೀರೋ ''ಕಲ್ಲು'' ತೆಗೀತೀರೋ ಹೇಳಿ.

ಉಪಾಧ್ಯಕ್ಷರು.—ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ಅಷ್ಟು ತೆಗೆಯಿರಿ, ಉಳಿದಿದ್ದೆಲ್ಲಾ ಇರಲಿ,

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಬಸವಲಿಂಗಪ್ಪನವರು ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿ ವಿಚಾರ ಹೇಳಿದರು. ಇಲ್ಲಿ ನಷ್ಟವಾಗಿದೆ, ಆ ನಷ್ಟಕ್ಕೆ ಕಾರಣರು ಯಾರು, ಅವರ ಮೇಲೆ ಇಂಡಿಯನ್ ಪೀನಲ್ ಕೋಡ್ ಪ್ರಕಾರ ಏನು ಕ್ರಮ ತೆಗೆದುಕೊಂಡಿರಿ ಕ್ರಮ ತೆಗೆದು ಕೊಳ್ಳಬೇಕು ಎಂದು ತುಂಬ ಆಗ್ರಹಪೂರ್ವಕವಾದಂಥ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಬಸವಲಿಂಗಪ್ಪನವರ ಸಲಹೆ ಅಪೂರ್ವವಾದಂಥಾದ್ದು; ಇಂಥಾದ್ದನ್ನು ಹಿಂದೆ ಯಾರೂ ಮಾಡಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಇವರು ಹೇಳಿದ ಈ ವಿಷಯವನ್ನು ವಾದದ ನಿರ್ಣಯವನ್ನು. ನಷ್ಟ ಅನುಭವಿಸುತ್ತಾ ಎಲ್ಲಾ ಕ್ಷೇತ್ರಗಳಲ್ಲೂ ಕೂಡ ಅನ್ವಯಿಸುವುದಕ್ಕೆ ಸನ್ಮಾನ್ಯ ಬಸವಲಿಂಗಪ್ಪನವರು ಒಪ್ಪಿಕೊಳ್ಳುತ್ತಾರೆಯೇ ಎನ್ನುವುದು ಮೊದಲನೇ ಪ್ರಶ್ನೆ, ಎರಡನೇ ಪ್ರಶ್ನೆ, ನಷ್ಟವಾಗಿದೆ ನಿಜ. ಅದಕ್ಕೆ ಕಾರಣಗಳು ಏನಿದೆ ಎನ್ನುವುದನ್ನು ಆ ವರದಿಯಲ್ಲಿ ಕೊಟ್ಟಿದ್ದೇವೆ. ಈ ಕಾರಣಗಳು ಸಾಧುವಾದುದಲ್ಲ, ಅಧಿಕಾರಿಗಳು ನಷ್ಟದಲ್ಲಿ ಶಾಮೀಲಾಗಿದ್ದಾರೆ ಎಂದು ಮೇಲುನೋಟಕ್ಕಾದರೂ ಗೊತ್ತಾಗಬೇಕಲ್ಲ. ಅದು ಗೊತ್ತಿಲ್ಲದೆ ಅಧಿಕಾರಿಗಳಿದ್ದಾರೆ, ನಷ್ಟವಾಗಿದೆ, ಅವರನ್ನು ಇಂಡಿಯನ್ ಪೀನಲ್ ಕೋಡ್ ಪ್ರಕಾರ ಜೈಲಿಗೆ ಹಾಕಿ ಅಥವಾ ಕೋರ್ಟ್ ಮುಂದೆ ನಿಲ್ಲಿಸಿ ಎಂದು ಹೇಳುವುದು ಅಷ್ಟು ಸಾಧು ಎಂದು ನನಗೆ ಕಾಣಿಸುವುದಿಲ್ಲ. ನಾನು ಅವರಿಗೆ ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಇನ್ನೂ ಪೂರ್ಣವಾಗಿ ಅಧ್ಯಯನ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾರ್ಕೆಟ್ ಕಾಂಪಿಟಿಷನ್‌ನಿಂದ ಎಂದು ಹೇಳುತ್ತಾರೆ. ಅದು ಅಷ್ಟೇ ಅಲ್ಲ, ಇದರಲ್ಲಿ ಅವ್ಯವಹಾರ, ನಡೆದಿದೆ ಎಂದು ಹೇಳಿದ್ದೇನೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲೂ ನಾವು ಹೇಳಿದ್ದೇವೆ, ಆದ್ದರಿಂದ ದಯಮಾಡಿ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ವಿಚಾರ ಮಾಡುತ್ತೇನೆ. ಅದು ಏತಕ್ಕೋಸ್ಕರ ಹೀಗೆ ಆಗಿದೆ ಎಂದು ನಾನು ಇದರ ಬಗ್ಗೆ ಪೂರ್ಣವಾಗಿ ವಿಚಾರ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜೂಗೌಡರು ಉತ್ಪಾದನಾ ವಿಷಯದಲ್ಲಿ ಹಲವಾರು ವಿಚಾರ ಏನು ಕೇಳಿದ್ದಾರೆ, ಅದಕ್ಕೆ ನನ್ನ ಹತ್ತಿರ ಅಂಕಿ ಅಂಶಗಳ ದೊಡ್ಡ ಪಟ್ಟಿ ಇದೆ. ಅದರ ಪ್ರಕಾರ ಅವರು ಹೇಳಿರತಕ್ಕಂಥ ಅಂಕಿಅಂಶಗಳಲ್ಲಿ ಏನೂ ಹುರುಳಿಲ್ಲ ಎಂದುಹೇಳಿ ಅಷ್ಟಕ್ಕೆ ಮಾತ್ರ ನಾನು ನನ್ನ ಮಾತನ್ನು ಮೊಟಕುಗೊಳಿಸುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ಸರ್ಕಾರಿ ಕಾರ್ಖಾನೆ ವಿಚಾರ ಈಗಾಗಲೇ ಪ್ರಸ್ತಾಪವಾಗಿದೆ. ಇನ್ನು ಕೊಳ್ಳೇಗಾಲದಲ್ಲಿರತಕ್ಕಂಥ ನೂಲು ಬಿಚ್ಚುವ ಕಾರ್ಖಾನೆ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ, ಅದರಲ್ಲೂ ಕೂಡ ಇದೇರೀತಿಯಾಗಿ ತೊಂದರೆಗಳಿದ್ದುವು. ನಾನು ವರದಿಯಲ್ಲಿ ಕೊಟ್ಟಿದ್ದೇನೆ.

ಅವುಗಳನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆಯನ್ನೂ ಕೂಡ ಈ ಸಮಯದಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಅವರು ಸ್ಪೇರ್‌ಪಾರ್ಟ್ಸ್‌ಗೇನೇ ಲಕ್ಷಗಟ್ಟಲೆ ಖರ್ಚಾಗಿದೆ ಎಂದು ಹೇಳಿದ್ದಾರೆ ಇದು ಉತ್ಪ್ರೇಕ್ಷೆಯ ಮಾತು, ಸ್ಪೇರ್‌ಪಾರ್ಟ್ಸ್‌ಗೆ ಅಷ್ಟು ಹಣ ಖರ್ಚಾಗಿದೆ, ದುರುಪಯೋಗವಾಗಿದೆ ಎನ್ನುವ ರೀತಿಯಲ್ಲಿ ಅವರು ಮಾತನಾಡಿದ್ದಾರೆ, ಅದು ಸರಿಯಾದುದಲ್ಲ ಎಂದು ನಾನು ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಮೇಲೆ ನೈಲ್ ದಾರ ಕೊಂಡುಕೊಳ್ಳತಕ್ಕಂಥ ವ್ಯವಹಾರದಲ್ಲಿ ೧೧ ಲಕ್ಷ ರೂಪಾಯಿ ನಷ್ಟವಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಈರೀತಿ ನಷ್ಟವಾಗಿರುವುದು ನಿಜ. ಈ ರೀತಿ ನಷ್ಟಕ್ಕೆ ಕಾರಣಗಳು ಏನು ಎಂದು ವಿಚಾರಮಾಡಿ ವರದಿ ಸಲ್ಲಿಸುವುದಕ್ಕೋಸ್ಕರ ಸನ್ಮಾನ್ಯ ಗೋಶಾಲ್‌ರವರನ್ನು ಸರ್ಕಾರ ನೇಮಕ ಮಾಡಿತ್ತು. ಅವರ ವರದಿ ಈಗ ಬಂದಿದೆ ಎಂದು ಕೇಳಿದ್ದೇನೆ, ಅದನ್ನು ನಾನು ನೋಡುವುದಕ್ಕೆ ಆಗಲಿಲ್ಲ. ಆ ವರದಿ ಆಧಾರದ ಮೇಲೆ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇನ್ನು ರೇಷ್ಮೆ ಮಾರಾಟ ಮಂಡಲಿಯವರು ಜವಳಿಯನ್ನು ಖರೀದಿ ಮಾಡಿ ಲಕ್ಷಗಟ್ಟಲೆ ನಷ್ಟವನ್ನು ಹೊಂದಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಹೌದು, ಅವರು ಕೊಂಡಿದ್ದು ಉಂಟು. ರೇಷ್ಮೆ ನೂಲನ್ನು ಗ್ರಾಹಕ ನೇಕಾರರಿಗೆ ಸಹಾಯ ಮಾಡಬೇಕೆಂದು ಈ ಕೆಲಸವನ್ನು ಮಂಡಲಿಯು ಮಾಡಿದೆ. ಇದರಲ್ಲಿ ಅವರು ನಷ್ಟವನ್ನು ಅನುಭವಿಸಿದ್ದಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ನಾನು ಹೇಳತಕ್ಕ ಮುಂದಿನ ಮಾತುಗಳನ್ನು ಮಾನ್ಯ ಸದಸ್ಯರು ದಯವಿಟ್ಟು ಕೇಳಬೇಕು. ಮಾನ್ಯ ರಾಜುಗೌಡರು ಏನು ಹೇಳಿದರೆಂದರೆ, ಕೊಯಮತ್ತೂರು ವೆಂಕಟೇಶ್ವರ ಸಿಲ್ಕ್‌ನವರಿಂದ ಮತ್ತು ತಮಿಳ್ನಾಡಿನಿಂದ ರೇಷ್ಮೆ ಜವಳಿಯನ್ನು ಖರೀದಿ ಮಾಡಿದ್ದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವರಿಂದ ಕೊಂಡುಕೊಂಡಿದ್ದು ನಿಜ, ರೇಷ್ಮೆ ನೂಲನ್ನು ಕೊಂಡುಕೊಂಡಿದ್ದನ್ನು ಮಾರಾಟ ಮಾಡಿದ್ದೂ ನಿಜ. ಇದುವರೆಗಿನ ವ್ಯವಹಾರದಲ್ಲಿ ಒಟ್ಟು ೨೩,೬೩೨ ರೂಪಾಯಿ ಲಾಭ ಬಂದಿದೆ, ಇಲ್ಲಿ ಆಗಿರತಕ್ಕ ವ್ಯವಹಾರದಲ್ಲಿ ಮೊದಲು ನಷ್ಟ ಎಂದು ಕಂಡುಬಂತು. ನಿನ್ನೆಮೊನ್ನೆಯವರೆಗೆ ಪೂರ್ಣವಾದ ಲೆಕ್ಕವನ್ನು ಇದರ ಬಗ್ಗೆ ತರಿಸಿ ಸರಿಯಾಗಿ ಲೆಕ್ಕ ಹಾಕಿ ಕೊಡಿ ಎಂದು ನಾನು ಕೇಳಿದಾಗ ನನಗೆ ಬಂದ ಮಾಹಿತಿಯ ಪ್ರಕಾರ ೨೩,೬೩೨ ರೂಪಾಯಿಗಳ ಲಾಭವಾಗಿದೆ. ಆದರೆ ಇನ್ನೂ ಖರ್ಚಾಗದೇ ಉಳಿದಿರತಕ್ಕ ಜವಳಿ ೨,೭೧೧ ಮೀಟರ್‌ನಷ್ಟಿದೆ. ಈಗಿನ ಅದರ ಬೆಲೆ ೧,೯೩,೫೭೦ ರೂಪಾಯಿಗಳು. ಇದನ್ನೆಲ್ಲಾ ಪೂರ್ಣವಾಗಿ ಮಾರಾಟ ಮಾಡಿದರೆ, ಇದರಲ್ಲಿ ಏನು ಹಣ ಬರುತ್ತದೆ. ಆದಷ್ಟು ಲಾಭ ಅಂತ ಒಂದು ವೇಳೆ ಇದರಲ್ಲಿ ಏನಾದರೂ ನಷ್ಟವಾದರೆ ಅದು ನಷ್ಟ ಆದಂತಾಗುತ್ತದೆ. ಆದರೆ ಮಾನ್ಯ ಸದಸ್ಯರು ಈ ವ್ಯವಹಾರದ ಬಗ್ಗೆ ಬಹಳ ತೀಕ್ಷ್ಣವಾಗಿ ಮಾತನಾಡಿದ್ದರಲ್ಲಿ ಒಂದಿಷ್ಟೂ ಕೂಡ ಹುರುಳಿಲ್ಲ. ಅವರ ಮಾತು ಸಮರ್ಪಕವಾದುದಿಲ್ಲ. ಅವರು ವ್ಯವಹಾರವನ್ನು ಮಾಡಿದ್ದಾರೆ ನಿಜ. ಆದರೆ ಎಚ್ಚರಿಕೆಯಿಂದ ಅದನ್ನು ಮಾಡಬೇಕಾಗಿತ್ತು, ಯಾವುದೇ ಆಗಲಿ ವ್ಯವಹಾರವನ್ನು ಮಾಡಿದ ಮೇಲೆ ಮಾರ್ಕೆಟ್‌ನಲ್ಲಿ ಬೆಲೆ ಬಿದ್ದುಹೋದರೆ ಅದನ್ನು ಕಡಿವಾಣ ಹಾಕಿ ನಿಯಂತ್ರಣದಲ್ಲಿಟ್ಟುಕೊಳ್ಳುವುದಕ್ಕೆ ಯಾವ ವ್ಯಾಪಾರಗಾರರಿಗೂ ಸಾಧ್ಯವಾಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಈಗಾಗಲೇ ಕರ್ನಾಟಕ ರೇಷ್ಮೆ ಉದ್ದಿಮೆಗಳ ಬಗ್ಗೆ ಉತ್ತರವನ್ನು ಹೇಳಿದ್ದೇನೆ.

ಇನ್ನು ಕೊನೆಯದಾಗಿ ಪ್ರಸ್ತಾಪ ಮಾಡಿರತಕ್ಕದ್ದು ಶೈತ್ಯಾಗಾರದ ಬಗ್ಗೆ. ಇದನ್ನು ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಅವರು ಏನು ಭಾಷಣ ಮಾಡಿದಾರೆಂಬ ಬಗ್ಗೆ ಒಂದು ನಕಲನ್ನು ನಾನು ತಮ್ಮ ಆಫೀಸಿನಿಂದ ತರಿಸಿ ಇಟ್ಟುಕೊಂಡಿದ್ದೇನೆ. ಇದುವರೆಗೆ ಇದು ಇಂಪ್ಲಿಮೆಂಟ್ ಆಗಿಲ್ಲ, ಮೋಸವಾಗಿದೆ, ಇಲ್ಲಿ ಏನೋ ನಡೆದಿದೆ, ಈ ಬಗ್ಗೆ ತನಿಖೆ ಮಾಡಬೇಕು, ಇಲ್ಲಿ ನಡೆದಿರುವ ಭ್ರಷ್ಟಾಚಾರ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆಂದು ಅವರು ಹೇಳಿದ್ದಾರೆ. ಮಾನ್ಯ ವೆಂಕಟರಾಮಯ್ಯನವರು ಟೀಕೆಯಲ್ಲೂ ಉತ್ಪ್ರೇಕ್ಷೆಯನ್ನು ಉಪಯೋಗ ಮಾಡತಕ್ಕದ್ದು ಸರ್ವೇಸಾಮಾನ್ಯ. ಉತ್ಪ್ರೇಕ್ಷೆಗೆ ಮೂಲ ಸಾಧನವಾದ ಸತ್ಯ ಅದರಲ್ಲಿ ಇರಬೇಕು. ಅವರ ಆಪಾದನೆಯಲ್ಲಿ ಮೂಲ ಸಾಧನ ಸಂಪತ್ತಾದ ಸತ್ಯತೆ ಇಲ್ಲವೆಂದು ನಾನು ಬಹಳ ಮರ್ಯಾದೆಯಿಂದ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧಪಕ್ಷದಲ್ಲಿದ್ದಾಗ ಉತ್ಪ್ರೇಕ್ಷೆಯನ್ನು ಮಾಡಬೇಕಾಗುತ್ತದೆ, ಆದರೆ ಉತ್ಪ್ರೇಕ್ಷೆಯ ಭಾಷೆ ಎಲ್ಲಿದೆ ಅದರ ಹಿಂದೆ ಕಿಂಚಿತ್ತಾದರೂ ಸತ್ಯದ ಸೋಗು ಇರಬೇಕಲ್ಲಾ, ನಾವೂ ಕೂಡ ಉತ್ಪ್ರೇಕ್ಷೆ ಮಾಡುತ್ತೇವೆ, ವಕೀಲರಾಗಿ ಉತ್ಪ್ರೇಕ್ಷೆ ಮಾಡುತ್ತೇವೆ, ವಾದ ಮಾಡುವಾಗ ಉತ್ಪ್ರೇಕ್ಷೆ ಮಾಡುತ್ತೇವೆ, ರಾಜಕೀಯ ಭಾಷಣವನ್ನು ಮಾಡಿದಾಗ ಮಾಡುತ್ತೇವೆ. ಅದು ಅನಿವಾರ್ಯ. ಆದರೆ ಸತ್ಯವನ್ನು ಸಾವಿರಾರು ಮೈಲಿ ದೂರ ಬಿಟ್ಟು

ಮಾತನಾಡುವುದು ರಂಜನೀಯವಾಗಿರುವುದಲ್ಲದೆ ತಪ್ಪಾಗುತ್ತದೆಂದು ನಾನು ಅವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶೈತ್ಯಾಗಾರ ನಿರ್ಮಾಣ ತಡವಾಗಿದೆ, ನಿಜ. ಕಾರಣ ಏನೆಂದರೆ, ಇದರಲ್ಲಿ ೩ ಜನರು ಟೆಂಡರ್‌ನ್ನು ಹಾಕಿದರು ಅವರು ಯಾರೆಂದರೆ, ಬ್ಲೂ ಸ್ಟಾರ್ ಇಂಡಿಯ ಲಿಮಿಟೆಡ್, ಲಕ್ಕಿ ಗೋಲ್ಡ್ ಸ್ಟಾರ್ ಇಂಟರ್‌ನ್ಯಾಷನಲ್, ದಕ್ಷಿಣ ಕೊರಿಯಾ; ಮತ್ತು ಇನ್ನೊಂದು, ಮಾರ್ಬೇನಿ ಕಾರ್ಪೊರೇಷನ್ ಜಪಾನ್, ಈ ಪೈಕಿ ಬ್ಲೂ ಸ್ಟಾರ್ ಇಂಡಿಯಾ ಲಿಮಿಟೆಡ್‌ನವರು ಹಾಕಿದಂಥ ಟೆಂಡರ್‌ನ್ನು ಮೊದಲೇ ರಿಜೆಕ್ಟ್ ಮಾಡಿದರು. ಇನ್ನು ಉಳಿದವರು ಎಂದರೆ ಲಕ್ಕಿ ಗೋಲ್ಡ್ ಸ್ಟಾರ್, ಮತ್ತು ಮಾರ್ಗೋನಿ ಕಾರ್ಪೊರೇಷನ್, ಜಪಾನ್, ಇವರದ್ದು.

ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಾರಂಭದ ಹಣ ಇದಕ್ಕೆ ಒಂಭತ್ತೂವರೆ ಕೋಟಿ ರೂಪಾಯಿ ಇಟ್ಟದ್ದು. ಇದರಲ್ಲಿ ಟೆಂಡರ್ ಎಷ್ಟಕ್ಕೆ ಮಾಡಿದ್ದು ಎಂದರೆ ಲಕ್ಕಿಗೋಲ್ಡ್ ಸ್ಟಾರ್ ೮,೧೬,೨೫,೯೪೪ ರೂಪಾಯಿಗಳಿಗೆ ಟೆಂಡರ್ ಹಾಕಿದ್ದರು. ಮಾರ್ಗೋನಿ ಕಾರ್ಪೊರೇಷನ್, ಜಪಾನ್‌ನವರು ೯,೮೦,೮೬,೭೪೮ ರೂಪಾಯಿಗಳಿಗೆ ಟೆಂಡರು ಹಾಕಿದ್ದರು. ಇವರದು ಜಾಸ್ತಿ, ಲಕ್ಕಿಗೋಲ್ಡ್ ಸ್ಟಾರ್‌ರವರದು ಕಡಿಮೆ ಇತ್ತು. ಇದನ್ನು ಪರಿಶೀಲನೆ ಮಾಡಿದವರು ಶೈತ್ಯಾಗಾರ ನಿರ್ಮಾಣದ ಬಗ್ಗೆ ಟೆಂಡರುಗಳನ್ನು ಪರಿಶೀಲಿಸಲು ಜಪಾನಿನ ಟೋಯಿಯೋ ಟ್ರೇಡಿಂಗ್ ಕಂಪನಿಯವರ ಸಲಹೆಯನ್ನು ಪಡೆಯಲಾಗಿತ್ತು. ಇದು ಒಂದು ಮತ್ತೆ ಟೆಂಡರ್ ಬಗ್ಗೆ ಪರಿಶೀಲನೆ ಮಾಡಿ ಸಲಹೆ ಮಾಡಲು ತಜ್ಞರ ಸಮಿತಿ ಟಾಸ್ಕ್‌ಫೋರ್ಸ್ ಸಮಿತಿ ಎಂದು ಅದನ್ನು ಮಾಡಿತ್ತು. ಇದು ಆದಮೇಲೆ ವಿಶೇಷ ಅಧಿಕಾರ ಸ್ಪೆಷಲಿ ಎಂಬ ಒಂದು ಸಮಿತಿ ಇದೆಲ್ಲ ಆದಮೇಲೆ ಕಡಿಮೆ ಪ್ರಮಾಣದ ಟೆಂಡರನ್ನು ಅಂದರೆ ಲಕ್ಕಿ ಗೋಲ್ಡ್ ಸ್ಟಾರ್‌ಗೆ ನಾವು ಒಪ್ಪಿಕೊಳ್ಳಬಹುದೆಂದು ಸರ್ಕಾರ ಒಪ್ಪಿಕೊಂಡಿತು. ಆದರೆ ವರ್ಲ್ಡ್ ಬ್ಯಾಂಕ್‌ನವರು ಒಪ್ಪಿಕೊಳ್ಳಲಿಲ್ಲ. ಆದ್ದರಿಂದ ಜಾಸ್ತಿ ಅಮೌಂಟ್ ಹಾಕಿದಂಥ ಮಾರ್ಗೋನಿ ಕಾರ್ಪೊರೇಷನ್‌ನವರದನ್ನು ಒಪ್ಪಿಕೊಳ್ಳಬೇಕಾಯಿತು. ಇದೆಲ್ಲ ಆಗುವ ಹೊತ್ತಿಗೆ ಯಾನ್ ಬೆಲೆ ಜಾಸ್ತಿಯಾಯಿತು. ಈ ಕಾರಣದಿಂದ ಈಗಿನ ದರದ ಪ್ರಕಾರ ೩೧ ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿಯಾಯಿತು. ೧೭ ಕೋಟಿ ಮೆಷನರಿಗೆ ೧೪ ಕೋಟಿ ಸುಂಕಕ್ಕೆ ಒಟ್ಟು ೩೧ ಕೋಟಿ. ಇಲ್ಲಿ ಯಾರಿಗೂ ಅನ್ಯಾಯವಾಗಿಲ್ಲ, ಮೋಸವಾಗಿಲ್ಲ, ವಿಳಂಬವಾಗಿದೆ, ವಿಳಂಬವಾಗಿರುವುದಕ್ಕೆ ಕಾರಣವನ್ನು ಹೇಳಿದೆ. ಸನ್ಮಾನ್ಯ ವೆಂಕಟರಾಮಯ್ಯನವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಇದರ ಬಗ್ಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲೋಯಸ್ಟ್ ಟೆಂಡರನ್ನು ಬಿಟ್ಟು ಹೈಯಸ್ಟ್ ಟೆಂಡರ್‌ಗೆ ಕೊಟ್ಟಿದ್ದೀರಿ ಅದರ ಬಗ್ಗೆ...

ಶ್ರೀ ಎ ಲಕ್ಷ್ಮೀಸಾಗರ್.—ಅದರ ಬಗ್ಗೆ ಮಾತನಾಡಲಿ. ಆದರೆ ಮೋಸ ಆಗಿದೆ ಎಂದು ಹೇಳು ವುದಲ್ಲ. ತಡವಾಗಿದೆ, ಇಂಪ್ಲಿಮೆಂಟ್ ಆಗಿಲ್ಲವೆಂದು ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರ ಬಗ್ಗೆ ಹೋದಸಲ ಕಾಲಿಂಗ್ ಅಟೆಂಷನ್ ನೋಟಿಸ್ ಕೊಟ್ಟಿದ್ದೇವೆ.

ಎ. ಲಕ್ಷ್ಮೀಸಾಗರ್.—ಆದ್ದರಿಂದ ೧೪ ಕೋಟಿ ರೂಪಾಯಿ ಸುಂಕವನ್ನು ಮನ್ನಾ ಮಾಡ ಬೇಕೆಂದು ಹೇಳಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಬರೆದಿದ್ದಾರೆ. ಇದು ೧೪ ಕೋಟಿ ರೂಪಾಯಿಗಳಾಗುತ್ತದೆ. ಇನ್ನು ೧೭ ಕೋಟಿ ರೂಪಾಯಿಗಳು ವಿಶ್ವಬ್ಯಾಂಕ್‌ನವರಿಂದ ರಿಲೀಸ್ ಆಗಬೇಕಾಗಿದೆ. ಇದರ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಸುಮಾರು ೩ ಕೋಟಿ ರೂಪಾಯಿ ಗಳಿಗಿಂತಲೂ ಜಾಸ್ತಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟಿಗೋಸ್ಕರ ಇಷ್ಟು ಕೆಲಸ ಮಾಡಿದ್ದೇವೆ. ಇಷ್ಟು ಕೆಲಸ ನಡೆದಿದೆ. ಇದರ ಬಗ್ಗೆ ವಿಚಾರಣೆ ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ಸನ್ಮಾನ್ಯ ವೆಂಕಟರಾಮಯ್ಯನವರಿಗೆ ಅವರ ಗೈರುಹಾಜರಿಯಲ್ಲಿ ತಿಳಿಸ ಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ ಇನ್ನು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲ ವಿಚಾರಗಳನ್ನು ಪಟ್ಟಿ ಮಾಡಿ ಎಲ್ಲ ವಿಷಯಗಳ ಬಗ್ಗೆ ಆದಷ್ಟು ಪೂರ್ಣವಾದಂಥ, ಸಮಾಧಾನಕರವಾದಂಥ ಉತ್ತರ ನೀಡಿ ದ್ದೇನೆಂದು ಭಾವಿಸುತ್ತೇನೆ ನನ್ನಿಂದ ಸಾಕ್ಷ್ಯಾಧಾರಪೂರ್ವಕವಾಗಿ ಉತ್ತರ ಬಂದಿದೆ ಎಂದು ನಾನು ಅಂದುಕೊಂಡು, ಅವರಿಗೆ ಸಮಾಧಾನವಾಗಿದೆ ಎಂದು ನಂಬಿದ್ದೇನೆ. ನಾನು ಕೋರ್ಟಿನಲ್ಲಿಯೂ ಕೂಡ ಹೀಗೆಯೇ ಹೇಳುವುದು.

ಸನ್ಮಾನ್ಯ ಅಧ್ಯಕ್ಷರೇ ಇನ್ನು ನನ್ನ ಇಲಾಖೆಯ ಖಾತೆಯ ಬಗ್ಗೆ ಆಗಿರತಕ್ಕಂಥ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬಗ್ಗೆ ಹೇಳಲಿಲ್ಲ. ಮತ್ತು ಕೆ.ಎಸ್.ಐ.ಸಿ. ಬಗ್ಗೆಯೂ ಏನೂ ಹೇಳಲಿಲ್ಲ.

ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಈಗ ಬಂದರು ಎಂದು ಕಾಣುತ್ತದೆ. ನಾನು ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ನೀವು ನನ್ನ ಕಡೆ ಬನ್ನಿ ಮಾತನಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಲ್ಲಿಯವರೆಗೂ ನೀವು ಇರಬೇಕಲ್ಲ.

ಎ. ಲಕ್ಷ್ಮೀಸಾಗರ್.—ನನಗಿಂತಲೂ ಚೆನ್ನಾಗಿ ಕೆಲಸ ಮಾಡುವವರಿದ್ದಾರೆ. ನಾನು ಬಿಡಿ. ಅವರೆಲ್ಲರೂ ಇದ್ದಾರೆ. ನೀವು ಅದರ ಬಗ್ಗೆ ಸಂಶಯವನ್ನು ಇಟ್ಟುಕೊಳ್ಳಬಾರದು.

೨-೩೦ ಪಿ. ಎಂ.

ಮಾನ್ಯ ರಾಜುಗೌಡರು ನ್ಯಾಯಾಲಯಗಳ ಬಗ್ಗೆ ಮಾತನಾಡುತ್ತಾ ಪೋಸ್ಟ್‌ಗಳು ಖಾಲಿ ಇರಬಾರದೆಂದು ಹೇಳಿದ್ದಾರೆ. ರಾಜೂಗೌಡರಲ್ಲಿ ನಾನು ಮನವಿ ಮಾಡುವುದು ಇಷ್ಟೆ. ಇದು ಹೈಕೋರ್ಟಿಗೆ ಸಂಬಂಧಪಟ್ಟಿದ್ದು. ನಾನು ಅವರಿಗೆ ವಿಚಾರ ತಿಳಿಸುತ್ತೇನೆಂದು ಹೇಳಿದ್ದೇನೆ. ಮಾನ್ಯ ಪುಟ್ಟಸ್ವಾಮಿಯವರೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಕಾನೂನು ಪದವೀಧರರಿಗೆ ಸ್ಟೈಫಂಡ್ ಏನು ಕೊಡುತ್ತಿದ್ದೇವೆ ಅದನ್ನು ಮೊದಲು ೩ ವರ್ಷದಲ್ಲಿ ಕಡಿಮೆ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಆ ವರ್ಷ ಇದ್ದದ್ದು ಅಷ್ಟೆ. ನೂರು ರೂಪಾಯಿ ಕೊಡಬೇಕೆಂದು ಇರಲಿಲ್ಲ. ಕೊಡಬೇಕಾದುದನ್ನು ಪರಿಪೂರ್ಣವಾಗಿ ಕೊಟ್ಟಿದ್ದೇವೆ. ಮುಂದಿನ ವರ್ಷಗಳಲ್ಲಿ ವರ್ಷಕ್ಕೆ ನೂರರಂತೆ ಕೊಡುತ್ತೇವೆ. ಕೊಳ್ಳೇಗಾಲದಲ್ಲಿ ಅಡಿಷನಲ್ ಮುನ್ಸೀಫ್ ಕೋರ್ಟನ್ನು ಪ್ರಾರಂಭಿಸಬೇಕೆಂದು ಹೇಳಿದ್ದೀರಿ. ಈ ವರ್ಷ ಅದರ ಪ್ರಾರಂಭ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರತಿಯೊಂದು ಅಧೀನ ನ್ಯಾಯಾಲಯಕ್ಕೂ ದೂರವಾಣಿ ಬೇಕೆಂದು ಕೇಳಿದ್ದಾರೆ. ಸರ್ಕಾರ ಹೋದ ವರ್ಷ ಎಲ್ಲಾ ಕೋರ್ಟುಗಳಿಗೂ ಟೆಲಿಫೋನ್ ಸಂಪರ್ಕ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದೆ. ಹಂತಹಂತವಾಗಿ ಕೆಲಸ ಮಾಡಬೇಕೆಂದು ಸೂಚನೆ ಮಾಡಿ ಜಿಲ್ಲಾ ನ್ಯಾಯಾಧೀಶರಿಗೆ ಎಲ್ಲರಿಗೂ ಟೆಲಿಫೋನ್ ಕೊಡತಕ್ಕ ವ್ಯವಸ್ಥೆ ಆಗಿದೆ. ನಮ್ಮ ಕಡೆಯಿಂದ ಪೂರಾ ಹಣ ಪಾವತಿಯಾಗಿದೆ ಕೇವಲ ೩ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ ಪೋಸ್ಟಲ್ ಡಿಪಾರ್ಟ್‌ಮೆಂಟ್‌ನಿಂದ ಕೊಟ್ಟಿಲ್ಲ. ನಮ್ಮ ಕಡೆಯಿಂದ ಮಾಡಬೇಕಾದ ಕೆಲಸ ಏನೂ ಇಲ್ಲ. ಕೆಲವು ಕಡೆ ಸಿವಿಲ್ ಜಡ್ಜ್‌ಗಳಿಗೆ ಕೊಟ್ಟಿದೆ, ಮತ್ತೆ ಕೆಲವು ಕಡೆ ಮುನ್ಸೀಫರಿಗೆ ಕೊಟ್ಟಿದೆ. ರಾಜಿ ಮಾಡಿಕೊಂಡಾಗ ಕೋರ್ಟ್ ಫೀ ಅನ್ನು ವಜಾ ಮಾಡಬೇಕೆಂದು ಹೇಳಿದರು. ವಜಾ ಮಾಡತಕ್ಕ ಕಾನೂನು ಇದೆ. ಆದರೆ ಹಿಯರಿಂಗಿಗೆ ಬರುವುದಕ್ಕೆ ಮೊದಲೇ ಎರಡೂ ಕಡೆಯವರು ರಾಜಿ ಮಾಡಿಕೊಂಡರೆ ಅರ್ಧ ಕೋರ್ಟ್ ಫೀ ಅನ್ನು ಈಗಲೂ ಹಾಕುತ್ತೇವೆ. ಹಿಯರಿಂಗ್ ನಂತರ ರಾಜಿ ಮಾಡಿಕೊಂಡರೆ ವಜಾ ಆಗುವುದಿಲ್ಲ. ಡಿಫಿಸಿಟ್ ಕೋರ್ಟ್ ಫೀ ಅನ್ನು ಕಲೆಕ್ಟ್ ಮಾಡಿಲ್ಲವೆಂದರು. ಡಿಫಿಸಿಟ್ ಕೋರ್ಟ್ ಫೀ ಅನ್ನು ಕಲೆಕ್ಟ್ ಮಾಡಲೇಬೇಕಾಗುತ್ತದೆ, ಮಾಡುತ್ತೇವೆ. ಅದನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ರಾಜೂಗೌಡರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಫ್ಯಾಮಿಲಿ ಕೋರ್ಟ್‌ಗಳನ್ನು ಎಲ್ಲಾ ಕಡೆ ಮಾಡಬೇಕೆಂದು ಹೇಳಿದ್ದಾರೆ. ಫ್ಯಾಮಿಲಿ ಕೋರ್ಟ್ ಆ್ಯಕ್ಟ್ ಪ್ರಕಾರ ಒಂದು ಮಿಲಿಯನ್ ಜನ ಇರತಕ್ಕ ಊರುಗಳಲ್ಲಿ ಫ್ಯಾಮಿಲಿ ಕೋರ್ಟ್ ಮಾಡಬೇಕೆಂದು ಇದೆ. ಒಂದು ಮಿಲಿಯನ್ ಅಂದರೆ ಹತ್ತು ಲಕ್ಷ. ಕರ್ನಾಟಕದಲ್ಲಿ ಹತ್ತು ಲಕ್ಷ ಜನಸಂಖ್ಯೆ ಇರತಕ್ಕದ್ದು ಬೆಂಗಳೂರಿನಲ್ಲಿ ಮಾತ್ರ. ಇಲ್ಲಿ ಫ್ಯಾಮಿಲಿ ಕೋರ್ಟನ್ನು ಮಾಡಿದ್ದೇವೆ. ಅದು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಈಗಾಗಲೇ ಉತ್ತರಿಸಿದ್ದೇನೆ. ಅದನ್ನು ಸ್ಥಾಪಿಸಿ ಒಂದೂವರೆ ವರ್ಷವಾಗಿದೆ. ಒಟ್ಟು ಅದರ ಮುಂದಿರತಕ್ಕ ಕೇಸುಗಳು ೩೧೩೩. ಅದರಲ್ಲಿ ಬೇರೆ ಕೋರ್ಟುಗಳಿಂದ ಬಂದಿರತಕ್ಕವು ೨೦೩೬. ಮತ್ತು ಆ ಕೋರ್ಟ್ ಸ್ಥಾಪನೆಯಾದಮೇಲೆ ಅಲ್ಲೇ ದಾಖಲಾದ ಕೇಸುಗಳು ೧೦೯೭. ಮೂರು ಸಾವಿರ ಚಿಲ್ಲರೆ ಕೇಸುಗಳಲ್ಲಿ ಒಂದು ಸಾವಿರ ಕೇಸುಗಳನ್ನು ತೀರ್ಮಾನ ಮಾಡಿದ್ದಾರೆ. ಅಂದರೆ ಮೂರನೇ ಒಂದು ಭಾಗದಷ್ಟು ಕೇಸುಗಳನ್ನು ಒಂದೂವರೆ ವರ್ಷದಲ್ಲಿ ನಿಖಾಲೆ ಮಾಡಿದ್ದಾರೆ. ಇದು ಒಳ್ಳೆಯ ಪ್ರಗತಿ ಅನ್ನಿಸುತ್ತದೆ. ಇಂಥ ಕೋರ್ಟುಗಳನ್ನು ಬೇರೆ ಕಡೆ ಮಾಡ

ತಕ್ಕ ಅಭಿಪ್ರಾಯ ಸರ್ಕಾರಕ್ಕೆ ಇದೆ. ಅಗತ್ಯ ಕಂಡುಬಂದರೆ ಅಂದರೆ ಸಾಕಷ್ಟು ಕೇಸುಗಳು ಇವೆ ಎಂದು ಕಂಡುಬಂದರೆ ಆದರ ಬಗ್ಗೆ ಗಮನಪರಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅತ್ಯಾಚಾರ, ವರದಕ್ಷಿಣೆ ಪಿಡುಗುಗಳಿಂದ ಉಂಟಾಗಿರುವ ಕೇಸುಗಳ ಬಗ್ಗೆ ಕೋರ್ಟುಗಳನ್ನು ಮಾಡಬೇಕೆಂದು ಹೇಳಿದ್ದಾರೆ. ರಾಜೂಗೌಡರು ನನ್ನ ಮಾತನ್ನು ಒಪ್ಪುತ್ತಾರೆಂದು ಭಾವಿಸಿದ್ದೇನೆ. ಒಂದು ಕೋರ್ಟ್ ಸ್ಥಾಪನೆಯಾಗಬೇಕಾದರೆ ಸಾಕಷ್ಟು ಕೆಲಸ ಇರಬೇಕು. ವರದಕ್ಷಿಣೆ ಅಥವಾ ಅತ್ಯಾಚಾರಕ್ಕೆ ಸಂಬಂಧಪಟ್ಟ ಕೇಸುಗಳು ಸಾಕಷ್ಟು ಇರಬೇಕಾಗುತ್ತದೆ. ಒಂದು ಕೋರ್ಟಿಗೆ ೩-೪ ಕೇಸುಗಳು ಇದ್ದರೆ ಆಗುವುದಿಲ್ಲ. ಇಂಥ ಕೇಸುಗಳು ಬಂದಾಗ ಅರ್ಹತೆ ಮತ್ತು ಪ್ರೈಯಾರಿಟಿ ಮೇಲೆ ತೀರ್ಮಾನ ಮಾಡಿ ನಿಖಾಲೆ ಮಾಡತಕ್ಕ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಳ್ಳಬೇಕೋ, ಯಾರಿಗೆ ತಿಳಿಸಬೇಕೋ ಅದನ್ನು ತಿಳಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಈ ಸದನದಲ್ಲಿ ಆಗತಕ್ಕ ಚರ್ಚೆಯ ಕರಡು ಪ್ರತಿಗಳನ್ನು ಆದಷ್ಟು ಜಾಗ್ರತೆ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಚರ್ಚೆಯಾದ ಎರಡನೇ ದಿನವೇ ಅದು ಸಿಗುತ್ತಿದೆ. ನಾನು ಇದಕ್ಕೆ ಉತ್ತರ ಹೇಳಬೇಕಾಗಿಲ್ಲ. ಏಕೆಂದರೆ ಇದು ವಿಧಾನ ಮಂಡಲದ ವ್ಯಾಪ್ತಿಗೆ ಸಂಬಂಧಪಟ್ಟ ವಿಚಾರ. ಆದರೆ ನನ್ನ ಅನುಭವಕ್ಕೆ ಬಂದ ವಿಚಾರವನ್ನು ನಾನು ಹೇಳುತ್ತೇನೆ. ನಾನು ಇಲ್ಲಿ ನಡೆದ ಚರ್ಚೆಯ ನಡವಳಿಕೆಯನ್ನು ನಾನೇ ತರಿಸಿಕೊಂಡಿದ್ದೇನೆ. ಎರಡನೇ ದಿನವೇ ನನ್ನ ಕೈಗೆ ಅದು ಬಂತು. ನಿಮಗೂ ಕೇಳಿದರೆ ಸಿಗುತ್ತದೆ. ಶಾಸಕರಿಗೆ ದೂರವಾಣಿ ಮತ್ತಿತರ ಸೌಲಭ್ಯವನ್ನು ಒದಗಿಸಬೇಕು ಎಂದು ಮಾನ್ಯ ವೆಂಕಟರಾಮಯ್ಯನವರು ಕೇಳಿದ್ದಾರೆ. ಅವರು ಕೇಳತಕ್ಕ ಡಿಮ್ಯಾಂಡ್‌ಗಳಿಗೆ ಆಕಾಶವೇ ಮಿತಿ. ನನ್ನ ಸ್ನೇಹಿತರು ಅವರು. ದೂರವಾಣಿ ಈಗಾಗಲೇ ಕೊಟ್ಟಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಇಲ್ಲಿ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಇದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲದಿರುವಾಗ ಚುಚ್ಚಿ ಚುಚ್ಚಿ ಏತಕ್ಕೆ ಹೇಳುತ್ತೀರಿ ?

ಶ್ರೀ ಎ, ಲಕ್ಷ್ಮೀಸಾಗರ್.—ನಾನು ಅವತ್ತೇ ಉತ್ತರ ಹೇಳಿದ್ದೇನೆ. ಸದ್ಯದಲ್ಲಿ ಈ ವಿಚಾರ ಸರ್ಕಾರದ ಮುಂದೆ ಇಲ್ಲ. ಶೀಘ್ರಲಿಪಿಗಾರರನ್ನು ಒದಗಿಸತಕ್ಕ ಕೆಲಸವನ್ನು ಅಧ್ಯಕ್ಷರ ಹತ್ತಿರ ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಹೆಚ್ಚಿಗೆ ಕೊಡುವ ವಿಚಾರ ದೊಡ್ಡದಲ್ಲ. ಅವರಿಗೆ ಅನುಕೂಲವಾಗತಕ್ಕ ಪ್ರಮಾಣದಲ್ಲಿ ಶೀಘ್ರಲಿಪಿಗಾರರನ್ನು ಒದಗಿಸಬೇಕೆಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಶಾಸಕರ ಭವನದ ರೂಮ್ ಬಾಯ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದ್ದಾರೆ, ಸ್ವಾಮಿ, ಅವರ ಮೇಲ ಆಡಳಿತಾಧಿಕಾರದ ಜವಾಬ್ದಾರಿ ನನ್ನದಲ್ಲ. ವಿಧಾನ ಮಂಡಲ ಸ್ವತಂತ್ರ ಆದ ಮೇಲೆ ಕೆಲವು ವಿಷಯಗಳಲ್ಲಿ ಸರ್ಕಾರ ಪ್ರವೇಶ ಮಾಡತಕ್ಕ ಅಧಿಕಾರವನ್ನು ಇಟ್ಟುಕೊಂಡಿಲ್ಲ. ಇದೆಲ್ಲಾ ಅವರಿಗೆ ಸಂಬಂಧಪಟ್ಟ ವಿಚಾರ. ಮತ್ತು ಶಾಸಕರ ಭವನದಲ್ಲಿ ಸರಿಯಾದ ಊಟ ತಿಂಡಿ ಸಿಗುತ್ತಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದು ನೋಡಲಿಲ್ಲ, ಕಾನೂನು ಮಂತ್ರಿ ಬಂದು ನೋಡಲಿಲ್ಲ, ಅಧ್ಯಕ್ಷರು ಬಂದು ನೋಡಲಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಇದನ್ನು ಹೇಳುವ ಸಮಯದಲ್ಲಿ ಅಂದು ಅಧ್ಯಕ್ಷಸ್ಥಾನದಲ್ಲಿದ್ದ ಅಧ್ಯಕ್ಷರೂ ಹೇಳಿದ್ದಾರೆ. ಶಾಸಕರ ಸಮಿತಿಯನ್ನು ನಾವು ಮಾಡಿದ್ದೇವೆ. ಯಾರಿಗೆ ಏನು ಬೇಕು ಎಂದು ಕೇಳುತ್ತಾರೋ ಅದನ್ನು ಒದಗಿಸತಕ್ಕ ಜವಾಬ್ದಾರಿ ಅವರಿಗೆ ಕೊಟ್ಟರೂ ಇನ್ನೂ ನಮ್ಮ ಹತ್ತಿರ ಸರಿ ಹೋಗಲಿಲ್ಲ ಎಂದು ಹೇಳುವುದು ಸರಿಯಲ್ಲ. ಶಾಸಕರಿಗಿಂತ ಶಕ್ತಿಯುತವಾದ ಜನ ಪ್ರಜಾಪ್ರಭುತ್ವದಲ್ಲಿ ಯಾರಿದ್ದಾರೆ ಸ್ವಾಮಿ ? ಸನ್ಮಾನ್ಯ ಕೆ.ಎಚ್. ಪಾಟೀಲರೇ ? ಸರ್ವಾಧಿಕಾರ ಎಂದು ಹೇಳುವುದಿಲ್ಲ. ಪೂರ್ಣಾಧಿಕಾರತ್ವ ಪಡೆದಿರುವವರು ಅವರು. ಜನರ ಪ್ರತಿನಿಧಿಗಳು. ಒಂದು ಕ್ಷೇತ್ರದಿಂದ ಒಬ್ಬ ಶಾಸಕ ಚುನಾಯಿತನಾದರೂ ಚುನಾಯಿತನಾದ ಮೇಲೆ ೩ ಕೋಟಿ ೭೦ ಲಕ್ಷ ಜನರ ಪ್ರತಿನಿಧಿಯಾಗಿ ಸಂವಿಧಾನದ ರೀತ್ಯ ಅಧಿಕಾರವಾಣಿಯಿಂದ ಮಾತನಾಡತಕ್ಕ ಶಕ್ತಿಯನ್ನು ಅವನು ಪಡೆದಿರುತ್ತಾನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಮೇಲೆ ಪ್ರಭಾವ ಬೀರತಕ್ಕ ಶಾಸಕರು ಬೇಕಲ್ಲ. ಅವರ ಮಾತು ಕೇಳುತ್ತೀರಿ. ಎಲ್ಲರ ಮಾತು ಎಲ್ಲಿ ಕೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನನಗಿಂತ ಹೆಚ್ಚಿಗೆ ಪ್ರಭಾವ ಇರತಕ್ಕವರು ಶಾಸನ ಸಭೆಯ ಎಲ್ಲಾ ಸದಸ್ಯರು. ನಾನೇ ಎಲ್ಲಕ್ಕಿಂತ ಕಡಿಮೆ ಪ್ರಭಾವಿತ ಶಕ್ತಿ ಇರತಕ್ಕವನು. ಸಮಾಧಾನ ಆಯಿತೇ ? ಶಾಸಕರಿಗೆ ತರಬೇತಿ ಕೊಡಬೇಕೆಂದು ಮಾನ್ಯ ಸದಸ್ಯರಾದ ಭೂಪತಿಯವರು ಹೇಳಿದ್ದಾರೆ. ಅವರು ಎಲ್ಲೋ ಹೋದರು.

ಯತಿ ಕೆಡಗು ದುಸ್ಸಂಗದಲಿ
ಭೂಪತಿ ಕೆಡುಗು ದುರ್ಮಂತ್ರಿಯಲಿ
ವರಸುತ ಕೆಡುವುದು ಲಾಲನೆಯಲಿ
ಕೃಷಿ ಕೆಡಗು ಉಪೇಕ್ಷೆಯಲ್ಲಿ, ಭೂಪತಿ ಕೇಳೆಂದಾ ।

ಎಲ್ಲಿ ಹೋದರು ಭೂಪತಿಯವರು ? ಬೇಜಾರಾಗಿತ್ತು ಎಲ್ಲರಿಗೂ. ಅದಕ್ಕೆ ಹೇಳಿದೆ. ಶಾಸಕರಿಗೆ ತರಬೇತಿ ಕೊಡಬೇಕೆಂದು ಹೇಳಿದರು. ಅವತ್ತೇ ನಾನು ಹೇಳಿದೆ. ನಾನು ಪ್ರಯತ್ನ ಮಾಡಿ ಕೈ ಸುಟ್ಟಿಕೊಂಡಿದ್ದೇನೆ. ಎಲ್ಲರೂ ಬರಬೇಕು ಎಂದು ಕರೆದಾಗ ಬಂದಿದ್ದವರು ಸಪ್ತ ಋಷಿಗಳಂತೆ ೭ ಜನ. ಸಾಕಷ್ಟು ಸಂಖ್ಯೆಯಲ್ಲಿ ಬಂದರೆ ಬಹಳ ಸಂತೋಷದಿಂದ ಪರಿಣಾಮಕಾರಿಯಾಗಿ, ಫಲಪ್ರದವಾಗಿ ಆಗುವ ರೀತಿಯಲ್ಲಿ ಕಲಿಸುವ ವ್ಯವಸ್ಥೆ ಮಾಡುತ್ತೇನೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಜೊತೆ ಸಮಾಲೋಚನೆ ಮಾಡಿದನಂತರ ಮಾಡುತ್ತೇನೆ. ವಿಧಾನ ಮಂಡಲದ ಸಮಿತಿಗಳ ವರದಿಗಳ ಮೇಲೆ ಸರ್ಕಾರ ಕೈಕೊಂಡ ಕ್ರಮ ಏನು ಎಂದು ಕೇಳಿದ್ದಾರೆ. ಹೌಸ್ ಕಮಿಟಿ ಇದೆ. ಅಷ್ಯೂರೆನ್ಸ್ ಕಮಿಟಿ ಇದೆ. ಸರ್ಕಾರ ವಚನ ಕೊಟ್ಟ ಮೇಲೆ ವಚನಭ್ರಷ್ಟರಾಗುವ ಆಪಾದನೆಗೆ ಒಳಗಾಗದಂತೆ ಅಷೂರೆನ್ಸ್ ಕಮಿಟಿ ಮುಂದೆ ದೂರು ತೆಗೆದುಕೊಂಡು ಹೋಗಬಹುದು.

ಶ್ರೀ ಕೆ.ಬಿ, ಶಾಣಪ್ಪ.—೧೯೭೨ರಲ್ಲಿ ಅಷ್ಯೂರೆನ್ಸ್ ಕೊಟ್ಟಿದ್ದು ಇದೆ.

ಶ್ರೀ ಎ. ಲಕ್ಷ್ಮೀಸಾಗರ್, —ಅವರನ್ನು ಕೇಳಬೇಕು.

There are assurances which were culled out 25 years ago. Even they remain un-fulfilled. This is public life.

ಶ್ರೀ ಬಿ. ಬಸವಲಿಂಗಪ್ಪ.—ನೀವು ಅನುಸರಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಮಟ್ಟಿಗೆ ಹೇಳುವುದಾದರೆ ನಾನು ಅನುಸರಿಸುವುದಿಲ್ಲ. ಸಲಹಾ ಸಮಿತಿ ಸಭೆಯನ್ನು ಸೆಷನ್ ನಡೆಯುತ್ತಿರುವಾಗ ಕರೆಯಬೇಕೆಂದು ಇದೆ. ಅದರಂತೆ ಒಂದು ಬಾರಿ ಕರೆದಿದ್ದಾಗಿದೆ. ಮತ್ತೆ ನಮ್ಮ ಸಹೋದ್ಯೋಗಿ ಮಿತ್ರರು ಸಲಹಾ ಸಮಿತಿ ಸಭೆಯ ಮಾತೆತ್ತಿದರೆ ಅವರಿಗೆ ವಿನಮ್ರಪೂರ್ವಕವಾದ ಮನವಿಯನ್ನು ಸಲ್ಲಿಸುತ್ತೇನೆ. ಶಾಸಕರಿಗೆ ಇನ್ನೂ ಹೆಚ್ಚಿನ ಸೌಕರ್ಯ ವನ್ನು ಒದಗಿಸಬೇಕೆಂದು ಕೇಳಿದ್ದಾರೆ. ಜೀಪ್ ಬಗ್ಗೆ ಹೇಳಿದ್ದಾರೆ. ವಾಹನ ಕೊಡುವ ಬಗ್ಗೆ ಹೇಳಿದ್ದಾರೆ. ಈಗಾಗಲೇ ಜೀಪ್ ಕೊಟ್ಟಿದ್ದೇವೆಂದು ಅಧ್ಯಕ್ಷರು ಹೇಳಿದ್ದಾರೆ. ಅದೂ ಕೂಡಾ ಸಮರ್ಪಕವಾಗಿಲ್ಲ ಎಂದು ಹೇಳಿದ್ದಾರೆ. ನೋಡೋಣ, ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ,—ಶಾಸಕರ ಪೆನ್‌ಷನ್ ಬಗ್ಗೆ ಒಂದು ಟರ್ಮ್ ಇರುವವರಿಗೆ ೫೦೦ ರೂಪಾಯಿ ಹಾಗೂ ಒಂದಕ್ಕಿಂತಾ ಹೆಚ್ಚು ಟರ್ಮ ಶಾಸಕರಾಗಿದ್ದವರಿಗೆ ೧,೦೦೦ ರೂ.ಗಳ ಮಿತಿಯನ್ನು ಇಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದಕ್ಕೆ ಉತ್ತರ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನೋಡೋಣ ಸಾರ್. ನಮ್ಮ ಭೂಪತಿಯವರು, ಮನೆ ಕಡೆ ಆರ್ಥಿಕವಾಗಿ ಏನೂ ಅನುಕೂಲ ಇಲ್ಲದ ಶಾಸಕರನ್ನೇ ಸಮಿತಿಗಳಿಗೆ ನೇಮಕ ಮಾಡಿದರೆ ಅನುಕೂಲ ವಾಗುತ್ತದೆಂದು ಹೇಳಿದ್ದಾರೆ ಈಗಾಗಲೇ ಈ ಮನೆಯ ಎಲ್ಲಾ ಸದಸ್ಯರು ಎಲ್ಲಾ ಸಮಿತಿಗಳಲ್ಲಿ ಇದ್ದಾರೆಂದು ನಾನು ಅಂದುಕೊಂಡಿದ್ದೇನೆ. ಸಮಿತಿಯ ಸದಸ್ಯರು ಅಲ್ಲದೇ ಇರುವವರ ಸಂಖ್ಯೆ ಬಹಳ ಕಡಿಮೆ. ವರ್ಷಕ್ಕೊಮ್ಮೆ ಬದಲಾವಣೆಯಾಗುವುದರಿಂದ ಪ್ರತಿಯೊಬ್ಬರಿಗೂ ಅವಕಾಶವಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಮತ್ತೆ

(ಮಾನ್ಯ ಅಧ್ಯಕ್ಷರು ಅಧ್ಯಕ್ಷಪೀಠವನ್ನಲಂಕರಿಸಿದರು)

ಶಾಸಕರ ಭವನದ ದೂರವಾಣಿ ವ್ಯವಸ್ಥೆ ದುರಸ್ತಿಯಾಗಬೇಕೆಂದು ಹೇಳಿದ್ದಾರೆ. ಅಧ್ಯಕ್ಷರೇ, ಇದು ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟ ವಿಚಾರ. ಆಳುವ ಪಕ್ಷದ ಮುಖ್ಯ ಸಚೇತಕರಿಗೆ ಕೊಡುವ ಸೌಲಭ್ಯಗಳನ್ನೆಲ್ಲಾ ವಿರೋಧ ಪಕ್ಷದ ಸಚೇತಕರಿಗೂ ಕೊಡಬೇಕೆಂದು ಹೇಳಿದ್ದಾರೆ. ಮಲ್ಲಾರಿಗೌಡ ಪಾಟೀಲರು ಈಗ ವಿರೋಧ ಪಕ್ಷದಲ್ಲಿ ಸಚೇತಕರಾಗಿದ್ದಾರೆ. ಈಗ ಸದ್ಯದಲ್ಲಿ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ. ಮಾನ್ಯ ವೆಂಕಟರಾಮಯ್ಯನವರು, ರಾಜ್ಯದಲ್ಲಿ ಶಾಸಕರಿಗೆ ಸಿಗಬೇಕಾದ ಗೌರವ ಸಿಗುತ್ತಾ ಇಲ್ಲ ಎಂದು ಹೇಳಿದ್ದಾರೆ. ನಾನು ಏನು ಮಾಡಲಿ ?

ಈ ಬಗ್ಗೆ ನನ್ನ ಕಡೆಯಿಂದ ಏನಾಗಬೇಕು ? ಗೌರವವನ್ನು ಸಂಪಾದನೆ ಮಾಡಿಕೊಳ್ಳುವುದು. ಸಂದ ಗೌರವವನ್ನು ರಕ್ಷಣೆ ಮಾಡಿಕೊಳ್ಳುವುದು ಅವರವರಿಗೆ ಸಂಬಂಧಪಟ್ಟ ವಿಚಾರವೇ ಹೊರತು ಸರ್ಕಾರವಾಗಲೀ, ತಾವಾಗಲೀ (ಅಧ್ಯಕ್ಷರು), ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಹೈಕೋರ್ಟಿನ ನ್ಯಾಯಾಧೀಶರನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಅದು ನನ್ನ ಕೈಯಲ್ಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮ ಕೈಯಲ್ಲಿ ಏನಿದೆ ಹೇಳಿ ? ಯಾವುದೂ ನಿಮ್ಮ ಕೈಲಿಲ್ಲ ಎಂದು ಹೇಳುತ್ತೀರಿ. ಅದೆಲ್ಲಾ ಹೋಗಲಿ ಈ ವರ್ಷದ ನಿಮ್ಮ ಪಾಲಿಸಿ ಏನು ಎಂಬುದನ್ನಾದರೂ ಹೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅವರ ಕೈಯಲ್ಲಿ ಆ ನೋಟ್ಸ್ ಇದೆ ಅಷ್ಟೇ.

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಸದಸ್ಯರು ಕೈಲಿರುವ ನೋಟ್ಸ್ ಬಗ್ಗೆ ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಕೇಳಿರತಕ್ಕ ವಿಷಯಗಳ ಬಗ್ಗೆ ವ್ಯವಸ್ಥೆ ಮಾಡಲು ಮನಸ್ಸು ಇದೆ. ಅದಕ್ಕೆ ಪೂರಕವಾದ ಕಾಗದ ನನ್ನ ಕೈಲಿದೆ. ಹೈಕೋರ್ಟಿನ ಜಡ್ಜ್‌ಗಳ ವಿಚಾರವನ್ನು ಮಾತನಾಡುವುದು ಸರಿಯಲ್ಲ. ಶ್ರೀನಿವಾಸಪುರದಲ್ಲಿ ತಾಲ್ಲೂಕು ಮುನ್ಸೀಫ್ ಕೋರ್ಟ್ ಮಾಡಬೇಕೆಂದು ಹೇಳಿದ್ದಾರೆ. ಹೈಕೋರ್ಟಿನವರು ಈ ಬಗ್ಗೆ ತಮ್ಮ ನಿರ್ಣಯ ತೆಗೆದುಕೊಂಡಿದ್ದಾರೆ. ಮುಂದಿನ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಅದನ್ನು ಮಾಡತಕ್ಕ ಪ್ರಯತ್ನವನ್ನು ಮಾಡಬೇಕೆಂದು ಹೇಳುತ್ತೇನೆ ಎಲ್ಲವನ್ನೂ ಹಂತಹಂತವಾಗಿ ಮಾಡುವುದಕ್ಕೆ ಒಪ್ಪಿಕೊಂಡಿದ್ದೇವೆ. ಆಮೇಲೆ ಜ್ಯುಡಿಶಿಯಲ್ ಆಫೀಸರ್ಸ್ ಪ್ರತಿಯೊಂದು ಸಲವೂ ಹೇಳುತ್ತಾರೆ ಹೆಚ್ಚು ಸಂಬಳ ಕೊಡಬೇಕು ಎಂದ ಪೇಕಮಿಷನ್ ರೆಕಮೆಂಡೇಷನ್ಸ್ ಈಗಾಗಲೇ ಬಂದಿದ್ದು ಒಪ್ಪಿಕೊಂಡಿದ್ದೇವೆ. ಅನಾಮಲೀಸ್ ಏನಾದರೂ ಇದ್ದರೆ ಅದಕ್ಕೆ ಅಧಿಕಾರಿಗಳ ಒಂದು ಸಮಿತಿಯನ್ನು ಮಾಡಿ ಅವರ ಮುಂದೆ ಹೋಗಬೇಕೆಂದು ಅವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ ಆಮೇಲೆ ಸನ್ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲರು ಬಸ್ ಪಾಸ್ ಕೊಡಬೇಕು......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ಮುಖ್ಯವಾದ ಚರ್ಚೆ ನಡೆದರೆ ಅಲ್ಲಿ ಶ್ರೀ ಬೊಮ್ಮಾಯಿಯವರು ವೋಟಿಂಗ್ ಮಾಡುತ್ತಿದ್ದಾರೆ. ಇದು ಸರಿಯೆ ?

ಅಧ್ಯಕ್ಷರು.— ಆಯಿತು ನಿಮ್ಮಲ್ಲೂ ವೋಟಿಂಗ್ ಮಾಡಲಿಕ್ಕೆ ಹತ್ತಿದ್ದಾರೆ ನೋಡಿ. ನೀವೂ ಮಾಡುತ್ತಿದ್ದಿರಿ, ಅವರೂ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಡಿಫೆಂಡ್ ಮಾಡಿ ಮಾಡಿ ಅವರ ಗತಿ ಹೀಗಾಗಿದೆ.

ಶ್ರೀ ಎ ಲಕ್ಷ್ಮೀಸಾಗರ್.— ಬಸ್ ಪಾಸ್ ಮತ್ತು ಮಾಜಿ ಶಾಸಕರಿಗೆ ಒಂದು ವಿಶೇಷ ಭವನವನ್ನು ಕಟ್ಟಿಸಿಕೊಡಿ ಎಂದು ಶ್ರೀ ಕೆ. ಎಚ್. ಪಾಟೀಲರು ಹೇಳಿದ್ದರು. ಸನ್ಮಾನ್ಯ ಅಧ್ಯಕ್ಷರೇ, ಔಷಧಿಗಳ ಅನುಕೂಲ ಮಾಡತಕ್ಕಂಥ ವಿಚಾರ ಸರ್ಕಾರದ ತೀವ್ರ ಗಮನದಲ್ಲಿದೆ. ಈ ವಿಚಾರದಲ್ಲಿ ಮಾನ್ಯ ಅಧ್ಯಕ್ಷರೊಡನೆ ಮಾತನಾಡಿ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ಇಷ್ಟು ಬಿಟ್ಟು ಮಿಕ್ಕ ಯಾವ ವಿಷಯವೂ ಸರ್ಕಾರದ ಮುಂದೆ ಇಲ್ಲ ಜಿಲ್ಲಾ ನ್ಯಾಯಾಧೀಶರ ವಿಚಾರದಲ್ಲಿ ಹಿಂದುಳಿದ ವರ್ಗದವರಿಗೆ, ಹರಿಜನ–ಗಿರಿಜನರಿಗೆ ಪ್ರಾತಿನಿಧ್ಯ ಕಡಿಮೆಯಾಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಬೇಕೆಂದು ಕೂಡ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಯಾರೋ ಒಬ್ಬರು ರಿಟ್ ಪಿಟಿಷನ್ ಹಾಕಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಏನು ಹೇಳುತ್ತಾರೆ ಏನು ತೀರ್ಮಾನ ಮಾಡುತ್ತಾರೆ ಎಂದು ನೋಡಿ ಮುಂದೆ ಇದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರ ಬಗ್ಗೆ ಒಂದೇ ಅಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಪಟ್ಟಿ ಹೋದರೆ ಅದಕ್ಕೆ ಸ್ಟೇ ಆರ್ಡರ್ ತರುತ್ತಾರೆ. ಮುಖ್ಯ ಮಂತ್ರಿಗಳು ಏನು ಹೇಳಿದ್ದರು ಎಂದರೆ ಪದವಿ ತರಗತಿಯಲ್ಲಿ ಯಾರು ಅತಿ ಹೆಚ್ಚು ಅಂಕಗಳಿಸುತ್ತಾರೆ ಅವರನ್ನು ಕ್ಲಾಸ್ ಒಂದು ಮತ್ತು ಎರಡು ಇದಕ್ಕೆ ನೇರವಾಗಿ ನೇಮಕಾತಿ ಮಾಡುತ್ತೇವೆ ಎಂದು ಅದಕ್ಕೂ ಸ್ಟೇ ಆರ್ಡರ್ ಪ್ರತಿಯೊಂದಕ್ಕೂ ಹೀಗೆ ಸ್ಟೇ ಆರ್ಡರ್ ಬಂದರೆ ಸರ್ಕಾರದವರು ಏಕೆ ಈ ಕಡೆ ಲಕ್ಷ್ಯವಹಿಸುವುದಿಲ್ಲ ? ಸ್ಟೇ ವೆಕೇಟ್ ಮಾಡುವುದಕ್ಕೆ ಮೂರು ಮೂರು ವರ್ಷ ಬೇಕಾ ? ನಾನು ಹೇಳುತ್ತೇನೆ ಏನೆಂದರೆ ನೀವು ಈ ಕಡೆಗೆ ಲಕ್ಷ್ಯ ಕೊಡುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ಉತ್ತರ ಹೇಳುತ್ತೇನೆ ಕೇಳಿ. ಇಂತಹ ವಿಚಾರಗಳಲ್ಲಿ ತೀವ್ರತರವಾದಂಥ ಪ್ರಯತ್ನ ಸರ್ಕಾರದ ಕಡೆಯಿಂದ ಬಂದಿದೆ. ಇದನ್ನು ಮಾಡಿದ್ದೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ. ತಾವು ಹೇಳಿದ ಎಲ್ಲಾ ವಿಚಾರಗಳಲ್ಲೂ ಸರ್ಕಾರದ ಕಡೆಯಿಂದ ಆಗಬೇಕಾದ ಜನಪರ ಕೆಲಸಗಳು ನಿಂತು ಹೋದ ಸಮಯದಲ್ಲಿ ಎಲ್ಲ ಸಂದರ್ಭದಲ್ಲೂ ಹೈಕೋರ್ಟಿನವರು ಕೊಟ್ಟಂಥ ತಡೆಯಾಜ್ಞೆಯನ್ನು ನಿವಾರಣೆ ಮಾಡಬೇಕೆಂದು ಈ ಕೇಸುಗಳ ಪಟ್ಟಿಯನ್ನು ಮಾಡಿ ಅಡ್ವೋಕೇಟ್ ಜನರಲ್ ಅವರಲ್ಲಿ ಪ್ರಸ್ತಾಪ ಮಾಡಿ ಅರ್ಜಿಗಳನ್ನು ಒಂದು ಸಲ ಅಲ್ಲ, ಎರಡು ಸಲ ಹಾಕಿ ಬೇಗ ಇವುಗಳನ್ನು ತೀರ್ಮಾನ ಮಾಡಬೇಕೆಂದು ನಿಕಾಲೆ ಮಾಡಬೇಕೆಂದು ಕೇಳಿದ್ದೇವೆ. ಆದರೂ ಕೂಡ ಅಡ್ವೋಕೇಟ್ ಜನರಲ್ ಅವರಿಂದ ಬಂದಿರತಕ್ಕಂಥ ವರದಿ ಪ್ರಕಾರ ಹೈಕೋರ್ಟಿನವರು ಒಪ್ಪಿಕೊಳ್ಳಬೇಕು. ಅಲ್ಲಿ ಹಿಯರಿಂಗ್ ಅರ್ಜಿ ಹಾಕಿದರೆ ವಾದಿಯನ್ನೂ ಕೇಳಬೇಕಾಗುತ್ತದೆ ಇದು ಒಂದು ಭಾಗ. ಅವರ ತೀರ್ಮಾನವೇ ಕೊನೆಯ ತೀರ್ಮಾನ. ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದಕ್ಕೆ ಲಿಮಿಟ್ ಇಲ್ಲ. ಎಂದು ಒದಗಿಸಿಕೊಡುತ್ತೀರಿ ? ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿಕೊಡುತ್ತೇವೆ ಎಂದು ಏತಕ್ಕೆ ಹೇಳಬೇಕು ? ಇದು ಒಂದೇ ಅಂತ ನಾನು ಹೇಳುತ್ತಿಲ್ಲ. ಹೈಕೋರ್ಟಿನಲ್ಲಿರತಕ್ಕಂಥ ಬೇರೆ ಯಾವುದಾದರೂ ಕೂಡ ತಮಗೆ ಬೇಕಾದದ್ದು ತಡೆಯಾಜ್ಞೆಯನ್ನು ವೆಕೇಟ್ ಮಾಡುವುದಕ್ಕೆ ಆಗುತ್ತದೆ, ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಪ್ರಯತ್ನ ಮಾಡಿದರೆ ಆಗುತ್ತದೆ.

ಅಧ್ಯಕ್ಷರು.— ಪ್ರಯತ್ನ ಮಾಡಬೇಕು ನೀವು.

ಶ್ರೀ ಎ. ಲಕ್ಷ್ಮೀಸಾಗರ್.— ಮಾಡಿದ್ದೇವೆ, ಸ್ವಾಮಿ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಂತಹ ಕೇಸುಗಳನ್ನು ರಿವ್ಯೂ ಮಾಡಿದರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.— ರಿವ್ಯೂ ಮಾಡಿದ್ದೇವೆ. ಇದಕ್ಕೆ ವಿಶೇಷವಾದಂಥ ಪ್ರಯತ್ನ ನಡೆದಿದೆ. ತೀರ್ಮಾನ ನಮ್ಮದಲ್ಲ. ಶ್ರೀಮಾನ್ ಖರ್ಗೆಯವರು ವಕೀಲರು. ಉಭಯತ್ರರನ್ನೂ ಕೇಳಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಅರ್ಲಿಯರ್ ಹಿಯರಿಂಗ್ ಬೇಕು ಎಂದು ಒಂದೊಂದು ಕೇಸ್‌ನಲ್ಲಿ ನೀವು ಸ್ಟೇ ಆರ್ಡರನ್ನು ವೆಕೇಟ್ ಮಾಡಿದರೆ ಪಿಟಿಷನ್‌ನಲ್ಲಿ ಏನೂ ಇರುವುದಿಲ್ಲ. ಆಗ ಏನು ಮಾಡುತ್ತಾರೆ ? ಪಿಟಿಷನ್ನೇ ಹಿಯರ್ ಮಾಡುತ್ತಾರೆ. ಅದು ಮುಂದೆ ಹೋಗುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇನ್ನೂ ಹೆಚ್ಚಿನ ಪ್ರಯತ್ನ ಮಾಡತಕ್ಕಂಥ ಭರವಸೆಯನ್ನು ಸನ್ಮಾನ್ಯ ಖರ್ಗೆಯವರಿಗೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ತಾಲ್ಲೂಕು ಬಾರ್ ಅಸೋಸಿಯೇಷನ್‌ಗಳಿಗೆ ಜಾಸ್ತಿ ಹಣ ಕೊಡಬೇಕೆಂದು ಹೇಳಿದ್ದಾರೆ. ಹೋದವರ್ಷ ಮೂರುವರೆ ಲಕ್ಷ ರೂ. ಕೊಡಲಾಗಿತ್ತು. ಈ ವರ್ಷ ೪ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಹಾಕಿದ್ದೇವೆ. ಆದರೆ ದುರಾದೃಷ್ಟವಶಾತ್ ನಮ್ಮಲ್ಲಿ ೧೪೪ ಬಾರ್ ಅಸೋಸಿಯೇಷನ್‌ಗಳು ಇವೆ. ೧೯೮೭-೮೮ನೇ ಇಸವಿಯಲ್ಲಿ ನಮಗೆ ಗ್ರಾಂಟ್ ಕೊಡಿ ಎಂದು ಅರ್ಜಿ ಬಂದಿರುವುದು ಬರೀ ೪೨ ಮಾತ್ರ. ಅವರಿಗೆ ಎಲ್ಲಾ ಕೊಟ್ಟುಬಿಟ್ಟಿದ್ದೇವೆ,

ಶ್ರೀ ಆರ್. ಎನ್. ನಾಯಕ್ — ಕೊಟ್ಟಿದೆಷ್ಟು ? ಬರೀ ಹತ್ತು ಸಾವಿರ ರೂಪಾಯಿ.

ಶ್ರೀ ಎ. ಲಕ್ಷ್ಮೀಸಾಗರ್.— ನಾನೇನು ಏನು ಮಾಡಲಿ ? ನಾನು ಈ ಖಾತೆಯ ಮಂತ್ರಿ ಆದ ಮೇಲೆ ಇದಕ್ಕೆ ರೂಲ್ಸ್ ಮಾಡಿದ್ದೇನೆ. ಆಯಾಯ ಬಾರ್ ಅಸೋಸಿಯೇಷನ್‌ನ ವಕೀಲರ ಸಂಖ್ಯೆಯ

ಆಧಾರದ ಮೇಲೆ ಯಾರ್ಯಾರಿಗೆ ಎಷ್ಟೆಷ್ಟು ಅನುದಾನ ಕೊಡಬೇಕೆಂದು ರೂಲ್ಸ್ ಮಾಡಿದ್ದೇವೆ ಮೊದಲು ಏನು ಆಗುತ್ತಿತ್ತು ಎಂದರೆ ಯಾರು ಪ್ರಭಾವ ಬೀರುತ್ತಾರೆ ಅವರಿಗೆ ಸಿಗುತ್ತಿತ್ತು, ಕೇಳದವರಿಗೆ ಇಲ್ಲವೇ ಇಲ್ಲ, ಜಾಸ್ತಿ ಪ್ರಭಾವ ಬಂದಿದ್ದರೆ ಜಾಸ್ತಿ ಕೊಡುತ್ತಿದ್ದರು. ಇದನ್ನು ನಾನು ತಪ್ಪಿಸಿದ್ದೇನೆ ಯೆನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ,

ಸನ್ಮಾನ್ಯ ಮೊಯಿಲಿಯವರು ಹೈಕೋರ್ಟ್ ಕಟ್ಟಡದ ದುರಸ್ತಿ ಕೆಲಸ ನಿಂತುಹೋಗಿದೆ, ಬೇಗ ಮುಗಿಸಬೇಕೆಂದು ಹೇಳಿದ್ದಾರೆ, ಇದಕ್ಕಾಗಿ ಈ ಸಲ ೫೦ ಲಕ್ಷ ರೂಪಾಯಿಗಳನ್ನು ನಾವು ಬಜೆಟ್‌ನಲ್ಲಿ ಇಟ್ಟಿದ್ದೇವೆ. ಇದು ಆಗುತ್ತದೆಂದು ಅವರಿಗೆ ಭರವಸೆ ಕೊಡುತ್ತೇನೆ. ಇನ್ನು ಸಿವಿಲ್ ಕೋರ್ಟ್ ಬಿಲ್ಡಿಂಗ್ ಬಗ್ಗೆ ೨-೩ ಪ್ಲಾನ್‌ಗಳು ಆಗಿವೆ. ಮುಖ್ಯಮಂತ್ರಿಗಳು ಹೊಸ ಪ್ಲಾನ್ ಮಾಡಿಕೊಡಿ ಎಂದು ಹೇಳಿದ್ದಾರೆ, ಅದನ್ನು ಮಾಡುವಂಥ ಪ್ರಯತ್ನ ನಡೆಯುತ್ತಿದೆ. ಹೊಸ ಪ್ಲಾನ್ ಮಾಡಿದ ತಕ್ಷಣ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಕೊನೆಯದಾಗಿ, ಒಂದು ಕೋರ್ಟ್ ಸ್ಥಾಪನೆ ಬಗ್ಗೆ, ಇನ್ನೊಂದು ಲೀಗಲ್ ಏಡ್ ಬಗ್ಗೆ ಸನ್ಮಾನ್ಯ ಅಧ್ಯಕ್ಷರೇ, ೧೯೭೩-೭೪ ರಿಂದ ೧೯೭೭-೭೮ರ ವರೆಗೆ ಹೊಸ ಕೋರ್ಟ್‌ಗಳ ಸ್ಥಾಪನೆ ಸಂಖ್ಯೆ ೩೯. ಇದರಲ್ಲಿ ಹೊಸದಾಗಿ ಸ್ಥಾಪನೆಯಾದ ಅಡಿಷನಲ್ ಕೋರ್ಟ್‌ಗಳೂ ಸೇರಿವೆ, ಮುನ್ಸೀಫ್ ಕೋರ್ಟ್‌ಗಳೂ ಇವೆ, ಅಡಿಷನಲ್ ಸಿವಿಲ್ ಜಡ್ಜಸ್ ಕೋರ್ಟ್‌ಗಳೂ ಇವೆ, ಅಡಿಷನಲ್ ಡಿಸ್ಟ್ರಿಕ್ಟ್ ಅಂಡ್ ಸೆಷನ್ ಜಡ್ಜಸ್ ಕೋರ್ಟ್‌ಗಳೂ ಸೇರಿವೆ. ಆಮೇಲೆ ಹೈಕೋರ್ಟಿನವರು ಹೊಸದಾಗಿ ಸ್ಥಾಪನೆ ಮಾಡಬೇಕೆಂದು ಶಿಫಾರಸ್ ಮಾಡಿರತಕ್ಕಂಥ ಕೋರ್ಟ್‌ಗಳು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್, ಅಡಿಷನಲ್ ಕೋರ್ಟ್‌ಗಳು, ಒಟ್ಟು ರೆಕಮೆಂಡ್ ಆಗಿರುವುದು ೨೧, ಮತ್ತು ಹೈಕೋರ್ಟ್‌ನಲ್ಲಿ ರೆಕಮೆಂಡ್‌ಗೋಸ್ಕರ ಇರತಕ್ಕಂತಹವುಗಳು ೬. ಹೀಗಾಗಿ ಲೆಕ್ಕ ಹಾಕಿದರೆ ನಮ್ಮ ರಾಜ್ಯದಲ್ಲಿ ೧೪೦ ತಾಲ್ಲೂಕುಗಳಲ್ಲಿ ಈಗಾಗಲೇ ಕೋರ್ಟ್‌ಗಳು ಬಂದಿವೆ. ಇನ್ನು ೨೦-೨೫ ತಾಲ್ಲೂಕುಗಳಲ್ಲಿ ಹೊಸದಾಗಿ ಆಗಬೇಕಾಗಿದೆ. ಇವುಗಳನ್ನು ಮಾಡುವುದಕ್ಕೆ ಹಂತಹಂತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಟ್ಟಾರೆ ಹೊಸ ಕೋರ್ಟ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ನಡೆದಿದೆ ಎಂಬುದನ್ನು ಹೇಳುತ್ತೇನೆ. ಇನ್ನು ಉಚಿತ ಕಾನೂನು ನೆರವಿನ ಬಗ್ಗೆ ಕೆಲವು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ೧೯೭೭ರಿಂದ ೧೯೭೮ರ ವರೆಗೆ ಉಚಿತ ಕಾನೂನು ನೆರವು ಕೊಟ್ಟಿರತಕ್ಕಂತಾದ್ದು ೭,೨೧೪, ೧೯೭೩-೭೪ರಿಂದ ೩೧-೩-೧೯೭೮ರ ವರೆಗೆ ೩೯,೦೮೦ ಜನರಿಗೆ ಉಚಿತವಾಗಿ ಕಾನೂನು ನೆರವನ್ನು ಕೊಟ್ಟಿದ್ದೇವೆ. ಇನ್ನು legal aid given to the poor tenants. ಒಟ್ಟು ೧೦,೪೦೧ ಜನಕ್ಕೆ ಕೊಟ್ಟಿದ್ದೇವೆ. ಜನತಾ ನ್ಯಾಯಾಲಯಗಳು ಸ್ಥಾಪನೆಯಾದ ಎರಡು ವರ್ಷದೊಳಗೆ, ಅಂದರೆ ೨ ವರ್ಷಕ್ಕೆ ಇನ್ನೂ ಒಂದು ತಿಂಗಳು ಕಡಿಮೆ ಇದೆ. ಜೂನ್ ತಿಂಗಳಲ್ಲಿ ಪ್ರಾರಂಭವಾಯಿತು. ಇಲ್ಲಿಯವರೆಗೆ ಮೋಟಾರು ಅಪಘಾತಗಳಿಂದ ತೀರ್ಮಾನವಾದ ಕೇಸ್ ೬೨೪೧, ಪರಿಹಾರ ೯ ಕೋಟಿ ೩೨ ಲಕ್ಷ, ೧೪ ಸಾವಿರದ ೨೩೪ ರೂಪಾಯಿಗಳು. ೨ ವರ್ಷದೊಳಗೆ ೬೨೪೧ ಮೋಟಾರು ಅಪಘಾತಗಳ ಕೇಸುಗಳನ್ನು ರಾಜಿ ಸಂಧಾನದ ಮುಖಾಂತರ ಇತ್ಯರ್ಥ ಮಾಡಿ, ನೊಂದವರಿಗೆ, ಸತ್ತವರ ಕುಟುಂಬಗಳಿಗೆ ೯ ಕೋಟಿ ೩೨ ಲಕ್ಷ ೧೪ ಸಾವಿರದ ೨೩೪ ರೂಪಾಯಿಗಳ ಪರಿಹಾರ ಧನವನ್ನು ಕೊಟ್ಟಿದ್ದೇವೆ. ೨ ವರ್ಷಗಳ ಅವಧಿಯಲ್ಲಿ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ರಾಜಿ ಕೇಸುಗಳನ್ನು ತೀರ್ಮಾನ ಮಾಡಿ, ಅಧಿಕ ಮೊತ್ತದ ಹಣವನ್ನು ಕೊಟ್ಟಿರತಕ್ಕಂತಾದ್ದು ಇಡೀ ಭಾರತದಲ್ಲಿ ನಮ್ಮ ಕರ್ನಾಟಕ ರಾಜ್ಯ ಒಂದೇ. ಸಿವಿಲ್ ಮತ್ತು ಕ್ರಿಮಿನಲ್ ಕೇಸನ್ನೂ ಕೂಡ ರಾಜಿ ಮಾಡುವಂಥ ಕೆಲಸ ಕಳೆದ ಒಂದೂವರೆ ವರ್ಷಗಳಿಂದ ನಡೆದಿದೆ. ೩೨೪೭ ಕೇಸ್ ರಾಜಿ ಸಂಧಾನದ ಮುಖಾಂತರ ತೀರ್ಮಾನ ಮಾಡಿದ್ದೇವೆ. ಈ ರಾಜಿ ಸಂಧಾನ ವೈಶಿಷ್ಟ್ಯ ಪೂರ್ಣವಾಗಿ ಆಗುತ್ತಿರುವುದರಿಂದ, ಜನಗಳಲ್ಲಿ ಈ ಬಗ್ಗೆ ಉತ್ಸಾಹ ಕಂಡುಬಂದಿದೆ. ಈ ಕೇಸನ್ನು ಹೇಗಾದರೂ ಮಾಡಿ ರಾಜಿ ಮಾಡಿಕೊಂಡು ಹೋಗುತ್ತೇನೆಂದು ಜನಗಳು ಬರುತ್ತಿದ್ದಾರೆ. ನಾವು ನಿಭಾಯಿಸುವುದಕ್ಕೇ ಆಗದಿರುವಂಥ ರೀತಿಯಲ್ಲಿ ಜನಗಳು ಬರುತ್ತಿದ್ದಾರೆ. ಇದಕ್ಕೆ ಪೂರ್ಣ ಪ್ರಮಾಣದ ಪ್ರಯತ್ನವನ್ನು ಮಾಡುತ್ತೇವೆಂದು ಹೇಳುತ್ತೇನೆ. ಇನ್ನು ನನ್ನ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಬಗ್ಗೆ. ಪ್ರಸ್ತಾಪವಾದ ಎಲ್ಲಾ ವಿಷಯಗಳ ಬಗ್ಗೆ ನಾನು ಪೂರ್ಣವಾದ, ವಿವರಣಾತ್ಮಕವಾದ ಉತ್ತರ ಕೊಡುವ ಪ್ರಯತ್ನ ಮಾಡಿದ್ದೇನೆ ಎನ್ನುವ ಮಾತನ್ನು ಸವಿನಯವಾಗಿ ಸನ್ಮಾನ್ಯ ಸದಸ್ಯರಲ್ಲಿ ವಿನಂತಿಸಿ, ನನ್ನ ಬೇಡಿಕೆಗಳಿಗೆ ಪೂರ್ಣ ಬೆಂಬಲ ಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಅನೇಕ ಮಾನ್ಯ ಸದಸ್ಯರು ಏನು ಪ್ರಶ್ನೆ ಎತ್ತಿದ್ದರು, ಅದರ ಬಗ್ಗೆ ಕೆಲವು ಉತ್ತರಗಳನ್ನು ಕೊಟ್ಟಿದ್ದಾರೆ. ಆದರೆ, ಅವರು ಏನು ಮಾಡಂತ್ತೇವೆ ಎಂಬುದನ್ನು ಹೇಳಲಿಲ್ಲ. ನೀವು ಏನು ಟಾರ್ಜೆಟ್ ಇಟ್ಟುಕೊಂಡಿದ್ದೀರಿ ಎಷ್ಟು ಮುನ್ಸೀಫ್ ಕೋರ್ಟನ್ನು ತೆರೆಯಬೇಕೆಂದು ಇದ್ದೀರಿ, ಇದರ ಬಗ್ಗೆ ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—೩೧ ಕೋರ್ಟ್‌ಗಳಿಗೆ ರೆಕಮೆಂಡ್ ಆಗಿದೆ. ನಮ್ಮ ಗುರಿ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡಬೇಕೆಂದು ಇದೆ. ಈ ವರ್ಷ ನಾಲ್ಕೈದು ಕಡೆ ಸರ್ಕಾರ ಯೋಜನೆ ಹಾಕಿದೆ. ಹೊಸಪೇಟೆ, ಸೊರಬ, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಕೊರಟಗೆರೆ. ಆದರೆ ಅನೇಕ ಕಡೆ ಸರಿಯಾದ ಜಾಗಗಳಲ್ಲಿ ಬಿಲ್ಡಿಂಗ್‌ಗಳು ಸಿಕ್ಕುತ್ತಿಲ್ಲ. ಈ ಬಗ್ಗೆ ಸ್ಥಳೀಯ ಶಾಸಕರನ್ನೂ ಕೇಳಿದ್ದೇವೆ. ಈ ತರಹ ತೊಂದರೆಗಳು ಇವೆ. ಇವುಗಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಖರ್ಗೆಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಪ್ರೋಗ್ರಾಂ ಏನು ಎನ್ನುವುದನ್ನು ತಿಳಿಸಬೇಕು. ನಾವು ಏನು ಹೇಳುತ್ತೇವೆ ಅದಕ್ಕೆ ಉತ್ತರ ಕೊಡುವುದರ ಜೊತೆಗೆ ನಮ್ಮ ಪ್ರೋಗ್ರಾಂನ್ನೂ ಕೂಡ ಹೇಳಬೇಕು. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಬೇಕಾಗಿತ್ತು ಅದನ್ನು ಹೇಳಲಿಲ್ಲ. ನಾನು ಕೇಳುವುದು ಏನೆಂದರೆ, ಮೊನ್ನೆ ಇಲ್ಲಿ ಒಂದು ಪ್ರಶ್ನೆ ಕೇಳಿದಾಗ, ಮುಖ್ಯಮಂತ್ರಿಗಳು ಹೇಳಿದರು. ಹೆಣ್ಣುಮಕ್ಕಳಿಗೆ ಈಕ್ವಲ್ ಪ್ರಾಪರ್ಟಿ ಕೊಡತಕ್ಕಂಥ ವಿಷಯದ ಬಗ್ಗೆ. ಮಾನ್ಯ ಕಾನೂನು ಮಂತ್ರಿಗಳು ಹೇಳುತ್ತಾರೆ, ಇದು ಅವರಿಗೆ ಸಂಬಂಧಪಟ್ಟಿದ್ದು ಎಂದು ಆದ್ದರಿಂದ ಈ ಬಗ್ಗೆ ತಾವು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ತಾವೇ ಹೇಳಿದ್ದೀರಿ, ನಾವು ಸ್ವಲ್ಪ ತತ್ವಕ್ಕೆ ಹೋಗೋಣ. ಕ್ಲಾರಿಫಿಕೇಷನ್ ಯಾವುದರ ಬಗ್ಗೆ ಕೇಳುವುದು ಎಂದರೆ, ಯಾವ ವಿಷಯ ಪ್ರಸ್ತಾಪವಾಗಿದೆ, ಯಾವ ವಿಷಯಕ್ಕೆ ಉತ್ತರ ಸಿಕ್ಕಿದೆ ಅದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿದರೆ ಹೇಳಬಹುದು. ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಅದು ಕ್ಲಾರಿಫಿಕೇಷನ್ ಆಗುತ್ತದೆಯೇ ? ಸ್ವಲ್ಪ ದಯಮಾಡಿ ಕೇಳಿ, ಕೋರ್ಟ್‌ಗಳ ಬಗ್ಗೆ ಕೇಳಿದಿರಿ, ಸರಿಯಾದ ಉತ್ತರ ಹೇಳಿದ್ದೇನೆ. ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು ಕೊಡತಕ್ಕಂಥ ವಿಚಾರ ಇಲ್ಲಿ ಪ್ರಸ್ತಾಪವಾಗಿಲ್ಲ. ನಾನು ನಿನ್ನೆಯೇ ಎಲ್ಲಾ ವಿಚಾರಗಳ ಪಟ್ಟಿ ಹಾಕಿದ್ದೇನೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳನ್ನು ಕೇಳಿದ್ದು, ಈ ಆಸ್ತಿ ವಿಷಯದಲ್ಲಿ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ ಎಂದು ಕೇಳಿದ್ದಾರೆ. ನಾನು ಎಲ್ಲಾ ವಿಚಾರ ಮಾಡಿದ್ದೇನೆ, ನಾವು ಪ್ರಣಾಳಿಕೆಯಲ್ಲಿ ಈ ವಿಚಾರವನ್ನು ಹೇಳಿಲ್ಲ. ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದು ಉಂಟು. ಈ ಬಗ್ಗೆ ಒಂದು ಕರಡು ಕಾನೂನು ತಯಾರು ಮಾಡಿ ಸಾರ್ವಜನಿಕರ ಅವಗಾಹನೆಗೆ, ಸಂಘಸಂಸ್ಥೆಗಳಿಗೆ, ತಮ್ಮ ಟೀಕೆ ಟಿಪ್ಪಣಿ ಕೊಡಲಿ ಎಂದು ಪಬ್ಲಿಷ್ ಮಾಡಿದ್ದೇವೆ. ಟೀಕೆ ಟಿಪ್ಪಣಿಗಳು ಬರುತ್ತಾ ಇವೆ, ಪೂರ್ಣವಾಗಿ ಬಂದನಂತರ, ಇವುಗಳನ್ನು ಕ್ರೋಢೀಕರಿಸಿ, ಹಾಗೂ ತಾವು ಹೇಳತಕ್ಕಂಥ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು, ಈ ಬಗ್ಗೆ ಮುಂದುವರಿಸಿ, ಮುಂದಿನ ಕ್ರಮ ತೆಗೆದುಕೊಳ್ಳತಕ್ಕ ವಿಚಾರ ಸರ್ಕಾರದ ಗಮನದಲ್ಲಿದೆ.

೩-೦೦ ಪಿ.ಎಂ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವಾಗ ಮಾಡುತ್ತೀರಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಬೇಗ.

ಶ್ರೀ ಬಿ. ಬಸವಲಿಂಗಪ್ಪ.—ಆದಷ್ಟು ಬೇಗ ಎಂದರೆ ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳಿದ್ದು...

ಶ್ರೀ ಎ ಲಕ್ಷ್ಮೀಸಾಗರ್. —ಒಂದು ನಿಮಿಷ ಕೇಳಿ, ಯಾವ ತಿಂಗಳು, ಯಾವ ತಾರೀಖು ಎಂದು ಗೊತ್ತು ಮಾಡುವುದಕ್ಕಾಗುವುದಿಲ್ಲ. ಯಾರೇ ತಿಳುವಳಿಕೆಯುಳ್ಳವರು, ಪ್ರಜ್ಞಾವಂತರು ರಾಜ್ಯ ನಡೆಸತಕ್ಕಂಥವರೂ ಇದ್ದರು ಕೂಡ ತಿಂಗಳು, ತಾರೀಖು ನಿಮಿಷಗಳಿಗೆ, ಮದುವೆಗೆ ಗೊತ್ತು ಪಡಿಸಿದ ರೀತಿಯಲ್ಲಿ ಮಾಡುವುದಕ್ಕಾಗುವುದಿಲ್ಲ. ಆದರೆ ಇಷ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದಷ್ಟು ಬೇಗ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕ್ಲಾರಿಫಿಕೇಶನ್ ಕೇಳುವುದಕ್ಕಿಂತ ಮುಂಚಿತವಾಗಿ ನೀವೇ ಎದ್ದು ನಿಂತು ಮಾತನಾಡುತ್ತಿದ್ದೀರಿ, ನೀವು ನಿಮ್ಮ ಉತ್ತರ ಕೊಡುವಾಗ ನಿಮ್ಮ ಪ್ರೋಗ್ರಾಂ ಪಾಲಿಸಿ ಏನು ಅದನ್ನು ಹೇಳಬೇಕಾಗುತ್ತದೆ. ಅದನ್ನು ತಾವು ಹೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—I am giving in your own point. ಮಾನ್ಯ ಸಚಿವರಾದ ಚಂದ್ರಶೇಖರ್‌ರವರು ರಿಪ್ಲೈ ಕೊಡುತ್ತಿರುವಾಗ ಅವರ ಇಲಾಖೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದರು. ಇದೊಂದು ಅವಕಾಶ ನಮಗೆ. ಈ ಸಭೆಯಲ್ಲಿ ಸರ್ಕಾರದ ಮನಸ್ಸಿನಲ್ಲಿ ಏನು ಇದೆ? ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ? ಯಾವ ಯಾವ ಕಾರ್ಯಕ್ರಮದಲ್ಲಿ ಎಷ್ಟು ಸಫಲರಾಗಿದ್ದೇವೆ, ಎಷ್ಟು ವಿಫಲರಾಗಿದ್ದೇವೆ ಎನ್ನುವುದು ಪ್ರಸ್ತಾಪ ಮಾಡುವ ಅವಕಾಶ ಇಲ್ಲಿ ಇದೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಉತ್ತರ ಕೊಡತಕ್ಕಂಥ ಅವಕಾಶ ನಮಗೆ ಇದೆ. ಇಲ್ಲದಿದ್ದರೆ ನಾವೇನು ಮಾಡಿದ್ದೇವೆನ್ನುವುದು ಗೊತ್ತಾಗುವುದಿಲ್ಲ. ಅವರು ಆ ರೀತಿ ಮಾಡುವಾಗ ನೀವು ಏತಕ್ಕೆ ಇದನ್ನೆಲ್ಲಾ ಹೇಳುತ್ತೀರಿ ಎಂದು ಪ್ರಶ್ನೆ ಮಾಡಿದಿರಿ. ಅದನ್ನು ನಾನೀಗ ತಮಗೆ ನೆನಪು ಮಾಡಿದೆ. ನೀವು ಆವತ್ತು ಪ್ರಶ್ನೆ ಮಾಡಿದ ನೆನಪು ನನಗೆ ಚೆನ್ನಾಗಿ ಇದೆ. ಮಾನ್ಯ ಚಂದ್ರಶೇಖರ್‌ರವರು ಇಲ್ಲೇ ಇದ್ದಾರೆ ಅವರನ್ನು ಬೇಕಾದರೂ ಕೇಳಿ. ನೀವು ಕ್ಲಾರಿಫಿಕೇಶನ್ ಕೇಳುವಾಗ ಅವರಿಗೆ ಹೇಳಿದ್ದನ್ನೇ ತಾವು ಈಗ ಶುರು ಮಾಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಅವಕಾಶ ಇರತಕ್ಕಂಥಾದು ಗೊತ್ತಿದೆ. ನಾನು ನಾಲ್ಕು ಸಲ ಎದ್ದು ನಿಂತು ಕ್ಲಾರಿಫಿಕೇಶನ್ ಕೇಳಲು ಹೋದರೆ ಅವಕಾಶವೇ ಕೊಡಲಿಲ್ಲ. ಅವರೇ ಮಾತನಾಡುತ್ತಿದ್ದಾರೆ. ಈಗ ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಸಮಪಾಲು ಕೊಡತಕ್ಕಂಥ ಕಾನೂನು ತರುತ್ತೇವೆಂದು ಹೇಳಿದ್ದರು. ಆ ಬಗ್ಗೆ ಉತ್ತರ ಕೊಡುತ್ತಾ ತಕ್ಷಣ ಮಾಡುತ್ತೇವೆಂದು ಹೇಳಿದರು. ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದು ಹೇಳಿದ್ದಾರೆ. ಇನ್ನೂ ರೋಸ್ಟರ್ ಸಿಸ್ಟಂ ಅನ್ನು ಮುನ್ಸೀಫ್ ಮ್ಯಾಜಿಸ್ಟ್ರೇಟ್ ರಿಕ್ರೂಟ್‌ಮೆಂಟ್‌ನಲ್ಲಿ ಕಟ್ಟುನಿಟ್ಟಾಗಿ ಫಾಲೋ ಮಾಡಿದ್ದೀರಾ? ಫಾಲೋ ಮಾಡದಿದ್ದರೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಏನಾದರೂ ಮಾಡುವ ವಾಗ್ದಾನ ಕೊಡುತ್ತೀರಾ? ಮಾಡುವುದಾದರೆ ಎಷ್ಟು ದಿವಸದಲ್ಲಿ ಕಮಿಟಿ ಮಾಡುತ್ತೀರಿ? ಕಮಿಟಿ ಮಾಡಿ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುತ್ತೀರಾ? ಇನ್ನೊಂದು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಸುಮಾರು ೧೪ ಕೋಟಿ ರೂಪಾಯಿಗಳು ನಷ್ಟವಾಗಿದೆ. ಈಗಾಗಲೇ ಈ ಮಾತನ್ನು ತಮ್ಮ ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ತಮ್ಮ ಗಮನಕ್ಕೆ ತಂದಿರಬಹುದು. ಇದನ್ನು ಯಾರು ಮಾಡಿದರು ಎನ್ನುವುದನ್ನು ಪತ್ತೆ ಮಾಡಲು ಹೌಸ್ ಕಮಿಟಿ ನೇಮಕ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಮುನ್ಸೀಫ್ ಮ್ಯಾಜಿಸ್ಟ್ರೇಟ್‌ರನ್ನು ನೇಮಕ ಮಾಡತಕ್ಕಂಥಾ ಅಧಿಕಾರವನ್ನು ಸರ್ಕಾರದವರು ಹೈಕೋರ್ಟಿಗೆ ಕೊಡಲಾಗಿದೆ. ಮಾನ್ಯ ಸದಸ್ಯರಾದ ಖರ್ಗೆಯವರು ಗಮನಿಸಿರತಕ್ಕಂಥ ವಿಚಾರವನ್ನು ಹೈಕೋರ್ಟ್‌ನವರನ್ನು ನಾನು ಕಾಂಟ್ಯಾಕ್ಟ್ ಮಾಡಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳತಕ್ಕಂಥಾದ್ದನ್ನು ಮಾಡುತ್ತೇನೆ. ಹೌಸ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಪಿ.ಯು.ಸಿ, ರಿಪೋರ್ಟ್‌ನಲ್ಲಿ ಈ ವಿಷಯ ಪ್ರಸ್ತಾಪವಾಗಿದೆ ಆ ರಿಪೋರ್ಟ್‌ನ ಆಧಾರದ ಮೇಲೆ ಮುಂದಿನ ಕನ್‌ಸ್ಟ್ರಕ್ಟೀವ್ ಮೇಜರ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮಲ್ಲಿಕಾರ್ಜುನ ಎಂ. ಖರ್ಗೆಯವರು ಹೇಳಿದ ಹಾಗೆ ಮುನ್ಸೀಫ್ ಮ್ಯಾಜಿಸ್ಟ್ರೇಟರ ನೇಮಕ ಮಾತ್ರವಲ್ಲದೆ ಡಿಸ್ಟ್ರಿಕ್ಟ್ ಜಡ್ಜ್‌ಗಳ ಬಗ್ಗೆ ಕೂಡ ನಾನು ಪ್ರಸ್ತಾಪ ಮಾಡಿದ್ದೆ, ಅಲ್ಲಿ ರೋಸ್ಟರ್ ಫಾಲೋ ಮಾಡಿಲ್ಲವೆಂದು.

ಶ್ರೀ ಎ. ಲಕ್ಷ್ಮೀಸಾಗರ್.—ದಯವಿಟ್ಟು ಕೇಳಿ ತಾವು ಇರಲಿಲ್ಲ. ರಿಟ್ ಪಿಟಿಷನ್ ಇದೆ ಎಂದು ಹೇಳಿದೆ. It is pending decision ಅಂತಲೂ ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸರ್ಕಾರದ ಜವಾಬ್ದಾರಿ ಏನೆಂದರೆ ಡಿಸ್ಟ್ರಿಕ್ ಜಡ್ಜ್‌ಗಳನ್ನು ನೇಮಕ ಮಾಡತಕ್ಕಂಥದ್ದರಲ್ಲಿ ರೋಸ್ಟರ್ ಸಿಸ್ಟಂ ಫಾಲೋ ಆಗಿದೆಯೆ? ಆಗಿಲ್ಲದಿದ್ದರೆ ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡಿ ಎಂದು ಒಂದು ಅಣತಿ ಕೊಡಬಹುದು...

Sri A. Lakshmi Sagar.—Principle is the same.

ಶ್ರೀ ಎಂ ವೀರಪ್ಪ ಮೊಯಿಲಿ.—ಅನ್ಯಾಯವಾಗಿದೆ ಎಂದು ಗೊತ್ತಾದ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳಿ ಎಂದು ಹೇಳಬಹುದಲ್ಲ. ಹೈಕೋರ್ಟ್‌ಗೆ ತಾವು ಏನು ಅಧಿಕಾರ ಕೊಟ್ಟಿದ್ದೀರಿ, ಆ ಅಧಿಕಾರದ ಪ್ರಕಾರ ಅವರು ಸರಿಯಾದ ಪ್ರಮಾಣದಲ್ಲಿ ಮುನ್ಸೀಫ್‌ಗಳನ್ನು ನೇಮಕ ಮಾಡಲಿಲ್ಲವೆಂದು ಗೊತ್ತಾದ ಮೇಲೆ ನೀವು ಆ ಅಧಿಕಾರವನ್ನು ವಾಪಸ್ ತೆಗೆದುಕೊಂಡು ಪಿ.ಎಸ್.ಸಿ. ಮೂಲಕವೋ ಅಥವಾ ಬೇರೆ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿಯೋ ನೇಮಕ ಮಾಡಬಹುದಾಗಿತ್ತು. ಆ ರೀತಿ ಮಾಡಿದರೆ ಹಕ್ಕುಚ್ಯುತಿಯಾಗುವುದಿಲ್ಲ. ಆಮೇಲೆ ಎರಡನೆಯದಾಗಿ, ಹೈಕೋರ್ಟ್ ಕಟ್ಟಡದಲ್ಲಿ ಸಾಕಷ್ಟು ಅನಾನುಕೂಲವಾಗಿದೆ. ಹೈಕೋರ್ಟ್ ಕಟ್ಟಡವನ್ನು ಕಟ್ಟುವುದಕ್ಕೆ ನಿಮ್ಮ ಪರಿಷ್ಕೃತ ಅಂದಾಜು ವೆಚ್ಚ ಎಷ್ಟು ಮತ್ತು ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ? ಈ ಸಾಲಿನ ಹಣಕಾಸಿನ ವರ್ಷದಲ್ಲಿ ಹಣವನ್ನು ಒದಗಿಸಿ ಈ ಕಟ್ಟಡವನ್ನು ಪೂರ್ತಿ ಮಾಡಲಾಗುತ್ತದೆಯೋ? ಆಮೇಲೆ ಸಬಾರ್ಡಿನೇಟ್ ಜುಡಿಷಿಯರಿ ಕ್ವಾರ್ಟರ್ಸ್‌ಗಳನ್ನು ಕಟ್ಟಿಸುವುದಕ್ಕೆ ತಾವು ಹಣವನ್ನು ಒದಗಿಸಲಿಲ್ಲ, ಮೂರ್‍ನಾಲ್ಕು ವರ್ಷಗಳ ಹಿಂದೆ ಪ್ರಾರಂಭ ಮಾಡಿದ ಕಟ್ಟಡಗಳು ಇನ್ನೂ ಪೂರ್ತಿಯಾಗದೇ ಅರ್ಧದಲ್ಲೇ ನಿಂತಿವೆ. ಅರ್ಧ ಕಟ್ಟಲಾಗಿರುವ ಈ ಕ್ವಾರ್ಟರ್ಸ್‌ನ್ನು ಪೂರ್ತಿ ಮಾಡಲಿಕ್ಕೆ ಎಷ್ಟು ಹಣವನ್ನು ಈ ವರ್ಷ ಕೊಟ್ಟಿದ್ದೀರಿ? ಮತ್ತು ಹೊಸ ಕ್ವಾರ್ಟರ್ಸ್‌ನ್ನು ಕಟ್ಟಲಿಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೀರಿ? ತಾಲ್ಲೂಕು ಮಟ್ಟದಲ್ಲಿರತಕ್ಕ ಬಾರ್ ಅಸೋಸಿಯೇಷನ್‌ಗಳಿಗೆ ಸರಿಯಾಗಿ ಗ್ರ್ಯಾಂಟ್‌ನ್ನು ಸರ್ಕಾರ ಕೊಡುತ್ತಿಲ್ಲ, ಈಗ ಕೊಡುತ್ತಿರುವ ಗ್ರ್ಯಾಂಟ್‌ನ್ನು ಹೆಚ್ಚಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಗ್ರ್ಯಾಂಟ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಹೋದ ವರ್ಷ ಒಟ್ಟು ಮೂರೂವರೆ ಲಕ್ಷ ರೂಪಾಯಿಗಳನ್ನು ಬಾರ್ ಅಸೋಸಿಯೇಷನ್‌ಗಳಿಗೆ ಕೊಡಲಾಗಿದೆ. ಈ ವರ್ಷ ೪ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಒಟ್ಟು ನಮ್ಮ ರಾಜ್ಯದಲ್ಲಿ ೧೯೪ ಬಾರ್ ಅಸೋಸಿಯೇಷನ್‌ಗಳು ಇವೆ. ಅವುಗಳಲ್ಲಿ ಗ್ರ್ಯಾಂಟ್ ಕೊಡಿ ಎಂದು ೪೨ ಅಸೋಸಿಯೇಷನ್‌ಗಳು ಮಾತ್ರ ಕೇಳಿದ್ದಾರೆ

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಸರಿಯಾಗಿ ಕೊಡುವುದಿಲ್ಲವೆಂದು ಎಲ್ಲರೂ ಕೇಳುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಆಮೇಲೆ ಹೈಕೋರ್ಟ್ ಬಿಲ್ಡಿಂಗ್ ಬಗ್ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರೆಂದು ಕೇಳಿದ್ದಾರೆ. ಇದುವರೆಗೆ ಖರ್ಚು ಮಾಡಿರತಕ್ಕ ಹಣದ ವಿವರ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿಕೊಡುತ್ತೇನೆ. ಈ ವರ್ಷ ಹೈಕೋರ್ಟಿನ ಉತ್ತರ ಭಾಗದ ಕಟ್ಟಡದ ಕೆಲಸವನ್ನು ಮುಗಿಸುವ ಕಾರ್ಯಕ್ಕೆ ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಹೈಕೋರ್ಟ್ ಅನೆಕ್ಸ್ ಕಟ್ಟಡ ಕಟ್ಟುವುದಕ್ಕೆ ೨೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ತೋರಿಸಿದ್ದೇವೆ.

ಆಮೇಲೆ ಕ್ವಾರ್ಟರ್ಸ್ ಬಗ್ಗೆ ಕೇಳಿದ್ದೀರಿ Administrative approval accorded for construction of court buildings–28. ಇವುಗಳನ್ನು ೧೯೮೩ರಿಂದ ೧೯೮೭ ರವರೆಗೆ ಮಾಡಿರುವುದು, ೧೯೮೭–೮೮ ರಲ್ಲಿ ಒಟ್ಟು ೩೧ ಕಟ್ಟಲಾಗಿದೆ Administrative approval accorded for construction of residential quarters–Total 29. No of residential quarters completed-10 ಇನ್ನೂ ಕೆಲವು ಕೊನೆ ಹಂತದಲ್ಲಿ ಇವೆ ಅವುಗಳನ್ನು ಬೇಗ ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಮೇಲೆ ನಮ್ಮ ರಾಜ್ಯದಲ್ಲಿ ಒಟ್ಟು ಕೋರ್ಟ್‌ಗಳ ಸಂಖ್ಯೆ ೩೨೮. ಇವುಗಳಲ್ಲಿ ೨೦೨ ಕೋರ್ಟ್‌ಗಳಿಗೆ ಸ್ವಂತ ಕಟ್ಟಡಗಳು ಇವೆ. ಉಳಿದ ಕಡೆ ಸ್ವಂತ ಕಟ್ಟಡಗಳು ಇಲ್ಲ. ಇದೇ ರೀತಿಯಾಗಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಅಧಿಕಾರಿಗಳ ಸಂಖ್ಯೆ ೪೯೮ ಇವರುಗಳಲ್ಲಿ ಸುಮಾರು ೪೦೧ ಜನಕ್ಕೆ ಸರ್ಕಾರಿ ಕಟ್ಟಡಗಳು ಇಲ್ಲ. ಅವರುಗಳಿಗೆ ಹಂತಹಂತವಾಗಿ ಕಟ್ಟಡಗಳನ್ನು ಒದಗಿಸಿಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಶ್ರೀ ಜಿ. ರಾಜುಗೌಡ.—ಸ್ವಾಮಿ, ಇದುವರೆಗೆ ರೇಷ್ಮೆ ಇಲಾಖೆಯ ವರದಿಯನ್ನು ಬೇರೆ ಇಲಾಖೆಯ ವರದಿಗಳ ಪುಸ್ತಕದಲ್ಲೇ ಸೇರಿಸಿ ಕೊಡುತ್ತಿದ್ದರು. ಈ ವರ್ಷ ಮಾನ್ಯ ಸಚಿವರು ಪೂರ್ಣವಾಗಿರತಕ್ಕ ಒಂದು ವರದಿಯನ್ನು ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಚಾರ. ನಾನು ಕೇಳುವುದೇನೆಂದರೆ. ವಿಶ್ವ ಬ್ಯಾಂಕಿನಿಂದ ೧೦೭ ಕೋಟಿ ರೂಪಾಯಿಗಳನ್ನು ಪಡೆದು ತಾವು ಏನು ಖರ್ಚು ಮಾಡಿದ್ದೀರಿ, ಅದರಲ್ಲಿ ಅನುತ್ಪಾದನಾ ಯೋಜನೆಗಳಿಗೇ ಹೆಚ್ಚು ಖರ್ಚು ಮಾಡಿದ್ದೀರಿ. ಅಂದರೆ ಕಟ್ಟಡಗಳನ್ನು ಕಟ್ಟುವುದಕ್ಕೆ ತಾವು ಉಪಯೋಗಿಸಿದ್ದೀರಿ. ಕೃಷಿಕರಿಗೆ ಸೌಲಭ್ಯ ಕೊಡುವುದಕ್ಕೆ

ಆ ಹಣವನ್ನು ಖರ್ಚು ಮಾಡಿಲ್ಲ, ಆದ್ದರಿಂದ, ವಿಶ್ವಬ್ಯಾಂಕ್ ಎರಡನೇ ಫೇಸ್‌ನ ನೀಲಿ ನಕ್ಷೆಯನ್ನು ತಯಾರು ಮಾಡುವಾಗ ಬೆಂಗಳೂರು, ಮೈಸೂರು, ಕೋಲಾರ, ತುಮಕೂರು ಜಿಲ್ಲೆಯ ರೇಷ್ಮೆ ಬೆಳೆಗಾರರನ್ನು ಸೇರಿಸಿಕೊಂಡು ಮಾಡಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಸಲಹೆಯನ್ನು ನಾನು ಒಪ್ಪಿಕೊಂಡಿದ್ದೇನೆ.

ಅಧ್ಯಕ್ಷರು.—ಅವರು ಇನ್ನೂ ಹೇಳಿ ಮುಗಿಸಿಲ್ಲ.

ಶ್ರೀ ಜಿ. ರಾಜೂಗೌಡ.—ಬೈ ವೋಲ್ಟೀನ್ ತಳಿಯನ್ನು ತಯಾರು ಮಾಡುವುದು ೧೦೦೦ ಟನ್ ಅಲ್ಲ. ೧೦ ೦೦೦ ಮೆಟ್ರಿಕ್ ಟನ್‌ನಷ್ಟು ತಯಾರಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ೧೦ ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಮಾಡತಕ್ಕಂಥಾದ್ದು ನಿಮ್ಮ ಗುರಿ ಎಂದು ಇಟ್ಟುಕೊಂಡು ಆ ಗುರಿಯನ್ನು ಮುಟ್ಟಲು ಟಿ. ನರಸೀಪುರದ ಕಾರ್ಖಾನೆ ಆಧುನೀಕರಣ ಮಾಡಿದ್ದು, ವಿಸ್ತಾರ ಮಾಡಿದ್ದು. ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದ್ದಾರೆ. ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಗುರಿ ಮಾಡಬೇಕೆಂದು ಅವರು ಹೇಳಿದ್ದಾರೆ. ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಹೇಳತಕ್ಕಂಥಾದ್ದು ಏನೆಂದರೆ, ೧೦ ಸಾವಿರ ಮೆಟ್ರಿಕ್ ಟನ್‌ಗಳಷ್ಟು ಬೈವೋಲ್ಟೀನ್ ರೇಷ್ಮೆ ಗೂಡಿನ ಉತ್ಪಾದನೆ ಆಗುತ್ತದೆ ಎಂಬ ಒಂದು ಕಲ್ಪನೆಗೆ ಮಾಡಿ ಟಿ. ನರಸೀಪುರದ ಕಾರ್ಖಾನೆ ವಿಸ್ತಾರ ಮಾಡಿದ ಮೇಲೆ, ಮೊದಲು ಇದ್ದುದಕ್ಕಿಂತ ೨-೩ ಸಾವಿರ ಟನ್ ಕಡಿಮೆಯಾಯಿತು ಅಂದರೂ ಕೂಡ ಇವರ ಉತ್ಪಾದನೆ ಒಂದು ಸಾವಿರ ಮೆಟ್ರಿಕ್ ಟನ್‌ಗಳಷ್ಟೂ ಕೂಡ ಆಗಲಿಲ್ಲ. ಅದಕ್ಕೆ ಯಾರು ಕಾರಣರು ? ಯಾರು ಇದನ್ನು ಮಾಡಿದರು? ಎಂಬುದನ್ನು ನೋಡಿಕೊಂಡು ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ತಾವು ಜವುಳಿ ದಾಸ್ತಾನು ವಿಚಾರದಲ್ಲಿ ಹೇಳಿದ್ದೀರಿ. ನಮ್ಮ ರಾಜ್ಯದಲ್ಲಿ ನೇಯ್ಗೆಯವರು ಇರುವಾಗ ತಮಿಳುನಾಡಿನ ಕೊಯಮುತ್ತೂರು ಮತ್ತು ಈರೋಡ್‌ಗಳಿಗೆ ನೇಯ್ಗೆಗಾಗಿ ಕಳುಹಿಸಿದ್ದೀರಿ. ಈ ಜವುಳಿಯಲ್ಲಿ ೧೦೦ ಕೌಂಟ್‌ನ ನೂಲು ಮಿಶ್ರವಾಗಿದೆ ಎಂದು ತಿಳಿದು ಬಂದಿದೆ. ೩೧-೩-೧೯೮೭ ರಂದು ತಾವುಗಳು ಸುಮಾರು ೧೬ ಲಕ್ಷ ರೂಪಾಯಿಗಳ ಜವುಳಿ ದಾಸ್ತಾನು ಇದೆ ಎಂದು ಹೇಳಿದ್ದೀರಿ. ಇದು ಪೂರ್ಣ ಮಾರಾಟವಾದ ಮೇಲೆ ಇದರ ಬಗ್ಗೆ ದಯವಿಟ್ಟು ವಿವರಗಳನ್ನು ಕೊಡಬೇಕು. ಇಷ್ಟೊಂದು ಬಂಡವಾಳಕ್ಕೆ ಬಡ್ಡಿ ಇತ್ಯಾದಿಯಾಗಿ ಲೆಕ್ಕ ಹಾಕಿದರೆ ಆಗುವ ನಷ್ಟದ ಅಂದಾಜು ಆಗುತ್ತದೆ.

ತಾವುಗಳು ಬೆಲೆ ಸ್ಥಿರೀಕರಣ ಮಾಡಬೇಕಾದರೆ ಶೇಕಡಾ ೭೫ ರಷ್ಟು ರೇಷ್ಮೆಗೂಡನ್ನು ಕೊಂಡುಕೊಳ್ಳಬೇಕಾಗುತ್ತದೆ. ದರ ಸ್ಥಿರೀಕರಣ ಮಾಡಬೇಕಾದರೆ ಅದಕ್ಕೆ ಸಾಕಷ್ಟು ಹಣವನ್ನು ಕೊಡಬೇಕು. ಆದುದರಿಂದ ಬೆಲೆ ಸ್ಥಿರೀಕರಣ ನಿಧಿಯಿಂದ ಇದಕ್ಕೆ ಹಣವನ್ನು ಒದಗಿಸುವಂತಾಗಬೇಕು.

ಇನ್ನು ಸರಕಾರಿ ರೇಷ್ಮೆ ಕಾರ್ಖಾನೆಗಳಿಗೆ ಬಿಡಿ ಭಾಗಗಳನ್ನು ಕೊಂಡುಕೊಳ್ಳತಕ್ಕಂಥ ವಿಚಾರದಲ್ಲಿ ರಾಜೂಗೌಡರು ಉತ್ಪ್ರೇಕ್ಷೆಯ ಮಾತನಾಡಿದ್ದಾರೆ ಎಂದು ಹೇಳಿದ್ದೀರಿ. ೧೯೮೬-೮೭ರಲ್ಲಿ ಸರಕಾರಿ ರೇಷ್ಮೆ ಕಾರ್ಖಾನೆಗಳಿಗೆ ಬಿಡಿ ಭಾಗಗಳನ್ನು ಕೊಂಡುಕೊಳ್ಳತಕ್ಕಂಥ ವಿಚಾರದಲ್ಲಿ ಆಗಿರತಕ್ಕಂಥ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಲಿಕ್ಕೆ ಡೈರೆಕ್ಟರ್‌ರವರು ೩-೧೦-೧೯೮೬ರಲ್ಲಿ ಜಾಯಿಂಟ್ ಡೈರೆಕ್ಟರ್ ಆಫ್ ಸೆರಿಕಲ್ಚರ್ ಆದ ಶ್ರೀ ನಾಗರಾಜ್‌ರವರನ್ನು ನೇಮಿಸಿದ್ದರು ಅವರು ಕೊಟ್ಟ ವರದಿಯೂ ಸರಕಾರಕ್ಕೆ ಬಂದಿದೆ. ಅದನ್ನು ನೋಡಿದಾಗ ತಮಗೆ ಲೆಕ್ಕಾಚಾರ ಗೊತ್ತಾಗಬಹುದು ಎಂದು ಅಂದುಕೊಂಡಿದ್ದೇನೆ. ಆ ಬಗ್ಗೆ ನನಗೆ ಆ ಮೇಲೆ ಉತ್ತರವನ್ನು ಹೇಳಿ ಎಂದು ಹೇಳಲಿಚ್ಛಿಸುತ್ತೇನೆ. ಇನ್ನು ತಾವುಗಳು ಜಪಾನ್ ದೇಶದಿಂದ ಯಂತ್ರಗಳನ್ನು ಆಮದು ಮಾಡಿ ಕೊಂಡಿದ್ದೀರಿ. ನಮ್ಮಲ್ಲಿರತಕ್ಕಂಥ ಕಚ್ಚಾ ಮಾಲು ಮತ್ತು ಗೂಡುಗಳು ಆ ಯಂತ್ರಕ್ಕೆ ಹೊಂದಾಣಿಕೆಯಾಗುತ್ತಾ ಇಲ್ಲ. ಅದರಿಂದಾಗಿ ಅಪಾರ ನಷ್ಟವಾಗಿದೆ. ಇದರ ಬಗ್ಗೆ ತಮ್ಮ ವಿಚಾರಗಳನ್ನು ಹೇಳಬೇಕು. ಕೊನೆಯದಾಗಿ, ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ೭.೧ ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ. ಇದು ಕೆ.ಇ.ಬಿ.ಯವರು ಕಳುಹಿಸಿರತಕ್ಕಂಥ ಬಿಲ್‌ನ್ನು ತಿದ್ದುಪಡಿ ಮಾಡಿದ್ದರ ಬಗ್ಗೆ ಉಂಟಾದ ನಷ್ಟವಾಗಿದೆ. ಈ ರೀತಿಯ ದುರುಪಯೋಗವನ್ನು ಮಾಡಿದ್ದಾರೆ. ಹಾಗೆಯೇ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆ ಟೆಸ್ಟ್ ಮಾಡುವುದಕ್ಕೆ ಉಪಯೋಗವಾಗುವಂಥ ವಿದ್ಯುತ್ ವಿಚಾರದಲ್ಲಿ ಕೂಡ ೬-೭ ಲಕ್ಷ ರೂಪಾಯಿಗಳ ಅವ್ಯವಹಾರ ಮಾಡಿದ್ದಾರೆ. ಇಂಥ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಮ್ಮದು ಒಂದು ಮಿನಿ ಭಾಷಣ ಆದ ಹಾಗೆ ಆಗಿದೆ.

ಶ್ರೀ ಜಿ. ರಾಜುಗೌಡ.—ಇನ್ನು, ಈ ಸಿಲ್ಕ್ ಎಕ್ಸ್‌ಚೇಂಜ್‌ನವರು ಎರಡು ಕಾರುಗಳನ್ನು ತೆಗೆದು ಕೊಂಡಿದ್ದಾರೆ ಏತಕ್ಕೋಸ್ಕರವಾಗಿ ಇದನ್ನು ತೆಗೆದುಕೊಂಡಿದ್ದಾರೆ ? ಇದನ್ನು ಫೈರ್‌ಸ್ಟಬಿಲೈಸರ್ ಫಂಡನಿಂದ ತೆಗೆದುಕೊಂಡಿದ್ದಾರೆ. ಇಷ್ಟಕ್ಕೆ ನನಗೆ ಉತ್ತರವನ್ನು ಹೇಳಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.—ಅಧ್ಯಕ್ಷರೆ, ವಿಶ್ವಬ್ಯಾಂಕ್‌ನಿಂದ ಬರತಕ್ಕಂಥ ಹಣ, ಹೆಚ್ಚಾಗಿ ಯಂತ್ರೋಪಕರಣಗಳನ್ನು ಮತ್ತು ಕಚೇರಿಗಳನ್ನು ನಿರ್ಮಾಣ ಮಾಡುವುದಕ್ಕೆ ಉಪಯೋಗವಾಗಿದೆ ಎನ್ನುವ ಮಾತನ್ನು ನಾನು ಸ್ವಲ್ಪ ಹೆಚ್ಚುಕಡಿಮೆ ಒಪ್ಪಿಕೊಂಡಿದ್ದೇನೆ. ನಾವು ವಿಶ್ವಬ್ಯಾಂಕ್‌ನಿಂದ ಬರತಕ್ಕಂಥ ಲಾಭವನ್ನು ಪಡೆಯ ಬೇಕಾದರೆ, ನಮ್ಮ ಯಂತ್ರೋಪಕರಣಗಳು ಮತ್ತು ವಾಹನಗಳು ಮತ್ತಿತರ ಉಪಕರಣಗಳು ಮತ್ತು ವಿಧಾನಗಳನ್ನು ಸರಿಪಡಿಸಿದ ಹೊರತು ನಮ್ಮ ಗುರಿ ಸಾಧನೆ ಯಾಗುವುದಿಲ್ಲ. ಈ ಬಗ್ಗೆ ವಿಶ್ವಬ್ಯಾಂಕ್‌ನವರು ಕೂಡ ನಮಗೆ ಮೆಚ್ಚುಗೆಯನ್ನು ಕೊಟ್ಟಿದ್ದಾರೆ, ಟಿ. ನರಸೀಪುರದ ಬಗ್ಗೆ ವಿವರಗಳನ್ನು ಕೊಟ್ಟಿದ್ದೇನೆ. ಅದರಲ್ಲಿ ಆದ ನಷ್ಟದ ಕಾರಣಗಳನ್ನು ಕೂಡ ಹೇಳಿದ್ದೇನೆ. ಸ್ಪೆಷಲ್ ಪಾರ್ಟ್ಸ್ ಬಗ್ಗೆ ನಾವು ಲೆಕ್ಕ ಹಾಕಿದ್ದೇವೆ. ಅದು ೦.೮೬ ಮಾತ್ರ ಆಗುತ್ತದೆ. ನಾಗರಾಜ ವರದಿಯ ಬಗ್ಗೆ ಹೇಳಿದ್ದಾರೆ ಅದರ ಬಗ್ಗೆ ವಿಚಾರಣೆ ಮಾಡಿ ಮುಂದಿನ ಕ್ರಮವನ್ನು ತೆಗೆದು ಕೊಳ್ಳುತ್ತೇವೆ.

ಕೆ.ಇ.ಬಿ. ಬಿಲ್ ವಿಚಾರದಲ್ಲಿ ಸುಮಾರು ೬ ಲಕ್ಷ ದುರುಪಯೋಗವಾಗಿದೆ ಎಂಬ ಬಗ್ಗೆ ತನಿಖೆ ನಡೆಯುತ್ತಿದ್ದು ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆಂದು ಹೇಳುತ್ತೇನೆ. ಇನ್ನು ರೇಷ್ಮೆ ಕೇಂದ್ರದ ಬಗ್ಗೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಎರಡು ಕಾರ್‌ಗಳನ್ನು ಕೊಂಡಿರುವುದನ್ನು ಅವರು ಭಾಷಣದಲ್ಲಿ ಹೇಳಲಿಲ್ಲ. ಅದನ್ನು ವಿಚಾರ ಮಾಡುತ್ತೇನೆ, ಕಾರ್ ತೆಗೆದುಕೊಂಡಿದ್ದರೆ ಎಲ್ಲಿ ಹೋಗುತ್ತದೆ ? ಇನ್ನು ಜವಳಿ ಬಗ್ಗೆ ಹೇಳುವುದಾದರೆ ಇದರಲ್ಲಿ ಡುಬಿಯಾನ್ ೫೬೫ ಮೀ. ಗಿಜ್ಯಾನ್ ೯೫೦ ಮೀ. ಮತ್ತು ನ್ಯಾಯಿಜಾನ್ ೧೧೮೬ ಮೀ.ಗಳ ದಾಸ್ತಾನಿದ್ದು ಅವುಗಳಿಂದ ಬಂದಿರುವ ಲಾಭ ೨೩,೬೩೨ ರೂ. ಲಾಭ ವಾಗಿದೆ. ಹಾಗೆಯೇ ಇನ್ನೂ ಉಳಿದಿರುವ ೨೭೧೧ ಮೀಟರ್ ಜವಳಿಯನ್ನು ಮಾರಿದರೆ ೧,೯೩,೫೭೦ ರೂ. ಬರುವ ಸಾಧ್ಯತೆಯಿದ್ದು ಇದರಿಂದ ಲಾಭವಾಗುವುದೆಂಬ ಆಶಯವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಯು ಭೂಪತಿ.—ಮಾನ್ಯ ಅಧ್ಯಕ್ಷರೇ, ನಾನು ಲೆಜಿಸ್ಲೇಚರ್ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಪ್ರಾಮುಖ್ಯವಾದ ವಿಚಾರವೇನೆಂದರೆ ಒಂದು ಲೆಜಿಸ್ಲೇಚರ್‌ಗೆಂದು ಸೆಪರೇಟ್ ಹೆಡ್ ಆಫ್ ಅಕೌಂಟ್‌ನಲ್ಲಿ ಹಣ ಕೊಟ್ಟ ಮೇಲೆ ಆ ಇಲಾಖೆ ಈ ಮನೆಗೆ ವರದಿ ಕೊಡುವ ಬಾಧ್ಯತೆ ಹೊಂದಿಲ್ಲವೇ ? ಮತ್ತು ಅದನ್ನು ಡಿಸ್ಕಸ್ ಮಾಡುವ ಹಕ್ಕು ಈ ಮನೆಗಿಲ್ಲವೇ ಎಂಬುದು. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರವೆಂದರೆ ಕಳೆದ ೫ ವರ್ಷಗಳಲ್ಲಿ ಬೇರೆ ಸಮಿತಿಗಳು ಅಂದರೆ ಪಿಎಸಿ, ಪಿಯುಸಿ ಎಸ್ಟಿಮೇಟ್ಸ್ ಮುಂತಾದುವುಗಳು ನಾನಾ ಇಲಾಖೆಗಳ ಮೇಲೆ ಪರಿಶೀಲನೆ ಮಾಡಿ ವರದಿ ಕೊಟ್ಟಿರುವುದು ಸರಿಯಷ್ಟೆ. ಅದರಲ್ಲಿ ಯಾವ್ಯಾವ ವರದಿಗಳನ್ನು ಆಧರಿಸಿ ಸರ್ಕಾರ ಏನೇನು ಕ್ರಮ ಕೈಗೊಂಡಿದೆ ಎಂದು ತಿಳಿಯಬಯಸಿದ್ದೆ. ಇಲ್ಲಿ ಏನಾಗುತ್ತದೆಂದರೆ ಆ ವರದಿಗಳ ಬಗ್ಗೆ ಚರ್ಚೆ ನಡೆಯದಿರುವುದರಿಂದ ಪಿಎಸಿ ರಿಪೋರ್ಟ್ ಬಗ್ಗೆ ಅದರ ಅಧ್ಯಕ್ಷರಿಗೆ ಮಾತ್ರ ಏನಾದರೂ ಗೊತ್ತಿರುತ್ತದೆಯೇ ಹೊರತು ಬೇರಾರಿಗೂ ಇರುವುದಿಲ್ಲ. ಹೇಗೆ ನೀವು ಜನತಾ ಸರ್ಕಾರದ ಐದು ವರ್ಷಗಳ ಸಾಧನೆ ಎಂಬ ಪುಸ್ತಕ ತಂದಿರುವಂತೆ ಇದರ ಬಗ್ಗೆಯೂ ಏಕೆ ಒಂದು ವರದಿ ಮಾಡಬಾರದು ?

ಶ್ರೀ ಎ. ಲಕ್ಷ್ಮೀಸಾಗರ್.—ಈಗಾಗಲೇ ಇಂಡಿಪೆಂಡೆಂಟ್ ಲೆಜಿಸ್ಲೇಚರ್ ಸೆಕ್ರೆಟೆರಿಯೇಟ್ ಅಸ್ತಿತ್ವ ದಲ್ಲಿದೆ. ಸಂವಿಧಾನದಲ್ಲಿ ಆರ್ಟಿಕಲ್ ೧೮೭ರ ಪ್ರಕಾರ ಸೆಪರೇಟ್ ಲಿಜಿಸ್ಲೇಚರ್ ಇರಬೇಕೆಂದಿದೆಯೇ ಹೊರತು ಅದು ಇಂಡಿಪೆಂಡೆಂಟಾಗಿರಬೇಕು ಎಂದು ಬರೆದಿಲ್ಲ. ಆದರೂ ಕೂಡ ಕೆಲವು ವಿಷಯಗಳಲ್ಲಿ ಲೆಜಿಸ್ಲೇಚರ್‌ಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಮೊಯ್ಲಿಯವರೂ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಇದು ಇವತ್ತಿಗೂ ತೀರ್ಮಾನವಾಗಿಲ್ಲ. ಆರ್ಟಿಕಲ್ ೫೩ ಮತ್ತು ಆರ್ಟಿಕಲ್ ೧೫೪ಗಳನ್ನು ತಾವು ನೋಡಿಕೊಂಡು ಬಂದರೆ ಇಬ್ಬರೂ ಕೂತು ಮಾತನಾಡೋಣ. ಈ ಕಾನೂನು ವ್ಯಾಪ್ತಿಯಲ್ಲಿ ಕೆಲವು ವರ್ಗದ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ, ಶಿಸ್ತಿನ ಕ್ರಮ ಕೈಗೊಳ್ಳುವುದಕ್ಕೆ, ಮುಂತಾದ ಅಧಿಕಾರವನ್ನು ಲೆಜಿಸ್ಲೇಚರ್‌ಗೇ ಕೊಟ್ಟಿದ್ದೇವೆ, ಆದ್ದರಿಂದ ಸಂವಿಧಾನದ ವ್ಯಾಪ್ತಿಯೊಳಗೆ ಬರುವ ರೀತಿಯಲ್ಲಿ ಅದಕ್ಕೆ ವಿರುದ್ಧವಾಗದ ರೀತಿಯಲ್ಲಿ ವ್ಯವಸ್ಥೆ

ಮಾಡಿದ್ದೇವೆ, ಸ್ವಾಮಿ. ಕಮಿಟಿ ವರದಿಗಳ ಬಗ್ಗೆ ಕೇಳಿದ್ದೀರಿ. ಅಷ್ಯೂರೆನ್ಸ್ ಕಮಿಟಿ ಇದೆ ಎಂದು ಮಾನ್ಯ ಭೂಪತಿಯವರಿಗೆ ನಾನು ಮನವಿ ಮಾಡುತ್ತೇನೆ. ಅವರ ಮುಂದೆ ಹೋಗಿ ಇದನ್ನು ಪ್ರಸ್ತಾಪ ಮಾಡಬೇಕು ಅಷ್ಯೂರೆನ್ಸ್ ಕಮಿಟಿ ಏಕೆ ಇರುವುದು ಎಲ್ಲೆಲ್ಲಿ ಏನೇನು ಕೆಲಸವಾಗಿಲ್ಲ ಎಲ್ಲೆಲ್ಲಿ ಏನೇನು ಮಾಡಿದ್ದಾರೆ ಅದನ್ನು ಅಲ್ಲಿ ಪ್ರಸ್ತಾಪ ಮಾಡುವುದು ಇದು ಒಂದು ವಿಧಾನ. ಅವರಿಗೆ ಇನ್ನೊಂದು ಸಲಹೆ ಕೊಡತಕ್ಕಂಥಾದ್ದು ಏನೆಂದರೆ, ಈ ವರದಿಗಳ ಮೇಲೆ ಚರ್ಚೆ ಮಾಡಬೇಕೆಂದು ಬಿಜಿನೆಸ್ ಅಡ್ವೈಸರಿ ಕಮಿಟಿ ಮುಂದೆ ಇದೆ ಅದಕ್ಕೋಸ್ಕರವಾಗಿ ಪ್ರತ್ಯೇಕವಾದಂತಹ ಸಭೆಯನ್ನು ಕರೆಯಬೇಕೆಂದು ಯೋಚನೆ ಮಾಡಿದ್ದೇವೆ. ಬಡ್ಜೆಟ್ ಅಧಿವೇಶನವಾದ ಮೇಲೆ ಮುಂದಿನ ಸಲ ಭೇಟಿ ಮಾಡಿದಾಗ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಯಮ್. ಭೂಪತಿ.—ನಾನು ಕೇಳಿದ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಈ ಗಾಗಲೇ ಕಮಿಟಿಗಳು ಮಾಡಿರತಕ್ಕಂತಹ ಫೈಂಡಿಂಗ್ಸ್ ಮೇಲೆ ಸರಕಾರ ಏನೇನು ಕ್ರಮ ತೆಗೆದುಕೊಂಡಿದೆಯೆಂಬುದರ ಬಗ್ಗೆ ವರದಿ ಕೊಡಿ ಎಂದು ನಾನು ಕೇಳಿದ್ದು ? ಅವರು ಕೊಡುತ್ತಿರುವ ಉತ್ತರಕ್ಕೂ ಅಷ್ಯೂರೆನ್ಸ್ ಕಮಿಟಿಗೂ ಏನೇನು ಸಂಬಂಧವಿಲ್ಲ. ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಯಮ್. ಭೂಪತಿ.—ನೀವು ಹೇಳಿದ್ದುದು ನಿಮಗೇ ಸ್ಪಷ್ಟವಾಗಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಕೇಳಿದ್ದು ನಿಮಗೇ ಸ್ಪಷ್ಟವಾಗಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದೇನು ಅಷ್ಯೂರೆನ್ಸ್ ಕಮಿಟಿಗೆ ಹೋಗುವುದಿಲ್ಲ. ಅವರು ಏಕೆ ಈರೀತಿ ಉತ್ತರ ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ಯಮ್. ಭೂಪತಿ.—ಅಸೆಂಬ್ಲಿಯಲ್ಲಿ ಮಂತ್ರಿಗಳು ಕೊಟ್ಟ ಅಷ್ಯೂರೆನ್ಸ್ ಮಾತ್ರ ಆ ಕಮಿಟಿಗೆ ಹೋಗುತ್ತದೆ. ಕಮಿಟಿಗಳು ಮಾಡಿದಂತಹ ಫೈಂಡಿಂಗ್ಸ್ ಹೋಗುವುದಿಲ್ಲ ನೀವು ಲಾ ಮಿನಿಸ್ಟರ್ ಆಗಿ ಹೀಗೆ ಮಾತನಾಡಿದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ವರದಿ ಕೇಳಿದ್ದಾರೆ ರಿಪೋರ್ಟ್ ನನ್ನ ಕಡೆ ಇಲ್ಲ.

(ಗೊಂದಲ)

ಶ್ರೀ ಯಮ್. ಭೂಪತಿ.—ಇವರು ಇಲ್ಲಿ ಕೊಟ್ಟಂತಹ ಅಷ್ಯೂರೆನ್ಸ್‌ಗಳು ಮಾತ್ರ ಆ ಕಮಿಟಿಗೆ ಹೋಗುತ್ತವೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಸರ್ವೇ ಸಾಧಾರಣವಾಗಿರತಕ್ಕಂತಹ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ನನ್ನ ಮನಸ್ಸಿಗೆ ಬೇಸರವಾಗಿರುವ ಸಂಕಟವಾಗಿರುವ ವಿಚಾರದ ಬಗ್ಗೆ ಹೇಳುತ್ತೇನೆ. ಯಾರು ಹಿಂದುಳಿದವರಿದ್ದಾರೆ, ಎಸ್.ಸಿ. ಯವರು ಇದ್ದಾರೆ ಅಂತಹವರ ಬಗ್ಗೆ ಸರಕಾರದವರು ಯಾವುದಾದರೂ ಕಾನೂನು ಹುಕುಂ ಮಾಡಿದರೆ ಅದಕ್ಕೆ ರಿಟ್ ಹಾಕಿ ಅದನ್ನು ಹೈಕೋರ್ಟಿಗೆ ತೆಗೆದುಕೊಂಡು ಹೋಗುತ್ತಾರೆ ಇಂತಹ ಕೇಸುಗಳಲ್ಲಿ ಬಡವರಿಗೆ ಅನ್ಯಾಯವಾಗತಕ್ಕಂಥಾದ್ದು ಏನು ಇದೆ ಅವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಡುವ ಹಾದಿಯಲ್ಲಿ ನೀವು ಇದ್ದಾಗ ಅದನ್ನು ಜಾಗ್ರತೆಯಾಗಿ ಡಿಸ್‌ಪೋಸ್ ಮಾಡಲಿಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಇದು ಹೈಕೋರ್ಟ್ ವ್ಯಾಪ್ತಿಯಲ್ಲಿ ಬರುತ್ತದೆ ನಾವು ಏನು ಹಾಗೆ ಕೈ ಹಾಕುವುದು ಎಂದು ತಾವು ಹೇಳಬಹುದು. ನಾನು ಸಾರ್ವಜನಿಕ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಇದು ಬಹಿರಂಗವಾಗಿ ಆದರೆ ಅವರಾದರೂ ತಿದ್ದುಕೊಳ್ಳಲಿಕ್ಕೆ ಅವಕಾಶವಾದೀತು, ಇದನ್ನು ನಾನು ಹಲವಾರು ಬಾರಿ ವಿಚಾರ ಮಾಡಿದ್ದೇನೆ. ಸಾಮಾಜಿಕ ನ್ಯಾಯ ದೊರಕಿಸಿಕೊಡತಕ್ಕಂತಹ ಕೇಸಸ್‌ಗೆ ಸಂಬಂಧಪಟ್ಟ ಹಾಗೆ ಇದನ್ನು ಆದಷ್ಟು ಬೇಗ ತೀರ್ಮಾನ ಮಾಡುವುದಕ್ಕೆ ತಾವು ಗಮನಕೊಟ್ಟು ಹೆಚ್ಚಿನ ಇಂಟರೆಸ್ಟ್ ತೆಗೆದುಕೊಂಡು ಹೈಕೋರ್ಟಿಗೆ ಏನಾದರೂ ಒತ್ತಾಯ ಮಾಡುತ್ತೀರಾ ? ಎರಡನೆಯದಾಗಿ ಹೇಳುವುದಾದರೆ ಸಾರ್ವಜನಿಕ ವಲಯ, ಸಮಾಜದಲ್ಲಿ ತಿರುಗಾಡುವ ಜನಗಳಿಗೆ ಕೋರ್ಟಿನ ಬಗ್ಗೆ ಗೌರವಾದರಗಳು ಇರಲೇಬೇಕು ಅದೇ ರೀತಿಯಾಗಿ ನಾವು ಕಾಪಾಡಿಕೊಂಡು ಬಂದಿದ್ದೇವೆ. ಆದರೆ ಬೀದಿಗಳಲ್ಲಿ ಏನೇನು ಮಾತನಾಡುತ್ತಿದ್ದಾರೆಂದರೆ.

* * *

**Expunged as orders by the Chair.

ಶ್ರೀ ಎ. ಲಕ್ಷ್ಮೀಸಾಗರ್.—ದಯಮಾಡಿ ತಾವು ಹಾಗೆ ಹೇಳಬಾರದು. ಕೋರ್ಟಿನ ತೀರ್ಮಾನಗಳು ಪರಾಜಾಗುತ್ತಿದೆಯೆಂದು ಹೇಳುತ್ತಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಇದನ್ನು ಹೇಳಬಾರದು. ನಾಳೆ ಇನ್ನೇನ್ನೋ ಹೇಳುತ್ತಾರೆ. ನನ್ನ ಬಗ್ಗೆ ಮಾನ್ಯ ಬಸವಲಿಂಗಪ್ಪನವರ ಬಗ್ಗೆ ರಸ್ತೆಯಲ್ಲಿ ಏನೇನೋ ಹೇಳುತ್ತಾರೆ ಅವನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ ಸ್ವಾಮಿ. It is not permissible according to my understanding.

xx xx xx

ಅಧ್ಯಕ್ಷರು.— I will expunge it. ತಾವು ನೇರವಾಗಿ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ರೂಲ್ ಹೇಳಿ

ಶ್ರೀ ಬಿ. ಬಸವಲಿಂಗಪ್ಪ.—ಜಾಸ್ತಿ ಮಾತನಾಡಿದರೆ ನಾನು ಕೇಸುಗಳನ್ನೇ ಕೊಡುತ್ತೇನೆ.

SRI A. LAKSHMISAGAR.—You have a remedy for that. This is not the forum for remedy.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಏನಾದರೂ ಹೇಳಿಬಿಟ್ಟರೆ ಎದ್ದು ಎದ್ದು ಕುಳಿತುಕೊಳ್ಳುತ್ತಾರೆ. ಇದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಹಿಂದೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಸಾರ್ವಜನಿಕ ಹಿತದೃಷ್ಟಿಯಿಂದ ಅಂಥಾದ್ದು ಏನಾದರೂ ತರ್ಕವಾದರೆ ಅದೇನಾದರೂ ಪಬ್ಲಿಷ್ ಆದರೆ ಮುಂದೆ ಒಳ್ಳೆಯದು ಆಧೀತು ಎಂದು ಹೇಳುತ್ತಿದ್ದೇನೆ. ಇಂತಹ ವಿಚಾರಗಳನ್ನು ಜನಗಳು ಮಾತನಾಡುತ್ತಿದ್ದಾರೆ ಅದಕ್ಕೆ ಅವಕಾಶ ಕೊಡದ ಹಾಗೆ ಅವರು ಎಚ್ಚೆತ್ತುಕೊಳ್ಳಬೇಕು ಅದಕ್ಕೆ ನೀವು ಕ್ರಮ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಮೂರನೆಯದು ಏನೆಂದರೆ ಶ್ರೀಮಾನ್ ಮೊಯಿಲಿಯವರು ಒಂದು ಮಾತನ್ನು ಕೇಳಿದರು ಈ ರೆಕ್ರೂಟ್‌ಮೆಂಟ್‌ಗಳ ಬಗ್ಗೆ. ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡುತ್ತಾರೆ, ಮುನ್ಸೀಫ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡುತ್ತಾರೆ. ಮುನ್ಸೀಫ್‌ಗಳನ್ನು ರೆಕ್ರೂಟ್‌ಮೆಂಟ್ ಮಾಡಲಿಕ್ಕೆ ಹೈಕೋರ್ಟಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಕೊಡುವಾಗ ಶ್ರೀಮಾನ್ ಮೊಯಿಲಿಯವರು ಏನು ಹೇಳಿದರು ಎಂದರೆ ಈ ರೋಸ್ಟರ್ ಸಿಸ್ಟಂನ್ನು ಅವರು ಫಾಲೊ ಮಾಡಿಲ್ಲ. ಸಾಕಷ್ಟು ಜನಗಳು ಇದ್ದರೂ ಕೂಡಾ ಈಗಿನ ನಿಯಮಾವಳಿಗಳ ಪ್ರಕಾರ ಅವರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲ ಎಂದು ಅವರು ಹೇಳುತ್ತಿದ್ದಾರೆ, ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ವೇಕೇಟ್ ಮಾಡತಕ್ಕಂಥ ಕೆಲವು ಸಾಮಾಜಿಕ ನ್ಯಾಯ ಪಡೆಯಬೇಕಾದಂಥ ಸಂದರ್ಭಗಳಲ್ಲಿ ಮೊಕದ್ದಮೆಗಳಲ್ಲಿ ತಡೆಯಾಜ್ಞೆ ಬಂದಿರತಕ್ಕಂಥ ಎಲ್ಲಾ ಸಮಯಗಳಲ್ಲೂ ಕೂಡಾ ಈ ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಪ್ರಯತ್ನ ನಮ್ಮಲ್ಲಿ ನಡೆದಿದೆ. ಒಂದು ಸಲ, ಎರಡು ಸಲ ನಡೆದಿದೆ. ಆದರೆ ಇದನ್ನು ತೆರವು ಮಾಡತಕ್ಕಂಥ ತೀರ್ಮಾನದ ಅಧಿಕಾರ ಹೈಕೋರ್ಟಿನವರಿಗೆ ಇದೆಯೋ ಹೊರತು ನಾವು ವಾದ ಮಾಡಿ ಅವರ ಮನಸ್ಸನ್ನು ಒಲಿಸುವುದಕ್ಕೆ ಪ್ರಯತ್ನ ಮಾಡಬಹುದು. ಅದು ಅವರಿಗೆ ಗೊತ್ತಿದೆ ವಾದಿ, ಪ್ರತಿವಾದಿಯನ್ನು ಕೇಳಿ early hearing, ಎಂದು ತೀರ್ಮಾನ ಮಾಡುವವರು ಅವರೇ.

ಶ್ರೀ ಬಿ. ಬಸವಲಿಂಗಪ್ಪ.—ವರ್ಷಗಟ್ಟಲೇ ತೀರ್ಮಾನ ಮಾಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಹೌದು ಸ್ವಾಮಿ, ಇಲ್ಲ ಎಂದು ಹೇಳಲಿಲ್ಲ. ಇನ್ನು ಏನು ಮಾಡಬೇಕು ಎಂದು ಹೇಳಿ. ನಮಗೆ ಪ್ರತ್ಯೇಕವಾಗಿ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಸ್ಟೇ ಆರ್ಡರ್‌ಗಳನ್ನು ಒಂದು ಜನಾಂಗಕ್ಕೆ ಅನ್ಯಾಯವಾಗುತ್ತಿರುವಾಗ ಸ್ಟೇ ಆರ್ಡರ್ ವೇಕೆಟ್ ಮಾಡಿಸುವುದಕ್ಕೆ ಒಂದು ಸಾರಿ ತೆಗೆದುಕೊಳ್ಳಿ. ನಾಲ್ಕು-ಐದು ವರ್ಷಗಳಾದರೂ ಆಗುವುದಿಲ್ಲ.

SRI A. LAKSHMISAGAR.—We have tried our best to get these stay orders vacated and to the best of our ability. But the finalisa-

---

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇದನ್ನು ಕಡತದಿಂದ ತೆಗೆದುಹಾಕಲಾಯಿತು.

tion of vacation of stay orders rests with the High Court. We can try our best once twice, thrice but the finalisation of hearing the matter and vacation of stay order is a matter which is entirely in the hands of the High Court. We can appeal to them. We can bring to their notice the urgency. the imperative necessity of disposal of these cases to meet social justice. But there are limitations which we cannot overcome. This is what I am trying to say, ಆಮೇಲೆ ಜನ ಅಂದುಕೊಳ್ಳುತ್ತಾರೆ ಎಂದು ಹೇಳುತ್ತಾರೆ, ಅದೆಲ್ಲಾ ಜಾಸ್ತಿ ಹೇಳುವುದು ಚೆನ್ನಾಗಿ ಕಾಣಿಸುವುದಿಲ್ಲ. ಆದ್ದರಿಂದ ಇದು ಸಾಮಾನ್ಯವಾಗಿ ಎಲ್ಲರೂ ತಡೆಯಾಗುತ್ತದೆ ಎನ್ನುವ ಬಗ್ಗೆ ಹೇಳಿದ್ದಾರೆ. ಹೈಕೋರ್ಟಿನವರು ಈ ತಡೆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಬೇಗ ತೀರ್ಮಾನಮಾಡುತ್ತಾರೆ ಎಂದು ಹೇಳಿಬಿಟ್ಟು ನಾನು ಕೂಡಾ ಆಶಯವನ್ನು ವ್ಯಕ್ತಪಡಿಸುತ್ತೇನೆ. ಈ ರೆಕ್ರೂಟ್‌ಮೆಂಟ್ ಬಗ್ಗೆ ಆಗಲೇ ಉತ್ತರ ಹೇಳಿದ್ದೇನೆ ಅವರಿಗೇ ಅಧಿಕಾರವನ್ನು ಕೊಟ್ಟಿರುವುದರಿಂದ ಅವರನ್ನು ಕನ್‌ಸಲ್ಟ್ ಮಾಡಬೇಕಾಗುತ್ತದೆ. I agree with you. We will try, ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತ್ರ ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.— ಚರ್ಚೆ ಮುಕ್ತಾಯವಾಯಿತು, ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪವೇಂದರೆ.—

'' ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೦,೩೭ ಮತ್ತು ೩೮ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕು. ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಅಧ್ಯಕ್ಷರ ಅಪ್ಪಣೆ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೦ ರೇಷ್ಮೆ ವ್ಯವಸಾಯ

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೩,೨೯,೯೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೭೧,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ ೩೭ ರಾಜ್ಯ ವಿಧಾನಸಭೆ

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಸಭೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೨೦,೬೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ ೩೮ ನ್ಯಾಯ ಪರಿಪಾಲನೆ

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆ ಸಂದಾಯ ಮಾಡುವಲ್ಲಿ ೨೬,೯೭,೪೧,೦೦೦ರೂ.

ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಧ್ಯಕ್ಷರು.—ಈಗ ಮೀನುಗಾರಿಕೆ ಮತ್ತು ಜಲ ಸಾರಿಗೆ ಸೇವೆ ಮಂತ್ರಿಗಳಿಂದ ಉತ್ತರ.

† ಶ್ರೀ ಎಂ. ರಘುಪತಿ (ಮೀನುಗಾರಿಕೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮೀನುಗಾರಿಕೆ ಇಲಾಖೆಯ ಮೇಲೆ ಶ್ರೀಮಾನ್ ವೀರಪ್ಪ ಮೊಯಿಲಿಯವರು, ಶ್ರೀಮಾನ್ ಬಸವರಾಜುರವರು ಮತ್ತು ಶ್ರೀಮಾನ್ ಇದಿನಬ್ಬನವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೨೫೦ ಕಿಲೋಮೀಟರ್ ಉದ್ದದಷ್ಟು ಕರಾವಳಿ ಇದೆ. ಆ ಕರಾವಳಿಯಲ್ಲಿ ಮೀನು ಉತ್ಪಾದನೆ ಏನು ಇದೆ, ಆ ಉತ್ಪಾದನೆ ದಿನೇ ದಿನೇ ಕಡಿಮೆಯಾಗುತ್ತಿದೆ ಕಡಿಮೆಯಾಗುತ್ತಿದೆ ಎನ್ನುವುದು ನಿರ್ವಿವಾದ, ಏಕೆಂದರೆ ೮೪–೮೫ರಲ್ಲಿ ಮೂರು ಲಕ್ಷ ಟನ್‌ನಷ್ಟು ಉತ್ಪಾದನೆ ಆದರೆ ೮೫–೮೬ರಲ್ಲಿ ಎರಡು ಲಕ್ಷ ಟನ್‌ನಷ್ಟು ಉತ್ಪಾದನೆಯಾಗಿದೆ, ೮೬–೮೭ರಲ್ಲಿ ಒಂದೂವರೆ ಲಕ್ಷ ಟನ್‌ನಷ್ಟು ಉತ್ಪಾದನೆಯಾಗಿದೆ.

೩-೩೦ ಪಿ.ಎಂ.

ಇದಕ್ಕೆ ಕಾರಣಗಳು ಹಲವಾರು ಇವೆ. ಹಲವಾರು ಕಾರಣಗಳನ್ನು ನಾವು ಗುರುತು ಹಿಡಿಯಬೇಕು. ಇದಕ್ಕಾಗಿ ತಜ್ಞರ ಸಮಿತಿಯನ್ನು ನೇಮಕ ಮಾಡಿದೆವು. ತಜ್ಞರ ಸಮಿತಿಯಿಂದ ವರದಿ ಬರಬೇಕಾಗಿದೆ, ಮೀನುಗಾರಿಕೆ ಕಾಲೇಜಿನ ನಿರ್ದೇಶಕರ ನೇತೃತ್ವದಲ್ಲಿ ಶ್ರೀಮಾನ್ ಶೆಟ್ಟರ್‌ರವರ ನೇತೃತ್ವ ಮಾಡಿದ್ದೇವೆ. ಇಂತಹ ಸಮಿತಿ ಕೇವಲ ಕೆಲವೇ ದಿನಗಳಲ್ಲಿ ವರದಿಯನ್ನು ಕೊಡುತ್ತಾರೆ. ಅವರು ವರದಿಯನ್ನು ಕೊಟ್ಟ ಮೇಲೆ ಅವರು ಏನೇನು ಶಾಶ್ವತವಾದ ಪರಿಹಾರಕ್ಕಾಗಿ ಸಲಹೆಗಳನ್ನು ಕೊಡುತ್ತಾರೆ ಆ ಸಲಹೆಗಳ ಬಗ್ಗೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಮೊಯಿಲಿ ಅವರು ಒಂದು ಮಾತನ್ನು ಹೇಳಿದರು. ಪರ್ಸಿನ್ ಬೋಟ್ಸ್ ಮತ್ತು ಟ್ರಾಲರ್ಸ್ ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು. ಆದರೆ ಕೃಷಿ ವಿಜ್ಞಾನದ ನಮ್ಮ ಮೀನುಗಾರಿಕೆ ಕಾಲೇಜಿನಲ್ಲಿ ನಡೆದ ಒಂದು ಸಮ್ಮೇಳನದಲ್ಲಿ ಅಲ್ಲಿನ ತಜ್ಞರ ಅಭಿಪ್ರಾಯದ ಪ್ರಕಾರ, ವರದಿ ನನ್ನ ಕೈಯಲ್ಲಿದೆ. ಇನ್ನು ೧೦ ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ಪರ್ಸಿನ್ ಬೋಟ್ಸ್ ಅನ್ನು ಯಾವ ಕಾರಣಕ್ಕೂ ಅಲ್ಲಿಗೇ ನಿಲ್ಲಿಸಬೇಕು, ಅದು ಜಾಸ್ತಿ ಮಾಡಿದಷ್ಟು ಮೀನು ಉತ್ಪಾದನೆ ಕಡಿಮೆ ಆಗುತ್ತದೆ, ಇದರಿಂದ ಮೀನುಗಾರರಿಗೆ ತೊಂದರೆ ಆಗುತ್ತದೆ ಎನ್ನುವ ಒಂದು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯ ಆಧಾರದ ಮೇಲೆ ಬ್ಯಾಂಕ್‌ನವರೂ ಹಣವನ್ನು ಕೊಡುತ್ತಿಲ್ಲ. ಬ್ಯಾಂಕ್‌ನವರು ಹಣವನ್ನು ಕೊಡದೇ ಇರುವುದಕ್ಕೆ ಇನ್ನೂ ಒಂದು ಕಾರಣ ತಮಗೆ ಹೇಳಬೇಕಾದರೆ ಬ್ಯಾಂಕ್‌ನಿಂದ ಸಾಲವನ್ನು ಪಡೆದಿದ್ದ ವ್ಯಕ್ತಿಗಳು ಅದನ್ನು ಮರುಪಾವತಿ ಮಾಡಿಲ್ಲ. ಶ್ರೀಮತಿ ಮನೋರಮಾ ಮಧ್ವರಾಜ್‌ರವರಿಗೆ ಈ ವಿಚಾರ ಸಂಪೂರ್ಣವಾಗಿ ಗೊತ್ತಿದೆ, ಫೀಸಿಬಿಲಿಟಿ ಸರ್ಟಿಫಿಕೇಟ್ ಕೊಡುವಾಗ ಅದನ್ನು ಸರಳ ರೀತಿಯಲ್ಲಿ ಕೊಡಬೇಕು ಎಂಬ ಆದೇಶವನ್ನು ಕೊಟ್ಟಿದ್ದೇವೆ ಮತ್ತು ಅದನ್ನು ಕೊಡುವುದರಲ್ಲಿ ಯಾವ ರೀತಿಯ ತೊಂದರೆ ಕೊಡಬಾರದು ಎಂಬ ಆದೇಶವನ್ನೂ ಕೊಟ್ಟಿದ್ದೇವೆ. ಮತ್ತು ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಕಡಿಮೆ ನಾಡ ದೋಣಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗಿದೆ. ಯಾಕೆಂದರೆ ನಾಡ ದೋಣಿಗಳು ಹೆಚ್ಚು ಪ್ರೋತ್ಸಾಹ ಕೊಡದೇ ಇದ್ದರೆ ಅವರ ಜೀವನ ಕಷ್ಟವಾಗುತ್ತದೆ, ಅವರ ಜೀವನ ಹೆಚ್ಚು ಕಷ್ಟಕಾರ್ಪಣ್ಯದಿಂದ ಕೂಡಿರುತ್ತದೆ. ನಾಡ ದೋಣಿಗಳಿಂದ ಹೆಚ್ಚು ಮೀನುಗಳನ್ನು ಹಿಡಿಯಬಹುದು ಅವರಿಗೆ ಸರಿಯಾದ ಸೌಲಭ್ಯ ಇಲ್ಲವೆಂದು, ಯಾರಿಗೆ ಜೀವನ ನಡೆಸಲು ಕಷ್ಟವಾಗಿದೆ ಅಂಥವರಿಗೆ ಪ್ರತಿ ವರ್ಷ ೨೫ ನಾಡ ದೋಣಿಗಳಿಗೆ ಮೋಟಾರುಗಳನ್ನು ಹಾಕಿ ನಾವು ಕೊಡುತ್ತೇವೆ. ಮೋಟಾರು ಬೋಟುಗಳನ್ನು ಮಾಡಿ, ಈ ವರ್ಷ ೧೦೦ಕ್ಕೆ ಯಾಂತ್ರೀಕರಣ ಮಾಡಿ, ಮತ್ತೆ ಬೋಟುಗಳನ್ನು ಕೊಡಬೇಕೆಂದು ನಿರ್ಧಾರ ತೆಗೆದುಕೊಂಡಿದ್ದೇವೆ. ನೂರು ಬೋಟುಗಳನ್ನು ಯಾಂತ್ರೀಕರಣ ಮಾಡುವುದಕ್ಕೆ ನಾವು ಈಗಾಗಲೇ ಯೋಜನೆಯನ್ನು ತಯಾರು ಮಾಡಿದ್ದೇವೆ. ಅದರ ಪ್ರಕಾರ ಹಣವನ್ನು ಕೊಡುತ್ತಿದ್ದೇವೆ, ಶ್ರೀಮಾನ್ ಮೊಯಿಲಿಯವರು ಆಳವಾದ ಸಮುದ್ರದ ಬಗ್ಗೆ ಹೇಳುತ್ತಾ ಡೀಪ್‌ಫಿಷ್‌ಸೀ ವೆಸೆಲ್ಸ್‌ಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ, ನಾನು ಸದಸ್ಯರಿಗೆ ತಿಳಿಸುವುದೇನೆಂದರೆ ರಾಜ್ಯದ ಹಾಗೂ ರಾಷ್ಟ್ರದ ಕೃಷಿ ಅಭಿವೃದ್ಧಿ ಬ್ಯಾಂಕ್ ಮತ್ತು ಶಿಪಿಂಗ್ ಕ್ರೆಡಿಟ್ ಮತ್ತು ಇನ್‌ವೆಸ್ಟ್‌ಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ ಅವರಿಂದ ಹಣವನ್ನು ಪಡೆಯುವುದಕ್ಕೆ ಮತ್ತು

ಅವರಿಂದ ಸಂಪೂರ್ಣವಾದ ಫೈನಾನ್ಸ್ ಮಾಡುವುದಕ್ಕೆ ಯೋಜನೆಗಳನ್ನು ತಯಾರು ಮಾಡಿ ಸರ್ಕಾರ ೧೪ ಜನ ಉದ್ದಿಮೆದಾರರಿಗೆ ನಾವು ಫೀಸಿಬಿಲಿಟಿ ಸರ್ಟಿಫಿಕೇಟ್ ಅನ್ನು ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳಿಸಿದ್ದೇವೆ. ೧೪ ಜನರಿಗೆ ಸಿಕ್ಕಿದರೆ ಶ್ರೀಮಾನ್ ಮೊಯಿಲಿಯವರು ಹೇಳಿದ ಹಾಗೆ ನಾವು ಆಳವಾದ ಸಮುದ್ರ ನೀರಿನಲ್ಲಿ ಮೀನನ್ನು ಹಿಡಿಯುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ನಮ್ಮ ಮೀನುಗಾರರಿಗೆ ಹೆಚ್ಚು ಉತ್ಪನ್ನ ಉಂಟಾಗಿ, ಲಾಭ ಸಿಕ್ಕುತ್ತದೆ ಎನ್ನುವ ನಂಬಿಕೆ ನನಗೆ ಇದೆ.

(ಶ್ರೀ ಬ್ಲೇಸಿಯಸ್ ಎಮ್. ಡಿಸೋಜ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ಮತ್ತೆ ಫಿಷರೀಸ್ ಸರ್ವೇ ಆಫ್ ಇಂಡಿಯಾದವರು ಒಂದು ಕಾರ್ಯಕ್ರಮವನ್ನು ತಯಾರು ಮಾಡಿದ್ದಾರೆ. ಅದೇನೆಂದರೆ, ಭಾರತ ಮತ್ತು ಡೆನ್‌ಮಾರ್ಕ್ ಸಹಯೋಗದಲ್ಲಿ ೧೮ ೫ ಮೀಟರ್ ಉದ್ದದ ದೋಣಿಗಳನ್ನು ನಿರ್ಮಾಣ ಮಾಡುವುದಕ್ಕೆ ಅವರು ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯಕ್ಕೂ ಇಂತಹ ಒಂದು ದೋಣಿಯನ್ನು ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಆ ದೋಣಿ ನಮ್ಮ ರಾಜ್ಯಕ್ಕೆ ಬಂದರೆ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಮಾನ್ಯ ಮೊಯಿಲಿ ಅವರು ನಮ್ಮ ರಾಜ್ಯದಲ್ಲಿ ಮಧ್ಯಮವರ್ಗದ ವೆಸಲ್ಸ್ (ದೋಣಿ) ತಯಾರು ಮಾಡುವವರಿಗೂ ಸಹ ಪ್ರೋತ್ಸಾಹ ಕೊಡಬೇಕು ಎಂದು ಸಲಹೆ ಮಾಡಿದ್ದಾರೆ. ಈಗ ನಾವು ೧೪ ಜನರಿಗೆ ಏನು ಫೀಸಿಬಿಲಿಟಿ ಸರ್ಟಿಫಿಕೇಟ್ ಕೊಟ್ಟಿದ್ದೇವೆ, ಅವರು ಒಂದು ವರ್ಷದಲ್ಲಿ ಎಷ್ಟು ದೋಣಿಗಳನ್ನು ತಯಾರು ಮಾಡಲು ಸಾಧ್ಯವಿದೆ ಎಂಬುದನ್ನು ನಾನು ನೋಡಿಕೊಂಡು ಬಂದಿದ್ದೇನೆ. ಅವರ ಕಾರ್ಖಾನೆಯಲ್ಲಿ ವರ್ಷಕ್ಕೆ ಒಂದೆರಡು ಅಥವಾ ೨-೩ ದೋಣಿಗಳನ್ನು ಮಾತ್ರ ತಯಾರು ಮಾಡಬಹುದು. ನಾಲ್ಕೈದು ದೋಣಿಗಳನ್ನು ತಯಾರು ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲ, ಆದ್ದರಿಂದ ಅವರಿಗೂ ಸಹ ಒಂದರಡು ದೋಣಿಗಳನ್ನು ತಯಾರು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತೇನೆ.

ಇನ್ನು ಐಸ್ ಪ್ಲಾಂಟ್ ಬಗ್ಗೆ ಹೇಳಿದ್ದಾರೆ. ಈಗ ಕರಾವಳಿ ಪ್ರದೇಶಗಳ ಹತ್ತಿರ ಶೇಕಡಾ ೩೦ ರಷ್ಟು ಐಸ್ ಅನ್ನು ಮೀನುಗಾರಿಕೆಗೆ ಸಂಬಂಧಪಟ್ಟಂತೆ ಉಪಯೋಗಿಸುತ್ತಿದ್ದಾರೆ; ಇನ್ನುಳಿದ ಶೇಕಡಾ ೭೦ ರಷ್ಟು ಐಸ್ ಅನ್ನು ಬೇರೆ ಬೇರೆ ಪದಾರ್ಥಗಳನ್ನು ಸ್ಟೋರ್ ಮಾಡಲು ಉಪಯೋಗಿಸುತ್ತಿದ್ದಾರೆ. ಉತ್ತರಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸುಮಾರು ನಾಲ್ಕು ತಿಂಗಳ ಕಾಲ ಮೀನನ್ನು ಸ್ಟೋರ್ ಮಾಡುವುದಿಲ್ಲ. ವರ್ಷದಲ್ಲಿ ಮೂರು ತಿಂಗಳ ಕಾಲ ಮಾತ್ರ ಸ್ಟೋರ್ ಮಾಡುತ್ತಾರೆ. ಆಗ ಈ ಮಂಜುಗಡ್ಡೆ ಹೆಚ್ಚು ಬೇಕಾಗುತ್ತದೆ. ಈ ಮಂಜುಗಡ್ಡೆಯನ್ನು ತಯಾರು ಮಾಡುವಂತಹ ಕಾರ್ಖಾನೆಯೊಂದನ್ನು ನಮ್ಮ ನಿಗಮದ ವತಿಯಿಂದಲೇ ದಕ್ಷಿಣಕನ್ನಡ ಜಿಲ್ಲೆಯ ಸಿರೂರಿನಲ್ಲಿ ಸ್ಥಾಪಿಸಲಾಗಿದೆ. ಇನ್ನು ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ ಅದು ಕೆಲಸವನ್ನು ಪ್ರಾರಂಭ ಮಾಡುತ್ತದೆ. ಮತ್ತೆ ಉತ್ತರಕನ್ನಡ ಜಿಲ್ಲೆಯಲ್ಲೂ ಸಹ ನಮ್ಮ ನಾಯಕ್ ಅವರ ಕ್ಷೇತ್ರವಾದ ಭಟ್ಕಳದಲ್ಲಿ ಮತ್ತೊಂದು ಇಂತಹ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಮೀನುಗಾರರಿಗೆ ಎಲ್ಲ ರೀತಿಯಿಂದ ಸಹಾಯ ಮಾಡಬೇಕೆಂಬುದೇ ನಮ್ಮ ಉದ್ದೇಶವಾಗಿದೆ.

ಇನ್ನು ಡೀಜಲ್ ಸಬ್ಸಿಡಿ ಬಗ್ಗೆ ಹೇಳಿದ್ದಾರೆ. ಈ ಡೀಜಲ್ ಸಬ್ಸಿಡಿಯನ್ನು ಬಹಳ ಉದಾರ ಮನೋಭಾವದಿಂದ ನಾವು ಕೊಟ್ಟಿದ್ದೇವೆ. ಇದನ್ನು ಕೊಡಲು ಈಗಿರುವಂತಹ ನಿಯಮಗಳನ್ನು ಸಡಿಲಗೊಳಿಸಬೇಕೆಂದು ಶ್ರೀಮತಿ ಮನೋರಮಾ ಮಧ್ವರಾಜ್ ಅವರು ಮಾಡಿದ ಸಲಹೆಯನ್ನೂ ಸಹ ನಾವು ಒಪ್ಪಿಕೊಂಡು, ನಿಯಮಗಳನ್ನು ಸಡಿಲಗೊಳಿಸಿ ಕೊಟ್ಟಿದ್ದೇವೆ. ಬಡ ಮೀನುಗಾರರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ನಿಯಮಗಳನ್ನು ಸಡಿಲಗೊಳಿಸಿದ್ದೇವೆ. ಯಾರು ನಮ್ಮ ಫೆಡರೇಷನ್ ಮತ್ತು ನಮ್ಮ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮೂಲಕ ವ್ಯವಹಾರ ಮಾಡುತ್ತಿಲ್ಲವೋ ಅಂತಹವರಿಗೆ ಮಾತ್ರ ಈ ಡೀಜಲ್ ಸಬ್ಸಿಡಿ ಸಿಗುತ್ತಿಲ್ಲ. ಈ ಡೀಜಲ್ ಸಬ್ಸಿಡಿ ಕೊಡಬೇಕಾದರೆ ಈ ಎರಡು ಸಂಸ್ಥೆಗಳ ಮೂಲಕವೇ ತಮ್ಮ ವ್ಯಾಪಾರ ಮತ್ತು ವ್ಯವಹಾರವನ್ನು ಮಾಡಬೇಕೆಂದು ನಾವು ಷರತ್ತನ್ನು ಹಾಕಿದ್ದೇವೆ. ಏಕೆಂದರೆ. ಈ ಸಂಸ್ಥೆಗಳೂ ಸಹ ಲಾಭದಾಯಕವಾಗಿ ಕೆಲಸ ಮಾಡಬೇಕಾಗುತ್ತದೆ. ಮತ್ತು ಅವು ಉಳಿದುಕೊಳ್ಳಬೇಕಾಗಿದೆ. ಈಗ ಎಲ್ಲರೂ ಇವುಗಳ ಮೂಲಕವೇ ತಮ್ಮ ವ್ಯವಹಾರಗಳನ್ನು ಮಾಡುತ್ತಿರುವುದರಿಂದ ಈ ಸಂಸ್ಥೆಗಳು ಲಾಭ ಮಾಡುತ್ತಿವೆ. ಮತ್ತೆ

ಡೀಜಲ್ ಸಬ್ಸಿಡಿಗೆಂದು ಎಷ್ಟು ಹಣ ಪಾವತಿ ಮಾಡಲಾಗಿದೆ ಎಂದು ಕೇಳಿದ್ದಾರೆ. ಅದರ ವಿವರ ಈ ರೀತಿ ಇದೆ, ೧೯೮೫–೮೬ರಲ್ಲಿ ೩೯ ಲಕ್ಷ ರೂಪಾಯಿಗಳನ್ನು, ೧೯೮೬–೮೭ರಲ್ಲಿ ೧೬ ಲಕ್ಷ ರೂಪಾಯಿಗಳನ್ನು, ೧೯೮೭–೮೮ರಲ್ಲಿ ೪೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಮೊದಲು ಇದ್ದಂಥ ಕೆಲವು ಷರತ್ತುಗಳನ್ನು ತೆಗೆದುಹಾಕಿದ್ದರಿಂದ ೧೯೮೭–೮೮ರಲ್ಲಿ ೪೪ ಲಕ್ಷ ರೂಪಾಯಿಗಳನ್ನು ಕೊಡಲು ಸಾಧ್ಯವಾಯಿತು. ಉತ್ತಮ ರೀತಿಯಲ್ಲಿ ಮೀನುಗಾರರು ಅದನ್ನು ಮೆಚ್ಚಿಕೊಂಡಿದ್ದಾರೆ. ನಾನು ಮೀನುಗಾರರ ಪ್ರತಿನಿಧಿಗಳನ್ನು ಭೇಟಿಯಾದಾಗ ಅವರೆಲ್ಲರೂ ಮೆಚ್ಚುಗೆ ಸೂಚಿಸಿದ್ದಾರೆ. ಏಕೆಂದರೆ, ಈ ವರ್ಷ ಅಷ್ಟು ತೊಂದರೆಯಾಗಲಿಲ್ಲ ಎಂದು ಅವರೇ ಹೇಳಿದ್ದಾರೆ, ಮತ್ತೆ ಈಗ ಮೀನುಗಾರಿಕೆಯಲ್ಲಿ ಮೀನು ಉತ್ಪಾದನೆ ಕಡಿಮೆಯಾಗಿದೆ ಎಂದು ಹೇಳಿದೆ, ಆದರೆ ಹಣ ಬಳಕೆಯಲ್ಲಿ ಕಡಿಮೆಯಾಗಿಲ್ಲ. ೧೯೮೫–೮೬ರಲ್ಲಿ ೨ ಲಕ್ಷ ಟನ್ ಉತ್ಪಾದನೆಯಾದರೆ ೫ ಕೋಟಿ ರೂಪಾಯಿಯಷ್ಟು ಹಣ ಸಂಪಾದನೆಯಾಗಿದೆ. ೧೯೮೬–೮೭ರಲ್ಲಿ ೪ ಕೋಟಿಯಷ್ಟು ಹಣ ಸಂಪಾದನೆಯಾಗಿದೆ. ೧೯೮೭–೮೮ರಲ್ಲಿ ಸುಮಾರು ೪.೮ ಕೋಟಿಯಷ್ಟು ಉತ್ಪಾದನೆಯಾಗಿದೆ. ಆದುದರಿಂದ ಅವರಿಗೆ ಉತ್ಪನ್ನ ಕಡಿಮೆಯಾದರೂ ಮಾರ್ಕೆಟ್‌ದರ ಕಡಿಮೆಯಾಗಲಿಲ್ಲ, ಅವರಿಗೆ ಎಷ್ಟು ಹಣ ಸಿಗಬೇಕಾಗಿತ್ತೋ ಅಷ್ಟು ಹಣ ಸಿಕ್ಕಿದೆ. ಆದರೆ ಮೀನು ಮಾರ್ಕೆಟ್‌ಗಳನ್ನು ಕಟ್ಟುವುದಕ್ಕೆ ನೀವು ಉತ್ತೇಜನ ಕೊಡಬೇಕು ಎಂದು ಹೇಳಿದ್ದಾರೆ. ಹೊಸ ಕಾರ್ಯಕ್ರಮ ಜಾರಿಗೆ ತರುತ್ತಾ ಇದ್ದೇವೆ. ಹೊಸ ಕಾರ್ಯಕ್ರಮ ಏನೆಂದರೆ ಇನ್ನು ಮುಂದೆ ಮುನಿಸಿಪಾಲಿಟಿಗಳಾಗಲಿ, ಮಂಡಲ ಪಂಚಾಯಿತಿಗಳಾಗಲಿ, ಅವರು ಮುಂದೆ ಬಂದರೆ ೫೦ ಭಾಗದಷ್ಟು ಹಣವನ್ನು ನಾವು ಕೊಡುತ್ತೇವೆ. ಅಂಥಾದ್ದಕ್ಕೆ ೪೦ ಮೀನು ಮಾರ್ಕೆಟ್‌ಗಳನ್ನು ಈ ಸಾರಿ ಕಟ್ಟುವುದಕ್ಕೆ ಹಣ ಒದಗಿಸಿ ಇಟ್ಟಿದ್ದೇವೆ. ತಾವು ಹೇಳಿದಹಾಗೆ ಮಾರ್ಕೆಟ್ ವ್ಯವಸ್ಥೆ ಚೆನ್ನಾಗಿರಬೇಕು. ಮಾರ್ಕೆಟ್ ವ್ಯವಸ್ಥೆ ಇದ್ದರೆ ಲಾಭದಾಯಕವಾಗಿ ನಡೆಯುವುದಕ್ಕೆ ಸಾಧ್ಯ. ಏಕೆಂದರೆ, ಸಣ್ಣ ಸಣ್ಣ ಮೀನುಗಾರರು ಏನಿದ್ದಾರೆ ಅವರು ಬದುಕಬೇಕಾದರೆ ಮಾರ್ಕೆಟ್ ವ್ಯವಸ್ಥೆ ಚೆನ್ನಾಗಿರಬೇಕು. ಅದಕ್ಕೋಸ್ಕರ ಸಣ್ಣವರು ಏನಿದ್ದಾರೆ ಅವರಿಗೆ ಸಹಾಯ ಆಗಬೇಕು ಎಂದು ಈ ಮಾರ್ಕೆಟ್‌ಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ, ಮತ್ತೆ ಡ್ರೆಡ್ಜಿಂಗ್ ವಿಷಯದಲ್ಲಿ ಶ್ರೀಮಾನ್ ಮೊಯಿಲಿಯವರು, ಇದಿನಬ್ಬರವರು ಮತ್ತು ಬಸವರಾಜ್‌ರವರು ಹೇಳಿದ್ದಾರೆ. ತಾವು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತಾ, ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಕಡಿಮೆ ನಾವು ಎಷ್ಟು ಡ್ರೆಡ್ಜ್ ಮಾಡಬೇಕು ಅಂದರೆ ಪ್ರತಿವರ್ಷ ಸುಮಾರು ೧೦.೫೫ ಲಕ್ಷ ಸೆಂಟಿಮೀಟರ್ಸ್‌ನಷ್ಟು ಹೂಳನ್ನು ತೆಗೆಯಬೇಕಾಗುತ್ತದೆ. ಅಷ್ಟು ಹೂಳು ಶೇಖರಣೆಯಾಗುತ್ತದೆ. ಅಷ್ಟು ಹೂಳನ್ನು ತೆಗೆಯಬೇಕಾದರೆ ಪ್ರೈವೇಟ್‌ನವರಿಂದ ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ಅಧಿಕಾರ ವಹಿಸಿಕೊಂಡ ಮೇಲೆ ಹಲವಾರು ಬಾರಿ ಕೇಂದ್ರ ಸರ್ಕಾರವನ್ನು ಸಂಪರ್ಕಮಾಡಿ, ಕೇಂದ್ರಸರ್ಕಾರದ ಮಂತ್ರಿಗಳು ಜೊತೆಯಲ್ಲಿ ವಾದ ಮಾಡಿದ್ದೇನೆ. ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಇಷ್ಟು ದಿನ ಒಪ್ಪಿರಲಿಲ್ಲ, ಅವರು ಟೈ ಅಫ್ ಮಾಡಿಕೊಳ್ಳುವುದಕ್ಕೂ ಇಲ್ಲ, ಅವರು ಮಿಷಿನ್‌ಗಳನ್ನು ತಂದು ಡ್ರೆಡ್ಜಿಂಗ್ ಮಾಡುವುದಕ್ಕೂ ಒಪ್ಪಿರಲಿಲ್ಲ. ಈಗ ಹೊಸ ಅಧ್ಯಕ್ಷರು ಬಂದಮೇಲೆ ಒಪ್ಪಿಕೊಂಡಿದ್ದಾರೆ. ನಮಗೋಸ್ಕರ ಒಂದು ಡ್ರೆಡ್ಜಿಂಗ್ ಮಿಷಿನನ್ನು ಖರೀದಿ ಮಾಡಿ ಕರ್ನಾಟಕ ರಾಜ್ಯದಲ್ಲಿ ಹೂಳೆತ್ತುವ ಕಾರ್ಯಕ್ರಮಕ್ಕೋಸ್ಕರವೇ ಉಪಯೋಗಿಸಬೇಕು ಎಂದು ಅವರು ಒಂದು ನಿರ್ಣಯಕ್ಕೆ ಬಂದಿದ್ದಾರೆ. ಅವರ ಜೊತೆಯಲ್ಲಿ ನಾವು ಒಪ್ಪಂದ ಮಾಡಿಕೊಂಡು ಇನ್ನು ಮುಂದಕ್ಕೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಬಂದರುಗಳಲ್ಲಿ ಹೂಳೆತ್ತುವ ಕಾರ್ಯಕ್ರಮವನ್ನು ಅವರಿಗೆ ವಹಿಸಿಕೊಡುತ್ತೇವೆ. ಅದು ಮಲ್ಪೆಯಾಗಲಿ ಅಥವಾ ಹಳೆಯ ಮಂಗಳೂರು ಬಂದರಾಗಲಿ ಇಲ್ಲವೇ ಕಾರವಾರ ಜಿಲ್ಲೆಯಲ್ಲಿರುವ ಹಲವಾರು ಕಡೆಗಳಲ್ಲಾಗಲಿ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಪೋರ್ಟ್‌ಗಳು ಇವೆಯೋ ಅಷ್ಟು ಪೋರ್ಟ್‌ಗಳಲ್ಲೂ ಹೂಳೆತ್ತುವ ಕಾರ್ಯಕ್ರಮವನ್ನು ಡ್ರೆಡ್ಜಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ವಹಿಸಿಕೊಡುತ್ತಾ ಇದ್ದೇವೆ ಎಂದೇ ಹೇಳುತ್ತೇನೆ. ಮಾನ್ಯ ಮೊಯ್ಲಿಯವರು ಹಲವಾರು ಸಲಹೆಗಳನ್ನು ಕೊಟ್ಟರು. ಅದರಲ್ಲಿ ಈಗ ಮಂಗಳೂರು ಪೋರ್ಟ್ ಡೆವಲಪ್‌ಮೆಂಟ್ ಬಗ್ಗೆ ತಮಗೆ ಮಾಹಿತಿಯನ್ನು ನೀಡಬೇಕಾಗಿದ್ದರೆ ಈ ವರ್ಷದಲ್ಲಿ ೭ನೇ ಪ್ಲಾನ್‌ನಲ್ಲಿ ಹನ್ನೆರಡೂವರೆ ಕೋಟಿ ರೂಪಾಯಿಯಷ್ಟು ಹಣವನ್ನು ವೆಚ್ಚಮಾಡಬೇಕು, ನಾವು ಮಂಜೂರಾತಿಯನ್ನು ಆಗಲೇ ಪಡೆದಿದ್ದೇವೆ ಅದು ಯಾವುಯಾವುದಕ್ಕೆ ಅಂದರೆ, Construciion of 252 Metres long Wharf ಇದಕ್ಕೆ ೩ ಕೋಟಿ ೪೦ ಲಕ್ಷ ರೂಪಾಯಿ Construction of Wharf of 200 metres ಅದಕ್ಕೆ ೬೦ ಲಕ್ಷ

Dredging in channels at Berth 4.5 meters ಅದಕ್ಕೆ ೮ ಕೋಟಿ ರೂಪಾಯಿ Shore protection to Gurpur and Netrrvathi rivers ೫ ಕೋಟಿ ರೂಪಾಯಿ Purchase to crane and survery launch, and others materials ಅದಕ್ಕೆ ಎರಡೂವರೆ ಕೋಟಿ ರೂಪಾಯಿ Transit shed ಗೆ ೨೦ ಲಕ್ಷ ರೂಪಾಯಿ, ಸ್ಟಾಫ್ ಕ್ವಾರ್ಟರ್ಸ್‌ಗೆ ೭೫ ಲಕ್ಷ ರೂಪಾಯಿ. ಬೇರೆ ಐಟಮ್ಸ್‌ಗೆ ೬೫ ಲಕ್ಷ ರೂಪಾಯಿ. ಈ ರೀತಿ ಹನ್ನೆರಡೂವರೆ ಕೋಟಿ ರೂಪಾಯಿಯಷ್ಟಾಗಿದೆ.

ಈ ಬಂದರಿಗೆ ಸಂಬಂಧಪಟ್ಟಂತೆ ಒಂದು ಪ್ರಿಲಿಮಿನರಿ ಇನ್‌ವೆಸ್ಟಿಗೇಷನ್‌ನ್ನು ಮಾಡುವ ಸಲುವಾಗಿ ಮೆಸರ್ಸ್ ರೈ, ಕನ್ಸಲ್ಟೆಂಟ್ ಕಂಪನಿಗೆ ನಾವು ಕೊಟ್ಟಿದ್ದೇವೆ. ಏಕೆಂದರೆ ಈ ಕಂಪನಿಯವರು ಎಕ್ಸ್‌ಪರ್ಟ್ಸ್ ಎಂದು ಇಡೀ ಭಾರತ ದೇಶದಲ್ಲೇ ಮಾನ್ಯತೆಯನ್ನು ಪಡೆದಿದ್ದಾರೆ. ಡ್ರೆಡ್ಜಿಂಗ್ ಕಾರ್ಪೊರೇಷನ್‌ನವರ ಸಲಹೆಯನ್ನು ಪಡೆದು ಅವರಿಗೆ ನಾವು ವಹಿಸಿಕೊಟ್ಟಿದ್ದೇವೆ. ಇವರು ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರಿಸಿ ಕೊಡಬೇಕು. ಏಕೆಂದರೆ ನೇತ್ರಾವತಿ ನದಿ ಇಲ್ಲಿ ಬಂದು ಸೇರುವುದರಿಂದ ಇಲ್ಲಿ ನಾವು ಒಂದು ವಾಲ್ಸ್‌ನ್ನು ಕಟ್ಟದಿದ್ದರೆ ಅದರಿಂದ ನಮಗೆ ಯಾವುದೇ ಲಾಭವೂ ಆಗುವುದಿಲ್ಲವೆಂದು ಹೇಳಿದ್ದರಿಂದ, ಈ ಒಂದು ಅಭಿಪ್ರಾಯ ಬಂದಿರುವುದರಿಂದ ಇದನ್ನು ನಾವು ತಜ್ಞರ ಸಮಿತಿಗೆ ವಹಿಸಿದ್ದೇವೆ. ೭ನೇ ಯೋಜನೆಯಲ್ಲಿ ಈ ಕಾರ್ಯಕ್ರಮವನ್ನು ಮಾಡಬಹುದೆಂಬ ಸಂಪೂರ್ಣ ನಂಬಿಕೆ ನಮಗಿದೆಯೆಂದು ಹೇಳಬಯಸುತ್ತೇನೆ. ಮಲ್ಪೆ ಬಂದರನ್ನು ನಾವು ಸಂಪೂರ್ಣವಾಗಿ ಅಭಿವೃದ್ಧಿಪಡಿಸಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಇದರ ಎಲ್ಲ ಮಹಿವಾಟುಗಳನ್ನೂ ಅಂದರೆ ಹಡಗುಗಳು ಬಂದು ನಿಲ್ಲತಕ್ಕ ಒಂದು ಸೆಕೆಂಡ್ ಫೇಸ್‌ನ್ನು ತೆಗೆದುಕೊಳ್ಳಬೇಕೆಂದು ನಾವು ಒಂದು ಯೋಜನೆಯನ್ನು ತಯಾರಿಸಿ ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಕೇಂದ್ರಸರ್ಕಾರದ ಅನುಮತಿ ಸಿಕ್ಕುತ್ತದೆಂದು ನಮಗೆ ಸಂಪೂರ್ಣವಾದ ನಂಬಿಕೆ ಇದೆ. ಏಕೆಂದರೆ ನಾನು ಇದಕ್ಕೆ ಸಂಬಂಧಪಟ್ಟ ಕೇಂದ್ರದ ಮಂತ್ರಿಗಳ ಜೊತೆ ಚರ್ಚೆಮಾಡಿದ್ದೇನೆ. ಅವರೂ ಕೂಡ ಇದನ್ನು ಮಾಡಿಸಿಕೊಡುತ್ತೇನೆಂದು ಭರವಸೆಯನ್ನು ಕೊಟ್ಟಿದ್ದಾರೆ. ಇದು ಆದರೆ ಮಲ್ಪೆ ಬಂದರು ಒಂದು ಉತ್ತಮವಾದ ಬಂದರಾಗಿ ಪರಿವರ್ತನೆ ಆಗುವುದಕ್ಕೆ ಅವಕಾಶವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಕಾರವಾರ ಬಂದರು ಏನಿದೆ ಇದರಲ್ಲಿ ನಮ್ಮ ಕೆಲಸ ಸಂಪೂರ್ಣವಾಗಿ ಮುಗಿದಿದೆ. ಕಟ್ಟಡದ ಕೆಲಸವೆಲ್ಲಾ ಮುಗಿದಿದೆ. ಇವತ್ತು ಅಲ್ಲಿ ಸುಮಾರು ೬೦೦–೭೦೦ ಮೆಗಾ ಟನ್‌ನಷ್ಟು ಕೆಪಾಸಿಟಿಯ ಲೋಡಿಂಗ್ ಮತ್ತು ಅನ್‌ಲೋಡಿಂಗ್ ವ್ಯವಸ್ಥೆಗೆ ಅವಕಾಶವಿದೆ. ಅಲ್ಲಿ ೨ ಹಡಗುಗಳು ಬಂದು ನಿಲ್ಲುವುದಕ್ಕೆ ಅವಕಾಶವಿರತಕ್ಕ ಉತ್ತಮ ಬಂದರಾಗಿದೆ, ಕಾರವಾರ ಬಂದರಿನ ಬಗ್ಗೆ ಹೇಳುವುದಾದರೆ ಜನರಲ್ ಕಾರ್ಗೊ ಬರ್ತ್ಸ್ ೨ ಸ್ಟೀಮರ್ಸ್ ಬಂದು ನಿಲ್ಲುವುದಕ್ಕೆ ಅವಕಾಶವಿದೆ. ೪.೬ ಕೋಟಿ ರೂಪಾಯಿ ಖರ್ಚುಮಾಡಿ ೨ ಅಡಿಷನಲ್ ಬರ್ತ್ಸ್ ಕಟ್ಟಿಸುವುದಕ್ಕೆ ನಾವು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ೭ನೇ ಯೋಜನೆಯಲ್ಲಿ ಇದು ಆಗುತ್ತದೆಂದು ಸಂಪೂರ್ಣವಾದ ನಂಬಿಕೆ ನಮಗಿದೆ. ಕಾರವಾರ ಬಂದರಿನಲ್ಲಿ ಕಸ್ಟಂಸ್‌ನವರು ನಮಗೆ ಕೇವಲ ೪ ಪದಾರ್ಥಗಳನ್ನು ಆಮದುಮಾಡಿಕೊಳ್ಳುವುದಕ್ಕೆ ಮತ್ತು ಹೊರಗಡೆಗೆ ರಫ್ತು ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಇದನ್ನು ಬಿಟ್ಟು ಇನ್ನೂ ೮ ಪದಾರ್ಥಗಳನ್ನು ರಫ್ತು ಮತ್ತು ಆಮದು ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ನಾವು ಅವರನ್ನು ಕೇಳಿದ್ದೇವೆ. ಇದಕ್ಕೆ ಅವರು ಒಪ್ಪುತ್ತಾರೆಂಬ ನಂಬಿಕೆ ನನಗಿದೆ ಅವರು ಇದಕ್ಕೆ ಒಪ್ಪಿದರೆ ನಮಗೆ ಲಾಭದಾಯಕವಾಗುತ್ತದೆ ಎಂದು ಹೇಳಬಯಸುತ್ತೇನೆ. ಮಾನ್ಯ ಬಸವರಾಜುರವರು ಹೇಳಿದಂತೆ ಅಂಗಾರಕಟ್ಟೆ, ಸಸಿಹಿತ್ಲು, ಮಲ್ಕಿ, ಭಟ್ಕಳ, ಕುಮಟ, ಬೆಳ್ಳೇರಿ, ಶೀಡಿ, ಮುಂತಾದ ಸ್ಥಳಗಳಲ್ಲಿ ಸಣ್ಣಸಣ್ಣ ಬಂದರುಗಳನ್ನು ನಿರ್ಮಿಸುವುದಕ್ಕೆ ನಾವು ಕೇಂದ್ರಸರ್ಕಾರಕ್ಕೆ ಒಂದು ನಕ್ಷೆಯನ್ನು ಕಳುಹಿಸಿ ಅನುಮತಿಯನ್ನು ಕೇಳಿಕೊಂಡಿದ್ದೇವೆ. ಸೆಂಟ್ರಲ್ ಪೋರ್ಟ್ ಆ್ಯಕ್ಟ್ ಪ್ರಕಾರ ನಕ್ಷೆಯನ್ನು ನಾವು ಕೇಂದ್ರಸರ್ಕಾರಕ್ಕೆ ಕಳುಹಿಸಬೇಕಾಗುತ್ತದೆ. ಅದರಂತೆ ನಾವು ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಅನುಮತಿ ಸಿಕ್ಕುತ್ತದೆಂದು ನಮಗೆ ನಂಬಿಕೆ ಇದೆ.

ಇನ್ನು ಮಾನ್ಯ ಮೊಯ್ಲಿಯವರು ಬಹಳ ಉತ್ತಮ ಸಲಹೆಯನ್ನು ಕೊಟ್ಟರು ಅದೇನೆಂದರೆ ನಮ್ಮ ಬಂದರುಗಳ ಮುಖಾಂತರ ಜಲಸಾರಿಗೆ ವ್ಯವಸ್ಥೆಯನ್ನು ಮಾಡಬೇಕೆಂದು ಇದಕ್ಕೆ ನಾವು ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡುತ್ತೇವೆ. ೩ ತಿಂಗಳೊಳಗೆ ಸರ್ಕಾರಕ್ಕೆ ಒಂದು ವರದಿಯನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರ ಫೀಸಿಬಿಲಿಟೀಸ್ ಮತ್ತು ಎಷ್ಟು ಉದ್ದದ ಜಲ-

ಸಾರಿಗೆ ಇರಬೇಕು ಎಂಬುದಕ್ಕೆ ಯಾರನ್ನು ಇದಕ್ಕೆ ನೇಮಕ ಮಾಡಬೇಕೆಂದು ನಾವು ಈಗಾಗಲೇ ಯೋಚನೆ ಮಾಡಿಕೊಂಡಿದ್ದೇವೆ. ಬಹಳ ಪ್ರಮುಖವಾದ ವ್ಯಕ್ತಿಯನ್ನು ನೇಮಕ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೋ-ಆಪರೇಟೀವ್ ಸೊಸೈಟಿಗಳು ಎಷ್ಟಿವೆ ಎಂದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು ೭೬ ಲಾಭದಾಯಕದಲ್ಲಿ ನಡೆಯುತ್ತಿವೆ ಇದರಲ್ಲಿ ಒಳನಾಡಿನಲ್ಲಿ ೩೨, ಕರಾವಳಿಯಲ್ಲಿ ೪೪ ಇವೆ. ಇದರಲ್ಲಿ ನಷ್ಟದಲ್ಲಿ ನಡೆಯುತ್ತಿರುವುದು ಒಳನಾಡಿನಲ್ಲಿ ೯೫, ಕರಾವಳಿಯಲ್ಲಿ ೨೫, ಮತ್ತೆ ಲಾಭ ನಷ್ಟದಲ್ಲಿ ನಡೆಯುತ್ತಿರುವುದು ಒಳನಾಡಿನಲ್ಲಿ ೧೩, ಕರಾವಳಿಯಲ್ಲಿ ಒಂದೇ ಒಂದು. ನಶಿಸಿಹೋಗಿರುವುದು ಸುಮಾರು ೧೮ರಲ್ಲಿ ಒಳನಾಡಿನಲ್ಲಿ ೯, ಕರಾವಳಿಯಲ್ಲಿ ೯ ಹೀಗೆ ಒಟ್ಟು ೨೯ ಸಹಕಾರಿ ಸಂಘಗಳಲ್ಲಿ ಯಾವುದೂ ಸರಿಯಾದ ಬುನಾದಿಯಿಲ್ಲ, ಶಕ್ತಿ ಇಲ್ಲ, ಅಂಥಕ್ಕೆ ಶಕ್ತಿಯನ್ನು ತುಂಬಬೇಕೆಂದು ಹೇಳಿ ಅದಕ್ಕೋಸ್ಕರವಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಸ್ಟೇಟ್ ಅಪೆಕ್ಸ್ ಬ್ಯಾಂಕ್ ಜೊತೆಯಲ್ಲಿ ಚರ್ಚೆ ಮಾಡಿ ಅವರನ್ನು ಕೆಲವು ಸಲಹೆಗಳನ್ನು ಕೊಡಿ ಎಂದು ಕೇಳಿದ್ದೇವೆ. ಆ ಸಲಹೆಗಳನ್ನು ತೆಗೆದುಕೊಂಡ ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳನ್ನು ಯಾವರೀತಿ ಡೆವಲಪ್ ಮಾಡಬೇಕು, ಸ್ಟ್ರೆನ್‌ತನ್ ಮಾಡಬೇಕು ಮತ್ತು ಅವರಿಗೆ ಉತ್ತಮವಾದ ರೀತಿಯಲ್ಲಿ ಸೊಸೈಟಿಗಳು ನಡೆಸಬೇಕು ಎನ್ನುವ ಬಗ್ಗೆ ಒಂದು ತರಬೇತಿಯನ್ನು ಕೊಡಬೇಕೆಂದು ಅಪೆಕ್ಸ್‌ಬ್ಯಾಂಕ್‌ನವರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಅವರೂ ಚರ್ಚೆ ಮಾಡಿ ಒಂದು ರಿಪೋರ್ಟ್‌ನ್ನು ಕೊಡಲು ಒಪ್ಪಿಕೊಂಡಿದ್ದಾರೆ. ರಿಪೋರ್ಟ್ ಬಂದ ತಕ್ಷಣ ಕಾರ್ಯಗತ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೀನುಗಾರರ ವಿಷಯದಲ್ಲಿ ಶ್ರೀಮಾನ್ ಬಸವರಾಜುರವರು ಒಂದು ಮಾತನ್ನು ಹೇಳಿದರು. ಮೀನುಗಾರರಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಚಾರ ಈ ವರ್ಷ ಕರಾವಳಿ ಪ್ರದೇಶ ಅಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦೦ ಮನೆಗಳನ್ನು ಮತ್ತು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಮೀನುಗಾರರಿಗೆ ೧೦೦ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಅದಕ್ಕೆ ಅಂದಾಜು, ನಕಾಶೆ ತಯಾರು ಮಾಡಿದ್ದೇವೆ. ಆದಷ್ಟು ಜಾಗ್ರತೆ ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಬಸವಣ್ಣಪ್ಪನವರು ಮೀನುಗಾರರ ಬಗ್ಗೆ ಒಂದು ಮಾತನ್ನು ಹೇಳಿದರು. ಬಹಳ ಆಶ್ಚರ್ಯವಾಗುತ್ತದೆ. ನಮ್ಮ ಒಂದು ಸಮೀಕ್ಷೆಯ ಪ್ರಕಾರ ಕರಾವಳಿಯಲ್ಲಿ ಮೀನುಗಾರರು ಬಹಳ ಬುದ್ಧಿವಂತರಿರುತ್ತಾರೆ. ಅವರಲ್ಲಿ ಓದಿರುವವರ ಸಂಖ್ಯೆ ೧೦೦ಕ್ಕೆ ೯೦ ಜನರು ಇದ್ದಾರೆಂದು ಹೇಳಿದ್ದಾರೆ. ಓದಿ ದೊಡ್ಡ ದೊಡ್ಡ ಪದವಿಯನ್ನು ಪಡೆದಿದ್ದಾರೆಂದಲ್ಲ ಪ್ರತಿಯೊಬ್ಬರೂ ಓದಿದ್ದಾರೆ, ಅವರಲ್ಲಿ ತಜ್ಞರು ಇದ್ದಾರೆ. ಹಿಂದುಳಿದ ವರ್ಗದಲ್ಲಿ ಅದರಲ್ಲೂ ಸಮುದ್ರದ ಮೀನುಗಾರಿಕೆಯನ್ನೇ ಮುಖ್ಯ ಕಸಬನ್ನಾಗಿ, ಅದನ್ನೇ ಆಧಾರವಾಗಿ ಇಟ್ಟುಕೊಂಡು ಜೀವನ ಮಾಡತಕ್ಕಂಥವರಲ್ಲಿ ಇಷ್ಟು ಪ್ರಭಾವವಿರುವುದು ಬಹಳ ಸಂತೋಷದಾಯಕವಾದ ವಿಚಾರ. ಅವರಲ್ಲೂ ಏಳನೇ ಕ್ಲಾಸ್‌ವರೆಗೂ ಓದಿರುವವರೇ ಹೆಚ್ಚು. ಏಳನೇ ಕ್ಲಾಸ್ ಓದಿ ಮತ್ತೆ ಬಿಟ್ಟು ಬಿಡುವವರ ಸಂಖ್ಯೆ ೫-೬ ಪರ್ಸೆಂಟ್ ಇರುತ್ತದೆ. ಅವರಲ್ಲಿ ಹೆಣ್ಣುಮಕ್ಕಳಿಗೆ ಓದುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದರ ಬಗ್ಗೆ ಶ್ರೀಮಾನ್ ಬಸವಣ್ಣಪ್ಪನವರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಚರ್ಚೆಗೆ ಉತ್ತಮ ಫಲವಾಗಿ ಉತ್ತರ ಕನ್ನಡ ಜಿಲ್ಲೆಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಹೆಣ್ಣು ಮಕ್ಕಳಿಗಾಗಿ ಒಂದು ಹಾಸ್ಟೆಲ್‌ನ್ನು ತೆಗೆಯಲು ನಮ್ಮ ಇಲಾಖೆಯಿಂದ ಅರ್ಧ ಹಣವನ್ನು ಕೊಡುವುದಾಗಿಯೂ ಮತ್ತು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಅರ್ಧ ಹಣವನ್ನು ಕೊಡುವಂತೆ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಸರ್ಕಾರದ ಆಜ್ಞೆಯನ್ನು ಅತಿ ಶೀಘ್ರದಲ್ಲಿಯೇ ಹೊರಡಿಸುತ್ತೇವೆ. ಶ್ರೀಮತಿ ಮನೋರಮ ಮಧ್ವರಾಜ್‌ರವರು ಇಂಥ ಕಡೆ ಕೊಡಬೇಕೆಂದು ಹೇಳಬಾರದು, ಮಂಗಳೂರು ಅಥವಾ ಉಡುಪಿ ಈ ಎರಡು ಜಾಗದಲ್ಲಿ ಯಾವುದಾದರೂ ಒಂದು ಜಾಗದಲ್ಲಿ ಕೊಡುತ್ತೇವೆಂದು ಹೇಳುತ್ತೇನೆ. ಅದರಲ್ಲಿ ಸ್ಪರ್ಧೆ ಏನೂ ಇಲ್ಲ. ಯಾರು ಜಾಗವನ್ನು ಕೊಡುತ್ತಾರೋ ಅವರಿಗೆ ಕೊಡುತ್ತೇವೆ. ಹೆಣ್ಣು ಮಕ್ಕಳಿಗೆ ಅವಕಾಶಗಳನ್ನು ಕೊಡಬೇಕೆಂದು ಒತ್ತಾಯಿಸಿದ್ದಾರೆ. ಅವಕಾಶವನ್ನು ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ ಕರಾವಳಿ ಮೀನುಗಾರರ ಬಗ್ಗೆ ಹೆಚ್ಚಿನ ಭಾಷಣವನ್ನು ಮಾಡದೆ, ಒಳನಾಡು ಮೀನುಗಾರರ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತಾ ಜಲ ಸಂಪನ್ಮೂಲ ನಮ್ಮಲ್ಲಿ ಬಹಳಷ್ಟು ಇದೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಕಡಿಮೆ ೩೦ ಸಾವಿರ ಸಣ್ಣ ಕೆರೆಗಳು ಇವೆ.

ಇದರ ಜೊತೆಗೆ ಈ ಕರ್ನಾಟಕ ರಾಜ್ಯದಲ್ಲಿ ೬ ಸಾವಿರ ಕಿಲೋ ಮೀಟರ್ ಉದ್ದದಷ್ಟು ನದಿಗಳು ಹರಿಯುತ್ತಿವೆ. ಇರಿಗೇಷನ್ ಕೆನಾಲ್ಸ್ ಎಂದು ಏನು ಹೇಳುತ್ತೇವೆ ಅವು ೩ ಸಾವಿರ ಕಿಲೋಮೀಟರ್ಸ್ ಇವೆ. ಇದನ್ನು ಬಿಟ್ಟು ಬ್ರ್ಯಾಕಿಷ್ ವಾಟರ್‌ನಲ್ಲಿ ೪ ಸಾವಿರ ಹೆಕ್ಟೇರ್ ಪ್ರದೇಶ ಇದೆ, ಅದರಲ್ಲಿ ಸೀಗಡಿ ಮೀನು ಉತ್ಪಾದಿಸುವುದಕ್ಕೆ ಅವಕಾಶ ಇದೆ. ಈ ಸಾರಿ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಒಂದು ಸೀಗಡಿ ಮೀನಿನ ಕೇಂದ್ರವನ್ನು ಕುಮಟಾ ತಾಲ್ಲೂಕಿನಲ್ಲಿ ಪ್ರಾರಂಭಿಸಿದ್ದೇವೆ. ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಯೋಜಿಸಿ ನಾನೂ ಮತ್ತು ದೇಶಪಾಂಡೆಯವರು ಹೋಗಿ ಶಂಕುಸ್ಥಾಪನೆ ಮಾಡಿದ್ದೇವೆ. ಸೀಗಡಿ ಮೀನನ್ನು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಅದನ್ನು ರಫ್ತು ಮಾಡುವುದರಿಂದ ಕರ್ನಾಟಕ ರಾಜ್ಯಕ್ಕೆ ಬಹಳಷ್ಟು ಹಣ ಗಳಿಕೆಯಾಗುತ್ತದೆಂದು ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ. ಜಿಲ್ಲಾ ಪರಿಷತ್ತು ಬಂದ ಮೇಲೆ ಬೇರೆ ಇಲಾಖೆಯ ಅನುಭವ ಏನೋ ಗೊತ್ತಿಲ್ಲ, ನಮ್ಮ ಮೀನುಗಾರಿಕೆ ಇಲಾಖೆಯ ಅನುಭವದ ಪ್ರಕಾರ ಹೇಳಬೇಕಾದರೆ ಉತ್ತಮವಾದ ಕೆಲಸ ನಿರ್ವಹಣೆ ಮಾಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ವರ್ಷಕ್ಕೆ ಮೀನಿನ ಉತ್ಪಾದನೆಯಿಂದ ಕೇವಲ ೨ ಲಕ್ಷ ರೂಪಾಯಿ ವರಮಾನ ಬರುತ್ತಿತ್ತು. ಇವತ್ತು ಅದೇ ಜಿಲ್ಲಾ ಪರಿಷತ್ತಿನ ಅಧ್ಯಕ್ಷರ, ಸದಸ್ಯರ ಮತ್ತು ಆಡಳಿತಾಧಿಕಾರಿಗಳ ಸಹಕಾರದಿಂದ ಇವತ್ತಿನ ದಿವಸ ನಾವು ೨೫ ಲಕ್ಷ ರೂಪಾಯಿ ಲಾಭವನ್ನು ಗಳಿಸುತ್ತಿದ್ದೇವೆ. ಬೆಂಗಳೂರು ಗ್ರಾಮಾಂತರಜಿಲ್ಲೆಯಲ್ಲಿ ಇಂಟೆನ್ಸೀವ್ ಫಿಷ್ ಕಲ್ಟಿವೇಷನ್ ಎಂದು ಮಾಡಿ ಜಾರಿಗೆ ಕೊಟ್ಟಿದ್ದೇವೆ. ಇಲ್ಲಿ ಏನು ಒಂದು ಪ್ರಯೋಗ ಮಾಡಿದಾರೆ ಇದರಂತೆ ಎಲ್ಲಾ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸದಸ್ಯರು ಮತ್ತು ಕಾರ್ಯದರ್ಶಿಗಳು ಮುತುವರ್ಜಿಯಿಂದ ಕೆಲಸ ಮಾಡಿದರೆ ಈ ಒಂದು ಕಾರ್ಯದಲ್ಲಿ ಖಂಡಿತ ಯಶಸ್ಸು ದೊರೆಯುತ್ತದೆ. ಕೇವಲ ೨ ಲಕ್ಷ ರೂಪಾಯಿ ಉತ್ಪಾದನೆ ಇದ್ದ ಇಲಾಖೆಯಲ್ಲಿ ೨೭ ಲಕ್ಷ ರೂಪಾಯಿ ಉತ್ಪಾದನೆ ಮಾಡಿದ್ದಾರೆಂದರೆ ಬಹಳ ದೊಡ್ಡ ಪ್ರಮಾಣದಲ್ಲಿ ಸಾಧನೆ ಮಾಡಿದ್ದಾರೆಂದು ಹೇಳಬಹುದು ಈ ಸಂದರ್ಭದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತಿನ ಎಲ್ಲಾ ಸದಸ್ಯರನ್ನು ಶ್ಲಾಘಿಸುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಕೂಡ ಉತ್ತಮ ಕಾರ್ಯ ಮಾಡಿದ್ದಾರೆ. ಕೋಲಾರ ಜಿಲ್ಲೆಯ ಹೊನ್ನಾಡಿಯಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಏನಿದ್ದಾರೆ ಅವರಿಗೆ ಸೋಷಿಯಲ್ ಫಿಷರೀಸ್ ಸ್ಕೀಂ ಎಂದು ಜಾರಿಗೆ ತಂದು ಕೋಲಾರ ಜಿಲ್ಲೆಯನ್ನು ಪ್ರಪ್ರಥಮವಾಗಿ ಆಯ್ಕೆ ಮಾಡಿದೆವು. ಅಲ್ಲಿ ಮೊದಲಿಗೆ ಪ್ರಾಯೋಗಿಕವಾಗಿ ಮಾಡಿ ನೋಡೋಣವೆಂದು ಮಾಡಿದೆವು. ಅಲ್ಲಿ ಜಯಪ್ರದವಾದರೆ ಬೇರೆ ಜಿಲ್ಲೆಗಳಲ್ಲಿ ಜಾರಿಗೆ ತರೋಣವೆಂದು ಮಾಡಿ ೧೫೦ ಪರಿಶಿಷ್ಟ ಜಾತಿ ಮತ್ತು ವರ್ಗದ ಮಹಿಳೆಯರಿಗೆ ತರಬೇತಿ ನೀಡಿ ಸೀಡ್ ಮನಿ ಎಂದು ತಲಾ ೫-೫ ಸಾವಿರ ರೂಪಾಯಿಗಳನ್ನು ಸಾಲ ನೀಡಿ ಮೀನು ಮರಿಗಳನ್ನು ಸಣ್ಣ ಸಣ್ಣ ಕೆರೆಗಳಲ್ಲಿ ಮತ್ತು ಬಾವಿಗಳಲ್ಲಿ ಉತ್ಪಾದನೆ ಮಾಡುವುದಕ್ಕೆ ವ್ಯವಸ್ಥೆ ಮಾಡುವ ಮೂಲಕ ಈ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ೧೫೦ ಮಂದಿ ಮಹಿಳೆಯರು ತರಬೇತಿ ಪಡೆದ ಮೇಲೆ ೫-೫ ಸಾವಿರ ರೂಪಾಯಿಗಳನ್ನು ಏನು ತೆಗೆದುಕೊಂಡಿದ್ದರು ಅದನ್ನು ವಾಪಸ್ಸು ಕೊಟ್ಟಿದ್ದಾರೆ, ಮತ್ತು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಅವರು ಅದರಿಂದ ೩ರಿಂದ ೫ ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡಿದ್ದಾರೆ. ಆದ್ದರಿಂದ ಈ ಕಾರ್ಯಕ್ರಮವನ್ನು ಇಡೀ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೆ ತರುವುದಕ್ಕೆ ಪ್ರೋಗ್ರಾಂ ಚಾಕ್‌ಔಟ್ ಮಾಡಿದ್ದೇವೆ. ಅದರ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನವರ ಮುಖೇನ ಹೂಳೆತ್ತುವ ಕಾರ್ಯಕ್ರಮವನ್ನು ಮಾಡಿದ್ದೇವೆ. ಇದು ಬಹಳ ಮುಖ್ಯವಾದ ಕಾರ್ಯಕ್ರಮ.

೪-೦೦ ಪಿ.ಎಂ.

ರೈತರಿಗೂ ಇದರಿಂದ ಅನುಕೂಲವಾಗುತ್ತದೆ, ಮತ್ತು ಮೀನುಗಾರರಿಗೂ ಲಾಭದಾಯಕವಾಗುತ್ತದೆ. ಹೂಳೆತ್ತುವ ಕಾರ್ಯಕ್ರಮದಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನವರು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ನಾನು ... ನಮ್ಮ ಸ್ನೇಹಿತರಾದ ಶ್ರೀ ಅಬ್ದುಲ್ ನಜೀರ್ ಸಾಬ್ ಅವರು ಚರ್ಚೆ ಮಾಡಿ ಕರ್ನಾಟಕ ರಾಜ್ಯದಲ್ಲಿ ಒಂದು ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ರೂಪಿಸಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಯಿಂದ ಬಂದ ಉತ್ಪನ್ನ ರೈತರಿಗೆ ಮತ್ತು ಮಂಡಲ ಪಂಚಾಯಿತಿಗೆ ಹೋಗಬೇಕೆಂದು ಮಾಡಿದ್ದೇವೆ. ೩೦ ಸಾವಿರ ಸಣ್ಣ ಕೆರೆಗಳು ಮಂಡಲ್ ಪಂಚಾಯಿತಿಗೆ ಹೋಗಿದೆ. ೨,೭೦೦ ಕೆರೆಗಳು

ನಮ್ಮ ಇಲಾಖೆಯ ಕೈಯಲ್ಲಿವೆ. ಅದರಲ್ಲಿ ೨೫೦೦ ಕೆರೆಗಳನ್ನು ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ವಹಿಸಿಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದೇವೆ. ಇದರಿಂದ ಅವರು ಹೆಚ್ಚಿಗೆ ಮೀನು ಉತ್ಪಾದನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಆ ಅವಕಾಶ ಮಾಡಿಕೊಡಬೇಕೆಂಬ ಉದ್ದೇಶ ದಿಂದ ನಾನೂ ಮತ್ತು ನಜೀರ್ ಸಾಹೇಬರು ಸೇರಿ ಒಂದು ಕಾರ್ಯಕ್ರಮವನ್ನು ಅವರ ಇಲಾಖೆ ಮತ್ತು ನಮ್ಮ ಇಲಾಖೆ ಜೊತೆಗೂಡಿ ರೂಪಿಸಿದ್ದೇವೆ, ಕರ್ನಾಟಕ ರಾಜ್ಯದಲ್ಲಿ ಈ ವರ್ಷ ಸುಮಾರು ೧೫ ಕೋಟಿ ಮೀನು ಮರಿಗಳನ್ನು......

ಶ್ರೀ ಬಿ. ಬಸವಲಿಂಗಪ್ಪ.—ನಿಮಗೆ ಬುದ್ಧಿ ಚುರುಕು ಮಾಡಿಬಿಟ್ಟರೆ ಚೆನ್ನಾಗಿ ಉತ್ತರ ಕೊಡು ತ್ತೀರಿ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಜಪಾನಿನಲ್ಲಿ ಮೀನು ಸಾಕುವುದಕ್ಕೆ ಒಂದು ರೀತಿಯಾಗಿ ಮಾಡುತ್ತಿದ್ದಾರೆ. ಪ್ರತಿಯೊಬ್ಬ ರೈತ ಅವನೇ ಕಟ್ಟೆ ಕಟ್ಟಿಕೊಂಡು ಅಲ್ಲಿ ಮೀನು ಸಾಕತಕ್ಕ ವ್ಯವಸ್ಥೆ ಮಾಡಿ ಕೊಳ್ಳುತ್ತಿದ್ದಾನೆ. ಅದರ ಬಗ್ಗೆ ನೀವು ಏನೂ ಹೇಳಲಿಲ್ಲ.

ಶ್ರೀ ಎಂ. ರಘುಪತಿ.—ಅದಕ್ಕೆ ಬರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮುಂದೆ ಹೋಗುತ್ತಿದ್ದೀರಿ. ಅದಕ್ಕೋಸ್ಕರ ಹೇಳಿದೆ. ಸಮುದ್ರದ ಮೀನುಗಳನ್ನು ಅಲ್ಲಿ ಬೆಳೆಯುತ್ತಾರೆ. ಸಿಹಿ ನೀರಿನಲ್ಲಿ ಬೆಳೆಯತಕ್ಕ ಮೀನುಗಳು ಬಹಳ ಚೆನ್ನಾಗಿರುತ್ತವೆ. ಆ ತಳಿಗಳನ್ನು ಹಿಡಿದು ಬೆಳೆಸಬೇಕು. ಹಾವು ಮೀನು, ಚೇಳು ಮೀನು. ಬಾಳೆ ಮೀನು ಎಂದು ಇದೆ. ಅದರ ಬಗ್ಗೆ ನೋಡಿ.

ಶ್ರೀ ಎಂ. ರಘುಪತಿ.—ಹೋದ ವರ್ಷ ಕೇವಲ ೮ ಕೋಟಿ ಮೀನುಮರಿಗಳನ್ನು ಉತ್ಪಾದನೆ ಮಾಡಿದ್ದರೆ ಈ ವರ್ಷ ೧೫ ಕೋಟಿ ಉತ್ಪಾದನೆ ಮಾಡಿದ್ದೇವೆ. ಹೋದ ವರ್ಷ ಸುಮಾರು ೪೦ ಸಾವಿರ ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗಿದ್ದರೆ ಈ ವರ್ಷ ೫೫ ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಯಾಗಿದೆ. ಇದರಿಂದ ಗಣನೀಯ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧನೆ ಮಾಡಿದೇವೆ ಎಂದು ಹೇಳ ಬಹುದು. ಆದರೆ ೧೫ ಕೋಟಿ ಮೀನು ಮರಿಗಳನ್ನು ಏನು ಉತ್ಪಾದನೆ ಮಾಡುತ್ತೇವೆ ಅದೆಲ್ಲಾ ಬದುಕುವುದಿಲ್ಲ ಮೂರನೇ ಒಂದು ಭಾಗ ಮೀನು ಮರಿಗಳು ಮಾತ್ರ ಬದುಕುತ್ತವೆ. ಮಿಕ್ಕಿದ್ದೆಲ್ಲಾ ಸತ್ತುಹೋಗುತ್ತವೆ. ಅದಕ್ಕಾಗಿ ಚೈನಾ ಟೈಪ್ ಆಫ್ ಹ್ಯಾಚರೀಸ್ ಅನ್ನು ಕರ್ನಾಟಕ ರಾಜ್ಯದಲ್ಲಿ ಮಾಡುತ್ತಿದ್ದೇವೆ. ಒಂದು ಗಾಜನೂರು ಹತ್ತಿರ ಮಾಡುತ್ತಿದ್ದೇವೆ. ಇನ್ನೊಂದು ಟಿ.ಬಿ. ಡ್ಯಾಂ ಹತ್ತಿರ ಮಾಡುತ್ತಿದ್ದೇವೆ. ಅದನ್ನು ಮಾಡುವದಕ್ಕೆ ಈಗಾಗಲೇ ಅನುಮೋದನೆ ಕೊಟ್ಟಿದ್ದೇವೆ. ಚೈನಾ ಟೈಪ್ ಆಫ್ ಹ್ಯಾಚರೀಸ್ ಪ್ರಾರಂಭ ಮಾಡಿ ಮೀನು ಮರಿಗಳು ಏನು ಸಾಯುತ್ತಿವೆ ಅದು ಸಾಯದಹಾಗೆ ಮಾಡುತ್ತೇವೆ. ಈಗ ೩:೧ ಭಾಗ ಏನು ಬದುಕುತ್ತಿದೆ ಅದನ್ನು ತಪ್ಪಿಸಿ ೧ ಸತ್ತರೆ ೩ ಬದುಕುವ ರೀತಿ ಕಾರ್ಯಕ್ರಮ ಇದೆ. ಚೈನಾ ಟೈಪ್ ಆಫ್ ಹ್ಯಾಚರೀಸ್‌ನಿಂದ ಆ ರೀತಿ ಡೆವಲಪ್ ಮೆಂಟ್ ಮಾಡುತ್ತಿದ್ದೇವೆ. ಎಲ್ಲಾ ಹ್ಯಾಚರಿಗಳನ್ನೂ ಚೈನೀ ಟೈಪ್ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ. ಮಾನ್ಯ ಬಸವಲಿಂಗಪ್ಪನವರು ಏನು ಸಲಹೆ ಕೊಟ್ಟರು ಆ ಕಾರ್ಯಕ್ರಮವನ್ನು ರಾಯಚೂರು ಜಿಲ್ಲೆಯಲ್ಲಿ ಜಾರಿಗೆ ತರುವುದಕ್ಕೆ......

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಸತ್ತರೆ ಮೂರು ಬದುಕುವ ಮೀನುಗಳು ಅಂದರೆ ಯಾವುದದು?

ಶ್ರೀ ಎಂ. ರಘುಪತಿ.—ನಾಲ್ಕು ಮರಿಗಳಾದರೆ ಒಂದು ಮರಿ ಸತ್ತು ಹೋಗುತ್ತದೆ. ೩ ಮರಿ ಬದುಕುತ್ತದೆ,

ಮಾನ್ಯ ಅಧ್ಯಕ್ಷರೇ, ರಾಯಚೂರು ಜಿಲ್ಲೆಯಲ್ಲಿ ಈ ಕಾರ್ಯಕ್ರಮನ್ನು ಜಾರಿಗೆತಂದಿದ್ದೇವೆ. ಹೊಲದಲ್ಲಿ ಸಣ್ಣಸಣ್ಣ ಕಟ್ಟೆ ಕಟ್ಟಿ ಮೀನು ಮರಿಗಳನ್ನು ಬೆಳೆಸುವುದಕ್ಕೆ ಜಾರಿಗೆ ತಂದಿದ್ದೇವೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಆ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾಗಿದ್ದಾಗ ಇದನ್ನು ಮಾಡಿದಿರಾ ?

ಶ್ರೀ ಎಂ ರಘುಪತಿ.—ನಿಜ, ರಾಷ್ಟ್ರೀಯ ಸಹಕಾರ ಅಭಿವೃದ್ಧಿಯ ಸಂಪೂರ್ಣ ಸಹಕಾರವನ್ನು ತೆಗೆದುಕೊಂಡು ೫ ಕೋಟಿ ರೂಪಾಯಿ ವೆಚ್ಚದಲ್ಲಿ ಮೈಸೂರು ಜಿಲ್ಲೆಯಲ್ಲಿ ವಿಶೇಷವಾದ ಕಾರ್ಯಕ್ರಮ ವನ್ನು ಜಾರಿಗೆತರುತ್ತಿದ್ದೇವೆ. ಹೆಚ್ಚಿನ ಮೀನು ಸಾಕಲು ಕೃಷಿಕರಿಗೆ ಉತ್ತೇಜನ ಕೊಡುವ ರೂಪದಲ್ಲಿ

೫ ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಒಂದು ಕಾರ್ಯಕ್ರಮವನ್ನು ತಯಾರು ಮಾಡಿದ್ದೇವೆ. ಈ ಕಾರ್ಯಕ್ರಮದ ಅಡಿಯಲ್ಲಿ ಎನ್‌ಸಿಡಿಸಿ ಯವರ ಸಂಪೂರ್ಣ ಲಾಭವನ್ನು ನಾವು ಪಡೆದಿದ್ದೇವೆ ಎಂದು ಹೇಳುತ್ತಾ, ಪಶ್ಚಿಮ ಘಟ್ಟದ ಯೋಜನೆಯಲ್ಲಿ ನಾವು ೭೩ ಲಕ್ಷ ರೂಪಾಯಿ ವೆಚ್ಚದಲ್ಲಿ Mahaseer Fish ಎಂದು ಏನು ನದಿಗಳಲ್ಲಿ ಬೆಳೆಯುತ್ತವೆ ಅವುಗಳನ್ನು ಬೆಳೆಸುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಈ ಯೋಜನೆ ಈ ವರ್ಷ ಜಾರಿಗೆಬರುತ್ತದೆ. ಹಾರಂಗಿಯಲ್ಲಿ ೫ ಹೆಕ್ಟೇರ್ ಜಮೀನಿನಲ್ಲಿ ಫಿಶ್ ಹ್ಯಾಚರಿ ಮಾಡಲಿದ್ದೇವೆ, ಇದುವರೆವಿಗೂ ಕರ್ನಾಟಕದಲ್ಲಿ ಈ ಮೀನು ಉತ್ಪಾದನೆ ಆಗುತ್ತಾ ಇರಲಿಲ್ಲ. ಪ್ರಪ್ರಥಮ ಬಾರಿಗೆ ನಮ್ಮ ನದಿಗಳಲ್ಲಿ ಬೆಳೆಸುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ೬ ಸಾವಿರ ಕಿಲೋಮೀಟರ್‌ಗಳಷ್ಟು ಉದ್ದದ ನದಿಗಳ ನಮ್ಮಲ್ಲಿ ಇದ್ದು ಈ ನೀರಾವರಿ ಪ್ರದೇಶದಲ್ಲಿ ಇವುಗಳನ್ನು ಉತ್ಪಾದನೆ ಮಾಡಬೇಕೆಂದಿದ್ದೇವೆ. ಕೊಡಗು ಜಿಲ್ಲೆಯ ಹಾರಂಗಿಯಲ್ಲಿ ಹ್ಯಾಚರಿಯನ್ನು ಈ ವರ್ಷ ಪ್ರಾರಂಭ ಮಾಡುತ್ತೇವೆ. ಅಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡುತ್ತೇವೆಂದು ಹೇಳುತ್ತಾ, ಒಳನಾಡು ಮೀನುಗಾರಿಕಾ ಮಸೂದೆಯನ್ನು ಹೋದ ಸದನದಲ್ಲೇ ತರುತ್ತೇವೆಂದು ಹೇಳಿದ್ದರೂ ಇನ್ನೂ ಏಕೆ ತರಲಿಲ್ಲವೆಂದು ಮಾನ್ಯ ಸದಸ್ಯರು ಕೇಳಿದರು, ಆ ಬಗ್ಗೆ ಕರಡು ಮಸೂದೆ ತಯಾರಾಗಿದೆ. ಅದನ್ನು ಈ ಅಧಿವೇಶನದಲ್ಲಿ ಮಂಡಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಅಕ್ವೇರಿಯಂನಲ್ಲಿ ಬೆಳೆಸುವಂತಹ ಬಣ್ಣ ಬಣ್ಣದ ಮೀನುಗಳ ಬಗ್ಗೆ ಹೇಳಬೇಕೆಂದರೆ, ಇವುಗಳ ಅಭಿವೃದ್ಧಿಗಾಗಿ ಶ್ರೀಮಾನ್ ಬಸವಲಿಂಗಪ್ಪನವರ ಕ್ಷೇತ್ರದಲ್ಲಿರುವ ಹೆಸರುಘಟ್ಟದಲ್ಲಿ ನಾನೂ ಮತ್ತು ಅವರು ಹೋಗಿ ಒಂದು ಘಟಕವನ್ನು ಪ್ರಾರಂಭ ಮಾಡಿ ಬಂದಿದ್ದೇವೆ. ಇನ್ನು ಒಂದು ತಿಂಗಳಲ್ಲಿ ಅಲ್ಲಿ ಉತ್ಪಾದನೆ ಆರಂಭವಾಗುತ್ತದೆ. ಕಟ್ಟಡ ಪೂರ್ತಿಯಾಗಿದೆ. ಮರಿಗಳನ್ನು ನಾವು ಏನು ಅಲ್ಲಿ ಬಿಟ್ಟು ಬಂದಿದ್ದೇವೆ. ಅವುಗಳಲ್ಲಿನ ಪ್ರಥಮ ಉತ್ಪಾದನೆಯನ್ನು ಪ್ರಥಮ ಕಾಣಿಕೆ ನಿಮಗೆ ಕೊಡುತ್ತೇನೆ. ಈ ವರ್ಷ ಎನ್‌ಸಿಡಿಸಿ ಯೋಜನೆಯಲ್ಲಿ ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದೇವೆ. ಅವು ಬೀದರ್, ಗುಲ್ಬರ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಎಷ್ಟು ಸುದೀರ್ಘವಾಗಿ ಸ್ವಾರಸ್ಯಕರವಾಗಿ ಒಳನಾಡು ಮೀನುಗಾರಿಕೆ ಬಗ್ಗೆ, ಸಮುದ್ರದ ಮೀನುಗಾರಿಕೆ ಬಗ್ಗೆ ಇಷ್ಟೆಲ್ಲಾ ಭಾಷಣ ಮಾಡುತ್ತಿದ್ದಾರೆ ಹಾಗೂ ಹಣವನ್ನೂ ಕೂಡಾ ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ ಅಷ್ಟೇ ಸರಾಗವಾಗಿ ಇನ್ನು ಮೇಲೆ ಕರ್ನಾಟಕ ರಾಜ್ಯದಲ್ಲಿ ಮೀನು ತಿನ್ನುವ ಜನರು ಏನು ಇದ್ದಾರೆ ಅವರೆಲ್ಲರ ಮನೆಗಳಿಗೂ ಮೀನುಗಳನ್ನು ಒದಗಿಸುವ ರೀತಿಯಲ್ಲಿ ಪ್ರಯತ್ನ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತೇನೆ,

ಶ್ರೀ ಎಂ. ರಘುಪತಿ.—ಮತ್ತೆ ಹುಣಸೂರು ತಾಲ್ಲೂಕಿನಲ್ಲಿ ಒಳನಾಡು ಮೀನುಗಾರರಿಗೆ ೧೦೦ ಮನೆಗಳನ್ನು ಕಟ್ಟಿಸುವ ಕಾರ್ಯಕ್ರಮವನ್ನು ಈ ವರ್ಷ ಜಾರಿಗೆ ತಂದಿದ್ದೇವೆ. ಮಂಡ್ಯ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಮೀನುಗಾರರಿಗೆ ಮನೆಗಳನ್ನು ಕಟ್ಟಿಸುವ ಯೋಜನೆಯನ್ನು ತಯಾರು ಮಾಡಿರ ಕೇಂದ್ರಕ್ಕೆ ಕಳುಹಿಸಿದ್ದೇವೆ, ಅದನ್ನು ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ಸಂಸ್ಥೆ ಮುಖಾಂತ ಕಟ್ಟಬೇಕಾಗಿದೆ ಅದಕ್ಕೋಸ್ಕರ ಅವರಿಗೆ ಕಳಿಸಿಕೊಟ್ಟಿದ್ದೇವೆ. ಅಲ್ಲಿಂದ ಬಂದತಕ್ಷಣ ಇಲ್ಲಿ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಸಾಲಿನಲ್ಲಿ ಗಿರಿಜನರ ಉಪ ಯೋಜನೆಯಲ್ಲಿ ಚಾಮರಾಜನಗರ ಅರಣ್ಯ ವಿಭಾಗದ ಬುಡಕಟ್ಟು ಜನಾಂಗದ ಕ್ಷೇಮಾಭಿವೃದ್ಧಿಗಾಗಿ ಒಂದು ಸಮಗ್ರ ಮೀನುಗಾರಿಕೆ ಯೋಜನೆಯನ್ನು ತಯಾರು ಮಾಡಿದ್ದೇವೆ, ಇದರಮೂಲಕ ಸುಮಾರು ಹತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಇದನ್ನು ಈ ವರ್ಷ ಕಾರ್ಯಗತ್ತ ಮಾಡುತ್ತಿದ್ದೇವೆ.

ಇನ್ನು ಬೆಂಗಳೂರು ನಗರದಲ್ಲಿ ಒಂದೇ ಒಂದು ಅಕ್ವೇರಿಯಂ ಇತ್ತು. ಈಗ ಲಾಲ್‌ಬಾಗ್‌ನಲ್ಲಿ ಇನ್ನೊಂದು ಅಕ್ವೇರಿಯಮ್ ಅನ್ನು ಕೊಟ್ಟಿದ್ದೇವೆ, ಇದು ಈಗ ಲಾಭದಾಯಕವಾಗಿ ನಡೆಯುತ್ತಿದೆ. ಮತ್ತು ಇದೇರೀತಿಯಲ್ಲಿ ಕಾರವಾರದಲ್ಲಿ ಒಂದು ಅಕ್ವೇರಿಯಂ ಅನ್ನು ೨೦ ಲಕ್ಷ ರೂಪಾಯಿ ವೆಚ್ಚದಲ್ಲಿ ಮೆರಿನ್ ಫಿಶ್ ಅಕ್ವೇರಿಯಂ ಅನ್ನು ತರುತ್ತಿದೇವೆ, ಮುಂದಿನ ವರ್ಷ ಮಂಗಳೂರಿನಲ್ಲಿ ಮೇರಿನ್ ಫಿಶ್ ಅಕ್ವೇರಿಯಂ ಕಟ್ಟುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೆಯೇ ತುಮಕೂರಿನಲ್ಲಿ ಒಂದು ಅಕ್ವೇರಿಯಂ ಕಟ್ಟುವುದಕ್ಕೆ ಈಗಾಗಲೇ ತಯಾರು ಮಾಡಿದೇವೆ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಸಹ ಒಂದು ಅಕ್ವೇರಿಯಂ ಕಟ್ಟುವುದಕೆ ಏರ್ಪಾಡು ಮಾಡುತ್ತೇವೆ. ಕೋಲಾರ ಜಿಲ್ಲೆಯ ಅಕ್ವೇರಿಯಂ ಇನ್ನು ಮೂರು ತಿಂಗಳಲ್ಲಿ ಪ್ರಾರಂಭವಾಗುತ್ತದೆ. ನಾವು ಒಳನಾಡು

ಮೀನುಗಾರಿಕೆಯನ್ನು ಹೆಚ್ಚು ಹೆಚ್ಚು ಮಾಡಬೇಕೆಂದು ಕಬ್ಬನ್ ಪಾರ್ಕ್‌ನಲ್ಲಿ ೧೦ ಲಕ್ಷ ರೂಪಾಯಿ ವೆಚ್ಚದಲ್ಲಿ ಏರ್‌ಕಂಡೀಷನ್ಡ್ ರೆಸ್ಟೋರೆಂಟ್ ಮತ್ತು ಅಲ್ಲಿ ಮಾರಾಟ ಮಾಡುವುದಕ್ಕೆ ಐಸ್‌ಪ್ಲಾಂಟ್ ಇದನ್ನೆಲ್ಲ ಮಾಡಿ ಒಳನಾಡು ಮೀನುಗಾರರಿಗೆ ಸಹಾಯ ಮಾಡಬೇಕೆಂದು ಒಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಇದೇರೀತಿಯಲ್ಲಿ ಐದು ಜಿಲ್ಲಾ ವಿಭಾಗದಲ್ಲಿ ಐಸ್‌ಪ್ಲಾಂಟ್ ನಿರ್ಮಾಣ ಮಾಡಬೇಕೆಂದು ಯೋಜನೆಯನ್ನು ತಯಾರು ಮಾಡಿದ್ದೇವೆ, ಮೈಸೂರಿನಲ್ಲಿ ಒಂದು, ಗುಲ್ಬರ್ಗಾದಲ್ಲಿ, ಕೋಲಾರದಲ್ಲಿ, ಮತ್ತು ಧಾರವಾಡದಲ್ಲಿ ಒಂದು, ಹೀಗೆ ಐದು ಪ್ರದೇಶಗಳಲ್ಲಿ ೫ ಘಟಕಗಳನ್ನು ಪ್ರಾರಂಭಮಾಡಬೇಕೆಂದು ಹೇಳಿ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಇಷ್ಟು ಹೇಳುತ್ತಾ ಅಧ್ಯಕ್ಷರೇ, ಈ ಮೀನುಗಾರಿಕೆ ಟ್ಯಾಂಕ್‌ಗಳನ್ನು ಬಡವರಿಗೆ ಕೊಡುವ ವಿಷಯದಲ್ಲಿ ತಾರತಮ್ಯ ಇತ್ತು. ಇದನ್ನು ತಪ್ಪಿಸಬೇಕೆಂದು ಒಂದು ಮಸೂದೆ ಮೂಲಕ ಮತ್ತು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ, ಇದರಲ್ಲಿ ಏನು ಮೀನುಗಾರರು ಇದ್ದಾರೆ ಅವರಿಗೆ ಮೊದಲಿನ ಆದ್ಯತೆ ಕೊಡಬೇಕು, ಮೀನುಗಾರಿಕೆ ಕಾಲೇಜಿನಲ್ಲಿ ಓದತಕ್ಕಂಥವರಿಗೆ ಆದ್ಯತೆ ಕೊಡಬೇಕೆಂದು ಮಾಡಿದ್ದೇವೆ. ಹಿಂದೆ ಯಾರಿಗೆಂದರೆ ಅವರಿಗೆ ಕೊಟ್ಟುಬಿಡುತ್ತಿದ್ದರು. ಮನಸ್ಸಿಗೆ ಬಂದಂತೆ ಮಾಡುತ್ತಿದ್ದರು. ಇದು ಮನಸ್ಸಿಗೆ ಬಂದಹಾಗೆ ನಡೆಯಕೂಡದು ಎಂದು ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ನಿಯಂತ್ರಣ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮೀನು ಮರಿಗಳನ್ನು ಉತ್ಪಾದನೆ ಮಾಡಲು ಎರಡು ಜಲಾಶಯಗಳನ್ನು ಫಿಶರೀಸ್ ಕಾಲೇಜಿನಿಂದ ಹೊರಬಂದ ಗ್ರಾಜ್ಯುಯೇಟ್‌ಗಳಿಗೆ ಕೊಡತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಫಿಶರೀಸ್ ಗ್ರ್ಯಾಜ್ಯುಯೇಟ್‌ಗಳಿಗೆ ಕೊಡುವುದರಿಂದ ಅವರಿಗೆ ತಾಂತ್ರಿಕ ಜ್ಞಾನ ಇರುತ್ತದೆ ಮತ್ತು ಇದನ್ನು ಅವರು ಉಪಯೋಗಿಸಿಕೊಂಡು ಹೆಚ್ಚು ಮರಿಗಳನ್ನು ಉತ್ಪಾದನೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಶ್ರೀಮಾನ್ ಮೊಯಿಲಿಯವರು ಒಂದು ಸಲಹೆಯನ್ನು ಕೊಟ್ಟಿದ್ದರು. ಅವರಕಾಲದಲ್ಲಿ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯಿಂದ ಒಂದು ವರದಿಯನ್ನು ಕೊಟ್ಟಿದ್ದರು, ಏನು ನಾರಾಯಣಪುರ ಡ್ಯಾಮ್ ಅಡಿಯಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ವರದಿಯನ್ನು ನಾನು ತರಿಸಿಕೊಂಡು ನೋಡಿದ್ದೇನೆ ಮತ್ತು ಅದನ್ನು ಮಾಡುತ್ತೇನೆ. ನಾನು ಅಧಿಕಾರ ವಹಿಸಿಕೊಂಡಮೇಲೆ ಏನೊಂದು ಶಿಫಾರಸ್ಸನ್ನು ಮಾಡಿದ್ದರು, ಈ ಶಿಫಾರಸ್ಸಿನ ಮೇರೆಗೆ ೪೦ ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದೇನೆ. ಈ ಹಣವನ್ನು ಬಿಡುಗಡೆ ಮಾಡಿ ಇದನ್ನು ರಿಪೇರಿ ಮಾಡುವುದಕ್ಕೆ ಕಾರ್ಯಾಚರಣೆ ನಡೆಯುತ್ತಿದೆ. ಮತ್ತು ಯಾರ್ಯಾರು ತಪ್ಪಿತಸ್ಥರು ಇರುತ್ತಾರೋ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಲೋಕಾಯುಕ್ತಕ್ಕೆ ವಹಿಸಿಕೊಟ್ಟಿದ್ದೇನೆ. ಲೋಕಾಯುಕ್ತಕ್ಕೆ ವಹಿಸಿಕೊಟ್ಟು ೫ ತಿಂಗಳಾಗಿದೆ. ಲೋಕಾಯುಕ್ತದ ವರದಿಗೋಸ್ಕರ ಕಾಯುತ್ತಿದ್ದೇವೆ. ವರದಿ ಬಂದ ತಕ್ಷಣ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಇದಕ್ಕಿಂತ ಹೆಚ್ಚಾಗಿ ನಾನು ಮೀನುಗಾರಿಕೆ ಇಲಾಖೆಯ ಬಗ್ಗೆ ಮಾತನಾಡುವುದಿಲ್ಲ. ಹಲವಾರು ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳನ್ನು ತಿಳಿಸಿ, ನನಗೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದ ಕರಾವಳಿಯಲ್ಲಿ ಕಳೆದ ಎರಡು ವರ್ಷಗಳಿಂದ ಮೀನಿನ ಕ್ಷಾಮ ಇದೆ. ಈ ಬಗ್ಗೆ ಮೀನುಗಾರರೆಲ್ಲ ಒಟ್ಟಾಗಿ ಸೇರಿ, ಕರಾವಳಿಯಲ್ಲಿ ಮೀನಿನ ಕ್ಷಾಮ ಇದೆ ಮೀನಿಗೆ ಬರಗಾಲ ಇದೆ ಎಂದು ಘೋಷಣೆ ಮಾಡಬೇಕೆಂದು ಒತ್ತಾಯ ಮಾಡಿದ ಮೇರೆಗೆ ಮಾನ್ಯ ಸಚಿವರು ಕಳೆದ ಜೂನ್ ತಿಂಗಳಲ್ಲಿ ಮೀನಿನ ಕ್ಷಾಮ ಏತಕ್ಕೆ ಬಂತು, ಮೀನಿನ ಉತ್ಪಾದನೆ ಏತಕ್ಕೆ ಕಡಿಮೆ ಆಯಿತು ಎಂಬ ವಿಚಾರವನ್ನು ಅಧ್ಯಯನ ಮಾಡಲು, ಫಿಷರೀಸ್ ಕಾಲೇಜ್‌ನ ನಿರ್ದೇಶಕರಾದ ಶ್ರೀ ಹೆಚ್. ಬಿ. ಶೆಟ್ಟಿಯವರ ಒಂದು ಏಕಸದಸ್ಯ ಆಯೋಗವನ್ನು ಅಥವಾ ಅಧ್ಯಯನ ಸಮಿತಿಯನ್ನು ರಚಿಸಿದ್ದಾರೆ. ಈಗಾಗಲೇ ಈ ಸಮಿತಿಯನ್ನು ರಚಿಸಿ ಹನ್ನೊಂದು ತಿಂಗಳಾಯಿತು. ಆ ಸಮಿತಿಯ ರಿಪೋರ್ಟನ್ನು ತಾವು ತೆಗೆದುಕೊಂಡಿರಲಿಕ್ಕಿಲ್ಲ ಅಥವಾ ಅವರು ಕೊಟ್ಟಿರಲಿಕ್ಕಿಲ್ಲ. ತಾವು ಈ ಸಮಿತಿಯ ರಿಪೋರ್ಟ್‌ನ್ನು ಕೇಳಬೇಕು. ಏತಕ್ಕೆಂದರೆ ತಾವು ತಮ್ಮ ಉತ್ತರದಲ್ಲಿ ಈಗಾಗಲೇ ಹೇಳಿದ ಹಾಗೆ ನಮ್ಮ ಪರ್ಸೀನ್ ಬೋಟ್‌ನವರು ಮತ್ತು ಟ್ರಾವೆಲ್ ಬೋಟ್‌ನವರು ಸುಮಾರು ೧೫ ಕೋಟಿ ರೂಪಾಯಿಗಳನ್ನು ಬ್ಯಾಂಕ್‌ಗಳಿಗೆ ಮರುಪಾವತಿ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕೃಷಿ ಕಾರ್ಮಿಕರಿಗೆ ಬರಗಾಲ ಬಂದಾಗ ಯಾವರೀತಿ ಸಾಲದ ಬಡ್ಡಿಯನ್ನು ಮನ್ನಾ ಮಾಡಲಿಕ್ಕೆ ರೆಕಮೆಂಡ್

ಮಾಡುತ್ತೀರೋ ಅದೇ ರೀತಿ ನಮ್ಮ ಮೀನುಗಾರರಿಗೂ ಕೂಡಾ ಅವರ ಸಾಲದ ಬಡ್ಡಿಯನ್ನು ಮನ್ನಾ ಮಾಡಬೇಕೆಂದು, ಬ್ಯಾಂಕುಗಳಿಗೆ ಆದೇಶ ಕೊಡುವಂತೆ ಕೇಂದ್ರ ಸರಕಾರಕ್ಕೆ ತಾವು ಶಿಫಾರಸ್ಸು ಮಾಡಬೇಕು. ಅವರು ಬಹಳ ನಿಕೃಷ್ಟವಾದ ಅವಸ್ಥೆಯಲ್ಲಿದ್ದಾರೆ, ವರ್ಷದಿಂದ ವರ್ಷಕ್ಕೆ ಮೀನಿನ ಉತ್ಪತ್ತಿ, ಬಹಳ ಕಡಿಮೆಯಾಗುತ್ತಾ ಉಂಟು, ಇನ್ನು ಮೀನುಗಾರರಿಗೆ ಮನೆ ಕಟ್ಟಿಸಿಕೊಡುವ ಬಗ್ಗೆ ಹೇಳುತ್ತಾ ಉತ್ತರ ಕನ್ನಡ ಜಿಲ್ಲೆಯಲ್ಲಿ ನೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂರು ಮನೆಗಳನ್ನು ಕಟ್ಟಿಸಿ ಕೊಡುತ್ತೇವೆಂದು ಹೇಳಿದ್ದೀರಿ. ಕರಾವಳಿ ಪ್ರದೇಶದಲ್ಲಿ ಮೂರು ಲಕ್ಷ ಮೀನುಗಾರರ ಕುಟುಂಬಗಳು ಇರುವಾಗ ವರ್ಷಕ್ಕೆ ನೂರು ನೂರು ಮನೆಗಳನ್ನು ಕಟ್ಟಿಸಿದರೆ ಅದು ಸಾಲದು. ಅಷ್ಟೇ ಅಲ್ಲದೆ ಶೇಕಡಾ ೯೦ರಷ್ಟು ಬಡ ಮೀನುಗಾರರಿಗೆ ಅವರದ್ದೇ ಆದ ನಿವೇಶನಗಳು ಇಲ್ಲ. ಯಾರದ್ದೋ ಶ್ರೀಮಂತರ ಜಾಗದಲ್ಲಿ ಅವರು ಗುಡಿಸಲು ಹಾಕಿಕೊಂಡು ಇರುತ್ತಾರೆ, ಅವರಿಗೆ ಅಲ್ಲಿ ಮನೆಗಳನ್ನು ಕಟ್ಟಲು ಪರವಾನಗಿ ಕೊಡುವುದಿಲ್ಲ. ಸರಕಾರದ ಯಾವ ಸವಲತ್ತೂ ಕೂಡಾ ಅವರಿಗೆ ಸಿಗುವುದಿಲ್ಲ. ಕೃಷಿ ಕಾರ್ಮಿಕರಿಗೆ ಅವರು ಮಾಡುತ್ತಿರುವ ಜಮೀನನ್ನು ಅವರ ಸ್ವಂತಕ್ಕೆ ಹೇಗೆ ಮಾಡಿಕೊಟ್ಟಿದ್ದೀರೋ ಅದೇ ರೀತಿ ಇಲ್ಲೂ ಕೂಡಾ ಮಾಡಬೇಕು. ಮೀನುಗಾರಿಕೆಯೂ ಸಹ ಕೃಷಿಯಲ್ಲೇ ಬರುತ್ತದೆ.

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮೀನುಗಾರಿಕೆಯೂ ಕೂಡಾ ಕೃಷಿಯಲ್ಲೇ ಬರುವುದರಿಂದ ಮೀನುಗಾರರಿಗೂ ಕೂಡಾ ಯಾವುದೇ ಒಂದು ಕಾನೂನಿನ ಅಡಿಯಲ್ಲಿ ಮನೆಗಳನ್ನು ಅವರ ಸ್ವಂತಕ್ಕೆ ಉಪಯೋಗ ಮಾಡುವ ಹಾಗೆ ಅವರಿಗೆ ರೆಗ್ಯುಲರೈಸ್ ಮಾಡುವ ಹಾಗೆ ಆಜ್ಞೆ ಮಾಡಬೇಕೆಂದು ಹೇಳುತ್ತೇನೆ. ಇದುವರೆಗೆ ನಮ್ಮ ಬಡ ಮೀನುಗಾರ ಮಹಿಳೆಯರು ಬಂದರು ಪ್ರದೇಶದಲ್ಲಿ, ಮಲ್ಪೆ, ಗಂಗೊಳ್ಳಿ, ಹೊನ್ನಾವರ, ಕಾರವಾರ ಮುಂತಾದ ಕಡೆಗಳಲ್ಲಿ, ಪೋರ್ಟ್ ಜಾಗ ಏನುಂಟು ಅಲ್ಲೇ ಮೀನುಗಳನ್ನು ಒಣಗಿಸುತ್ತಿದ್ದಾರೆ. ಇದರ ಬಗ್ಗೆ ಒಂದು ಕಮಿಟಿಯನ್ನು ಮಾಡಿರುತ್ತೀರಿ. ಆದರೆ ಅವರನ್ನು ಅಲ್ಲಿಂದ ದೂರ ಕಳುಹಿಸುವುದಕೆ ಸಾಧ್ಯ ಇಲ್ಲ. ಮೀನುಗಾರರು ಸಮುದ್ರದಲ್ಲಿ ಮೀನು ಹಿಡಿಯುವುದಕ್ಕೆ ಹೋಗುವುದರಿಂದ, ಸಮುದ್ರ ತೀರದಲ್ಲೇ ಅವರು ಮೀನನ್ನು ಒಣಗಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು. ಬಂದರು ಪ್ರದೇಶದಲ್ಲಿ ಬಡ ಮೀನುಗಾರ ಮಹಿಳೆಯರು, ಯಾವ ಯಾವ ಜಾಗದಲ್ಲಿ ಮೀನನ್ನು ಒಣಗಿಸುತ್ತಿದ್ದಾರೋ ಅದನ್ನೂ ಕೂಡಾ ಅವರಿಗೆ ರೆಗ್ಯೂಲರೈಸ್ ಮಾಡಬೇಕು. ಏತಕ್ಕೆಂದರೆ ತಾವು ಇಲ್ಲಿ ಹೇಳುತ್ತೀರಿ, ಆಮೇಲೆ ಅಧಿಕಾರಿಗಳು ಇನ್ನೂ ಏನಾದರೂ ಹೇಳಿ ತಮ್ಮ ಕಿವಿಯನ್ನು ಊದಿ ತಮ್ಮ ಆಜ್ಞೆಗಳನ್ನು ಬದಲಾಯಿಸುತ್ತಾರೆ. ಎಂಬ ಭಯ ಅವರಿಗೆ ಉಂಟು. ಯಾವ ಮಾತಿಗೂ ಸಹ ತಾವು ಕಿವಿ ಕೊಡದೆ ಹಿಂದುಳಿದ ಮೀನುಗಾರರ ಬಗ್ಗೆ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಬೇಕು. ತಮ್ಮ ಆಜ್ಞೆಯನ್ನು ಕಾರ್ಯರೂಪಕ್ಕೆ ತಂದು ಅವರಿಗೆ ಉಪಕಾರ ಮಾಡಬೇಕು, ಮಾಡುತ್ತೀರಿ ಎಂಬ ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇನ್ನೊಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. ಬಂದರುಗಳ ಹತ್ತಿರ ಶಿಪ್ ಬ್ರೇಕಿಂಗ್ ಯಾರ್ಡ್‌ಗೆ ಅವಕಾಶ ಕೊಡುವುದನ್ನು ಯಾವ ತಜ್ಞರೂ ಕೂಡಾ ಒಪ್ಪುವುದಿಲ್ಲ. ಹಿಂದೆ ಜನತಾ ಸರಕಾರದ ಮಂತ್ರಿಗಳು ಇದಕ್ಕೆ ಪರವಾನಗಿ ಕೊಟ್ಟಿದ್ದಾರೆ. ಅಲ್ಲಿ ಏನಾಗುತ್ತದೆ ಎಂದರೆ, ನಾನು ಗುಜರಾತ್‌ಗೆ ಹೋಗಿದ್ದೆ, ಅಲ್ಲಿ ತಜ್ಞರು ಹೇಳಿದ ಪ್ರಕಾರ ಷಿಪಿಂಗ್ ಯಾರ್ಡ್ ಹತ್ತಿರ ಷಿಪ್ ಬ್ರೇಕಿಂಗ್ ಯಾರ್ಡ್ ಕೊಡಬಾರದು, ಷಿಪ್ ಒಡೆಯುವಾಗ ಅದರ ತೈಲ ನೀರಿನಲ್ಲಿ ಬಿದ್ದು, ಅಂತಹ ನೀರಿನಲ್ಲಿ ಮೀನು ತೀರಕ್ಕೆ ಬರುವುದಿಲ್ಲ, ಎಂದು ಅವರು ಹೇಳಿದರು. ಇದನ್ನು ಸರಕಾರದ ಗಮನಕ್ಕೂ ತಂದಿದ್ದೇನೆ. ಮಾನ್ಯ ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಅವರಿಗೆ ಬರೆದಿದ್ದೇನೆ. ಒಂದೆರಡು ಷಿಪ್‌ಗಳನ್ನು ಅಲ್ಲಿ ಬ್ರೇಕ್ ಮಾಡಿದ್ದಾರೆ. ಇನ್ನಾದರೂ ಕೂಡಾ ಇದನ್ನು ತಡೆಹಿಡಿದು, ಈಗ ಕೊಟ್ಟಿರತಕ್ಕ ಜಾಗವನ್ನು ವಾಪಸ್ ತೆಗೆದುಕೊಂಡು, ಬಡ ಮೀನುಗಾರರಿಗೆ ಅದನ್ನು ಕೊಡಬೇಕೆಂದು ಕಳಕಳಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಶ್ರೀಮತಿ ಮನೋರಮಾ ಮಧ್ವರಾಜ್‌ರವರು ಎರಡುಮೂರು ಸಲಹೆಗಳನ್ನು ಕೊಟ್ಟಿದ್ದಾರೆ. ಡಾ. ಹೆಚ್.ಬಿ. ಶೆಟ್ಟಿಯವರು ಮೊನ್ನೆ ತಾನೆ ನನ್ನನ್ನು ಭೇಟಿಯಾಗಿದ್ದರು. ಅವರು ಸಂಪೂರ್ಣವಾಗಿ ನಾನು ವರದಿಯನ್ನು ತಯಾರು ಮಾಡಿದ್ದೇನೆ, ಇನ್ನು ಕೆಲವೇ ದಿನಗಳಲ್ಲಿ ವರದಿಯನ್ನು ಕೊಡುತ್ತೇನೆ ಎಂದು ಅವರು ಹೇಳಿದ್ದಾರೆ. ವರದಿ ಬಂದ ತಕ್ಷಣ ನಾನು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಶಾಸಕರುಗಳ ಸಭೆಯನ್ನು ಕರೆದು, ಆ

ಸಮಿತಿಯವರು ಏನೇನು ಶಿಫಾರಸ್ಸುಗಳನ್ನು ಮಾಡಿರುತ್ತಾರೆ, ಅದನ್ನು ಜಾರಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ, ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮನೆ ಕಟ್ಟುವ ವಿಷಯ ಈಗ ಅದನ್ನು ಪ್ರಾರಂಭ ಮಾಡಿದ್ದೇವೆ. ಇದುವರೆಗೆ ಅದು ಇರಲಿಲ್ಲ. ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಮೀನುಗಾರರ ಕಷ್ಟಗಳನ್ನು ನಾನು ಅರ್ಥ ಮಾಡಿಕೊಂಡಿರುವುದರಿಂದ ಹಾಗೂ ಅವರ ಕಷ್ಟ ಪರಿಸ್ಥಿತಿಯನ್ನು ನೋಡಿ ಅವರಿಗೇನಾದರೂ ಉಪಕಾರ ಮಾಡಬೇಕೆಂದು ಈ ಕಾರ್ಯಕ್ರಮ ಜಾರಿಗೆ ತಂದಿದ್ದೇನೆ. ಮೀನುಗಾರರು ಹಿಂದುಳಿದ ಜನಾಂಗಕ್ಕೆ ಸೇರಿದವರು ಮತ್ತು ಬಡವರು ಆಗಿರುವುದರಿಂದ ಅವರಿಗೆ ಸಹಾಯ ಮಾಡಬೇಕೆಂಬ ಕಾರಣಕ್ಕಾಗಿ ಈ ಹೊಸ ಕಾರ್ಯಕ್ರಮನ್ನು ಜಾರಿಗೆ ತಂದಿದ್ದೇವೆ. ಇದುವರೆಗೆ ಈ ಕಾರ್ಯಕ್ರಮ ಇರಲಿಲ್ಲ.

ಮೂರನೆಯದಾಗಿ ಶಿಪ್ ಬ್ರೇಕಿಂಗ್ ಯಾರ್ಡ್‌ಗೆ ಅನುಮತಿಯನ್ನು ಹಿಂದೆ ಕೊಟ್ಟಿದ್ದಾರೆ, ನಾನು ಮಂತ್ರಿಯಾದ ಮೇಲೆ ಯಾವುದೂ ಕೊಟ್ಟಿಲ್ಲ. ಶಿಪ್ ಬ್ರೇಕ್ ಮಾಡುವುದರಿಂದ ಮೀನುಮರಿಗಳು ಸಾಯುತ್ತವೆ ಹಾಗೂ ಮೀನಿನ ಉತ್ಪಾದನೆಗೆ ಧಕ್ಕೆ ಆಗುತ್ತದೆ, ಬಹಳ ತೊಂದರೆಯಾಗುತ್ತದೆ ಎಂದು ತಾವು ಏನು ಹೇಳಿದ್ದೀರಿ ಅದನ್ನು ನಾನು ಗಮನದಲ್ಲಿಟ್ಟುಕೊಂಡು, ತಜ್ಞರ ಸಲಹೆ ಹಾಗೂ ಉಪಯೋಗವನ್ನು ಪಡೆದುಕೊಂಡು ಈ ಶಿಪ್ ಬ್ರೇಕಿಂಗ್ ಯಾರ್ಡನ್ನು ಬೇರೆ ಕಡೆ ಮಾಡುವುದಕ್ಕೆ ಒಂದು ಯೋಜನೆಯನ್ನು ತಯಾರು ಮಾಡುತ್ತೇನೆ ಎಂದು ಹೇಳುತ್ತೇನೆ.

ಇನ್ನು ಫಿಷರೀಸ್ ಮಾರ್ಕೆಟ್ ಬಗ್ಗೆ ಹೇಳಿದ್ದಾರೆ. ಮಹಿಳೆಯರು ಸಮುದ್ರದ ಹತ್ತಿರ ಅಂದರೆ ಪೋರ್ಟ್‌ಲ್ಯಾಂಡ್‌ನಲ್ಲಿ ಏನು ಕಟ್ಟಿಕೊಂಡಿದ್ದಾರೆ ಅದನ್ನು ಅವರಿಗೇ ರೆಗ್ಯುಲರೈಸ್ ಮಾಡಬೇಕೆಂದು ಹೇಳಿದ್ದೀರಿ. ಅದನ್ನೂ ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀಮಾನ್ ಇದಿನಬ್ಬರವರು ಬಂದಿದ್ದಾರೆ. ಹಳೇ ಬಂದರಿನಲ್ಲಿ ಏನು ರೇಟ್ಸ್ ಜಾಸ್ತಿ ಮಾಡಿರುತ್ತಾರೆ ಆ ರೇಟನ್ನು ಕಡಿಮೆ ಮಾಡುವುದಕ್ಕೆ ಆಗಲೇ ನಾನು ಒಂದು ರಿಪೋರ್ಟ್ ಕರೆದಿದ್ದೇನೆ ರಿಪೋರ್ಟ್ ಬಂದ ತಕ್ಷಣ ಕಡಿಮೆ ಮಾಡುತ್ತೇನೆಂದು ಈ ಸಂದರ್ಭದಲ್ಲಿ ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಮಾನ್ಯ ಮೊಯಿಲಿಯವರು ಒಂದು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳುವುದನ್ನು ಮರೆತು ಹೋದೆ. ಮೀನುಗಾರಿಕೆ ಕಾಲೇಜಿನಲ್ಲಿ ಮೀನುಗಾರರ ಮಕ್ಕಳಿಗೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ಮೀನುಗಾರಿಕೆ ಕಾಲೇಜು ಇರುವುದು ಅಗ್ರಿಕಲ್ಚರಲ್ ಯೂನಿವರ್ಸಿಟಿ ಕೆಳಗೆ. ಇದಕ್ಕೆ ಯುನಿವರ್ಸಿಟಿ ಆಕ್ಟ್‌ಗೆ ಒಂದು ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದನ್ನು ತರುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಇದನ್ನು ಮಾಡುತ್ತೇನೆಂದು ಹೇಳುತ್ತೇನೆ.

ಇನ್ನು ಒಂದೇ ಒಂದು ವಿಚಾರ ಮರೆತಿದ್ದೆ, ಪ್ರತಿಯೊಬ್ಬ ಮೀನುಗಾರರು ನಮ್ಮ ಮುಖ್ಯಮಂತ್ರಿಗಳನ್ನು ಶ್ಲಾಘನೆ ಮಾಡಬೇಕು. ಅವರು ಮೀನುಗಾರರಿಗೆ ಈ ವರ್ಷದಿಂದ ಒಂದು ವಿಶೇಷವಾದ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ಘೋಷಣೆ ಮಾಡಿರುತ್ತಾರೆ. ಅದೇನೆಂದರೆ ಮೀನುಗಾರರಿಗೆ ಒಂದು ಇನ್‌ಷ್ಯೂರೆನ್ಸ್ ಸ್ಕೀಮ್ ಜಾರಿಗೆ ತರುವುದು. ಈಗ ಏನು ಇನ್‌ಷ್ಯೂರೆನ್ಸ್ ಸ್ಕೀಮ್ ಇದೆ ಅದರಿಂದ ಬಹಳ ಜನಕ್ಕೆ ಲಾಭವಾಗುವುದಿಲ್ಲ, ಅದಕ್ಕೋಸ್ಕರ ಒಂದು ಹೊಸ ಯೋಜನೆ ತಯಾರು ಮಾಡುತ್ತಿದ್ದೇವೆ. ಇನ್ನು ಮೂರು ತಿಂಗಳ ಒಳಗೆ ವಿಶೇಷ ಕಾರ್ಯಕ್ರಮ ಹಾಕುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಕರೆದು ಇನ್ನು ಮೂರು ತಿಂಗಳ ಒಳಗಡೆ ಈ ಕಾರ್ಯಕ್ರಮ ರೂಪಿಸಬೇಕೆಂದು ಆದೇಶ ಕೊಟ್ಟಿದ್ದಾರೆ. ಇನ್ನು ಮೂರು ತಿಂಗಳ ಒಳಗಡೆ ಒಂದು ಕಾರ್ಯಕ್ರಮ ರೂಪಿಸಿ, ಎಲ್ಲ ಮೀನುಗಾರರಿಗೆ ಸಹಾಯ ಆಗುವ ಹಾಗೆ, ಅದರಲ್ಲೂ ಬಡವರಿಗೆ ನೊಂದವರಿಗೆ ಸಹಾಯ ಆಗುವ ಹಾಗೆ ನೋಡಿಕೊಳ್ಳುತ್ತೇವೆ. ಏತಕ್ಕೆಂದರೆ ಮೀನುಗಾರರು ಮೀನು ಹಿಡಿಯಲು ಸಮುದ್ರಕ್ಕೆ ಹೋದರೆ ಅವರು ಹಿಂದೆ ಬರುತ್ತಾರೋ ಇಲ್ಲವೋ ಎಂಬ ಭಯದಲ್ಲಿ ಜೀವನ ಸಾಗಿಸಬೇಕಾಗಿದೆ. ಇವರಿಗೆ ಒಂದು ವಿಶೇಷ ಯೋಜನೆಯನ್ನು ಮಾಡಿ, ಮೂರು ತಿಂಗಳಲ್ಲಿ ಪ್ರಕಟಣೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ನಮ್ಮ ಮಲ್ಪೆ ಮೀನುಗಾರಿಕೆ ಬಂದರಿನ ಒಳಗೆ, ಮೀನುಗಾರಿಕೆ ಸೀಸನ್‌ನಲ್ಲಿ ಕನಿಷ್ಟ ೧೦ ರಿಂದ ೨೦ ಸಾವಿರ ಜನ ಬಂದು ಹೋಗುತ್ತಾ ಇರುತ್ತಾರೆ. ಮೀನುಗಾರಿಕೆ ವ್ಯಾಪಾರ ಮಾಡಲು ಬರುವವರು, ಮೀನು ಹಿಡಿಯಲು ಬರುವವರು ಬಂದು ಹೋಗುತ್ತಾ ಇರುತ್ತಾರೆ. ಅಲ್ಲಿ ಇರುವುದು ಒಂದೇ ಒಂದು ಸರಕಾರಿ ಕ್ಯಾಂಟೀನ್. ಅದನ್ನು ಆಕ್ಷನ್ ಮಾಡಿ ಶ್ರೀಮಂತರಿಗೆ ಕೊಟ್ಟಿದ್ದಾರೆ. ಅಲ್ಲಿ ಬಂದಂಥ ಎಲ್ಲರಿಗೂ ಚಹಾ ಕೊಡುವುದಕ್ಕೆ ಪಾನೀಯಗಳನ್ನು ಸರಬರಾಜು ಮಾಡುವುದಕ್ಕೆ ಇವರಿಗೆ ಸಾಧ್ಯ ಇರುವುದಿಲ್ಲ. ಹೀಗಾಗಿ ಸಣ್ಣ ಸಣ್ಣ ಬಡವರು ಏನು ಮಾಡಿದ್ದಾರೆ ಎಂದರೆ, ದೂಡು ಅಂಗಡಿಗಳನ್ನು ಇಟ್ಟು, ಚಕ್ರ ಹಾಕಿಕೊಂಡು ದೂಡುವಂತಹ ಅಂಗಡಿಗಳನ್ನು, ಟೆಂಪೊರರಿಯಾಗಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುತ್ತಾರೆ. ಬಡ ಮೀನುಗಾರರಿಗೆ ಇದರಿಂದ ಬಹಳ ಅನುಕೂಲವಾಗಿದ್ದು ಅವರು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಇಂತಹ ಅಂಗಡಿಗಳು ಇರಬೇಕೆಂದು ಅವರೂ ಕೂಡಾ ಒಪ್ಪಿಕೊಳ್ಳುತ್ತಾರೆ. ಆದರೆ ಕಳೆದ ಮಳೆಗಾಲದಲ್ಲಿ ಅವರನ್ನು ಒಳಗೆ ಬರುವುದಕ್ಕೆ ಬಿಡಲಿಲ್ಲ. ನಾನು ಕಾನೂನಿಗೆ ವಿರುದ್ಧ ಮಾಡಿಕೊಂಡು ಈ ಬಡವರಿಗೆ ಒಳಗೆ ಹೋಗುವಂತೆ ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಸಹ ಹೇಳಿದ್ದೇನೆ. ಅಲ್ಲಿಯ ಅಧಿಕಾರಿಗಳು ಅವರು ಒಳಗೆ ಬರಲು ಸುತಾರಾಂ ಒಪ್ಪಿಗೆ ಕೊಡದೇ ಅವರನ್ನು ಹೊರಗೆ ಹಾಕುತ್ತಿದ್ದಾರೆ. ಇದರಿಂದ ಅವರಿಗೆ ಕಷ್ಟವಾಗಿದೆ. ಈ ವರ್ಷ ಕೂಡಾ ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಹೊರಗೇ ತಮ್ಮ ಅಂಗಡಿಗಳನ್ನು ಇಡಬೇಕೆಂದು ಹೇಳಿದ್ದಾರೆ. ಸರ್ಕಾರ ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಮಾತನಾಡುವವರೇ ತಮಗೆ ನಿಜವಾದ ಕಳಕಳಿ ಇದ್ದರೆ ಬಡವರು ದೂಡು ಅಂಗಡಿಗಳನ್ನು ಅಲ್ಲೇ ಇಟ್ಟುಕೊಂಡು ವ್ಯಾಪಾರ ಮಾಡುವುದಕ್ಕೆ ಬಿಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ,

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ ಈಗ ಪರ್ಸಿನ್ ಬೋಟ್‌ಗಳನ್ನು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ ಡಾಕ್ಟರ್ ಹೆಚ್. ಎಸ್. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೇವೆಂದು ಹೇಳಿದಿರಿ ಅದು ಸಮಿತಿ ಎಂದು ಕರೆಯುವುದಕ್ಕಿಂತ ಅದೊಂದು ಸಿಂಪೋಜಿಯಂ ಅಂತ ಮಾಡಿದ್ದೀರಿ. ಅದು ಸರಿಯಲ್ಲ. ಇದರ ಬಗ್ಗೆ ಒಂದು ಉನ್ನತ ಸಮಿತಿ ಮಾಡಿ ಅದರಲ್ಲಿ ಮೀನುಗಾರರ ಪ್ರತಿನಿಧಿಗಳು, ಪರ್ಸಿನ್ ಬೋಟ್ಸ್ ಇರುವಂತಹವರು ಅಧ್ಯಯನ ಮಾಡಿ ವರದಿ ಕೊಟ್ಟಿದ್ದರೆ ಆ ಬಗ್ಗೆ ಚರ್ಚೆ ಮಾಡೋಣ. ಅದನ್ನು ನೋಡೋಣ. ಈಗ ಆ ರೀತಿ ಏನಾದರೂ ಇದ್ದರೆ ಅದನ್ನು ಸರಿಯಾಗಿ ಪರಿಶೀಲನೆ ಮಾಡಿ ಪರ್ಸೀನ್ ಬೋಟ್‌ಗಳ ವಿಷಯದಲ್ಲಿ ಬ್ಯಾಂಕ್ ಬಡ್ಡಿ ಕೆ.ಎಸ್.ಎಫ್.ಸಿ. ಬಡ್ಡಿ ಎಲ್ಲಾ ಸೇರಿ ಅದು ಚಕ್ರಬಡ್ಡಿ ಆಗಿದೆ. ಈ ಸಾಲವನ್ನು ಮೀನುಗಾರರು ತೀರಿಸಲು ಆಗದೆ ಇರಬಹುದು. ಅವರು ಸಾಲ ತೀರಿಸಲಿಲ್ಲವೆಂದು ಈ ಸ್ಕೀಮನ್ನು ಎಕ್ಸ್‌ಪಾಂಡ್ ಮಾಡದೆ ನಿಲ್ಲಿಸಿರುವುದರ ಬಗ್ಗೆ ನನಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಮತ್ತು ಅವರು ಬ್ಯಾಂಕ್ ಬಾಕಿ ಇದ್ದರೆ ಅದನ್ನು ಕೊಡಬೇಕಾಗುತ್ತದೆ ಕೊಡುತ್ತಾರೆ. ಈಗಾಗಲೇ ಅವರು ಸುಮಾರು ೨೮ ಕೋಟಿ ರೂಪಾಯಿಗಳ ಸಾಲದಲ್ಲಿ ಸುಮಾರು ೨೪ ಕೋಟಿ ರೂಪಾಯಿಗಳನ್ನು ಬ್ಯಾಂಕಿಗೆ ಹಿಂದೆ ಕಟ್ಟಿದ್ದಾರೆ. ಇನ್ನು ಇರುವ ೪ ಕೋಟಿ ರೂಪಾಯಿಗಳು ಚಕ್ರ ಬಡ್ಡಿ. ಮತ್ತು ಡಿಫಾಲ್ಟ್ ಇಂಟ್ರೆಸ್ಟ್ ಹೆಚ್ಚಾಗುತ್ತದೆ. ತಾವು ತಮ್ಮ ಸರ್ಕಾರದಲ್ಲಿ ಕೃಷಿಕರಿಗೆ ಏನು ಮಾಡಿದ್ದೀರಿ ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದೀರಿ. ಇವರೂ ಸಹ ಬಡವರೇ. ಇವರಿಗೆ ಈ ಸ್ಕೀಮ್‌ನ್ನು ಏತಕ್ಕೆ ಎಕ್ಸ್‌ಟೆಂಡ್ ಮಾಡಬಾರದು? ಅವರಿಗೂ ಆ ಒಂದು ಅವಕಾಶ ಮಾಡಿ ಕೊಡಿ. ಇದಕ್ಕೆ ಮಾನ್ಯ ಮಂತ್ರಿಗಳು ಸರಿಯಾದ ಸ್ಪಷ್ಟೀಕರಣ ಕೊಡಬೇಕು. ಇನ್ನು ಟ್ರಾಲರ್ಸ್ ಬಗ್ಗೆ ಹೇಳುತ್ತಾ ೧೪ ಉದ್ದಿಮೆಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಅದು ಒಂದು ಭಾಗ. ಇನ್ನೊಂದು ಭಾಗ ಎಂದರೆ ಅದು ಮೀನುಗಾರರ ಅಭಿವೃದ್ಧಿಗೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಒಂದು ಸಿದ್ಧಾಂತ ಇದೆ. ಆ ಬಗ್ಗೆ ತಾವೇನು ಮೌಲ್ಯಮಾಪನ ಮಾಡಿದ್ದೀರಿ? ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಇನ್ನು ಹಿಂದೆ ದೊಡ್ಡ ದೊಡ್ಡ ಬಲೆಗಳನ್ನು ಇಟ್ಟುಕೊಂಡಿದ್ದವರ ಒಂದು ಗುಂಪು ಇತ್ತು, ಅವರೆಲ್ಲಾ ಈಗ ಪರ್ಸೀನ್ ಬೋಟ್ಸ್ ಮಾಡಿಕೊಂಡರು. ಆಮೇಲೆ ಬರುವವರು ಈ ಟ್ರಾಲರ್ಸ್ ಗುಂಪು. ಇವರಿಗೆ ಟ್ರಾಲರ್ಸನ್ನು ಸಬ್‌ಸಿಡಿ ರೇಟಿನಲ್ಲಿ ಕೊಟ್ಟರೆ ಮಾತ್ರ ಅವರು ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಆಗುವುದಿಲ್ಲ. ಈಗ ಬಿರ್ಲಾ ಟಾಟಾರವರು ಸಹ ಈ

ಉದ್ದಿಮೆ ಮಾಡಲು ಹೊರಟಿದ್ದಾರೆ. ನಮ್ಮ ಉದ್ದೇಶ ಅದಲ್ಲ ಮೀನುಗಾರರಿಗೆ, ಅದರಲ್ಲೂ ಯಾರು ಬಹಳ ದುರ್ಬಲವರ್ಗದವರು ಇದ್ದಾರೋ, ಶಕ್ತಿ ಇಲ್ಲದವರು ಇದ್ದಾರೋ ಅಂತಹವರಿಗೆ ಈ ಟ್ರಾಲರ್ಸನ್ನು ಸಬ್‌ಸಿಡಿ ರೇಟ್‌ನಲ್ಲಿ ಕೊಡಲಿಕ್ಕೆ ಸರ್ಕಾರದವರು ಏನಾದರೂ ಒಂದು ಸ್ಕೀಮ್ ಮಾಡುತ್ತೀರಾ ತಾವೀಗ ೧೪ ಉದ್ದಿಮೆಗಳನ್ನು ಮಾಡಿದ್ದೀರಿ. ಇಟ್‌ಮೇ ನಾಟ್ ಟೆಂಪ್ಟ್. ಇನ್ನು ಎರಡನೆಯದಾಗಿ ನಾನು ಈಗಾಗಲೇ ಹೇಳಿದ ಹಾಗೆ ಸರಿಯಾಗಿ ತಿಳಿದುಕೊಂಡಿದ್ದೀರೋ, ಇಲ್ಲವೋ ಗೊತ್ತಿಲ್ಲ. ಈ ಟ್ರಾಲರ್ಸ್‌ಗೆ ಇಂಪೋರ್ಟ್ ಮೆಷಿನ್ಸ್ ಅಳವಡಿಸಬೇಕೆಂದು ಇದೆ. ಆ ಮೆಷಿನ್ಸ್ ಈಗ ಒಂದು ಕೋಟಿ ರೂಪಾಯಿಗಳಾಗುತ್ತದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಇನ್ನೋವೇಟಿವ್ ಎಂಟರ್‌ಪ್ರಿಸರ್ಸ್ ೩೦-೪೦ ಲಕ್ಷ ರೂಪಾಯಿಗಳಲ್ಲಿ ಇಂಡಿಸಿಜಸ್ ಇಲ್ಲೇ ತಯಾರು ಮಾಡತಕ್ಕಂಥ ಮೆಷಿನ್ಸನ್ನು ಅಳವಡಿಸುತ್ತಿದ್ದಾರೆ. ಇದನ್ನು ನಬಾರ್ಡ್‌ನವರು ಒಪ್ಪುತ್ತಿಲ್ಲ. ತಾವು ನಬಾರ್ಡ್‌ನವರ ಹತ್ತಿರ ಡೈಲಾಗ್ ಮಾಡಿ ಈ ಮೆಷಿನ್ಸ್‌ನ್ನು ಒಪ್ಪಿಕೊಳ್ಳುವ ರೀತಿಯಲ್ಲಿ ಮಾಡುವುದಕ್ಕೆ ಯಾವ ರೀತಿಯ ಕಾರ್ಯಕ್ರಮವನ್ನು ಮಾಡಿದ್ದೀರಿ ಇನ್ನು ಪ್ರಾನ್ ಕಲ್ಚರ್ ಮಾಡುತ್ತೇವೆಂದು ಹೇಳಿದಿರಿ. ಈ ಸಮುದ್ರಕ್ಕೆ ನದಿ ನೀರು ಸೇರುವ ಜಾಗಕ್ಕೆ ನಾವು ಇನ್ನೀರು ಎಂದು ಹೇಳುತ್ತೇವೆ. ಅಂದರೆ ಬ್ಯಾಕ್ ವಾಟರ್. ಈ ಬಗ್ಗೆ ಕೇರಳದಲ್ಲಿ ಒಂದು ಯೋಜನೆಯನ್ನು ಮಾಡಿ ಅಭಿವೃದ್ಧಿ ಮಾಡುತ್ತಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿ ಸಹ ಮಾಡಿದ್ದಾರೆ. ಈ ಬ್ಯಾಕ್ ವಾಟರನ್ನು ಲೀಜ್‌ಗೆ ಕೊಡಬೇಕೆಂದು ಅದಕ್ಕೆ ತಾವು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದನ್ನು ಮಾಡಿದ್ದೀರಾ? ಇದರಿಂದ ಮೀನುಗಾರರಿಗೆ ಅನುಕೂಲವಾಗುತ್ತದೆ. ಮೀನುಗಾರರು ಇದನ್ನು ಲೀಜ್‌ಗೆ ಪಡೆದುಕೊಂಡು ಪ್ರಾನ್ ಕಲ್ಚರ್ ಮಾಡಿಕೊಳ್ಳಬಹುದು. ತಾವೊಂದು ಮಾಡಲ್ ಫಾರಮ್ ಮಾಡಿ. ಕೇರಳದಲ್ಲಿ ಮಾಡಿದ್ದಾರೆ. ಇದು ಉತ್ಪನ್ನ ತರತಕ್ಕಂಥಾದ್ದು. ಆಗ ಯಾರಾದರೂ ಬಂದು ಲೀಜ್‌ಗೆ ತೆಗೆದು ಕೊಳ್ಳುತ್ತಾರೆ.

೪-೩೦ ಪಿ.ಎಂ.

ಶ್ರೀಮಂತರಿಗೆ ನೀವು ಲೀಸ್‌ಗೆ ಕೊಟ್ಟರೆ ಅವರುಗಳು ಮೀನುಗಾರರಿಗೆ ಸಬ್ ಲೀಸ್‌ಗೆ ಕೊಡುತ್ತಾರೆ. ಆದ್ದರಿಂದ ನೇರವಾಗಿ ಲೆಜಿಟಮೇಟ್ ಇರುವವರಿಗೇ ನೀವು ಲೀಸ್ ಕೊಡಬೇಕು. ತಾವು ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು. ನಾನು ಹೇಳು ವುದನ್ನು ತಾವು ಬರೆದುಕೊಂಡರೆ ಉತ್ತರ ಕೊಡುವಾಗ ತಮಗೆ ಅನುಕೂಲವಾಗುತ್ತದೆ.

ಶ್ರೀ ಎಂ. ರಘುಪತಿ.—ನೀವು ಹೇಳಿ, ನಾನು ಉತ್ತರ ಕೊಡುತ್ತೇನೆ,

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಸಂಲಲಿತವಾಗಿಯೇ ಉತ್ತರ ಕೊಡುವವರೆಂದು ನನಗೆ ಗೊತ್ತು. ಆದರೆ, ಮೀನು ಇಲಾಖೆಯ ಬಗ್ಗೆ ಉತ್ತರ ಕೊಡುವಾಗ ಮೀನಿನ ಮುಳ್ಳು ಗಂಟಲಲ್ಲಿ ಸಿಕ್ಕಿ ಹಾಕಿಕೊಂಡರೆ ಹೇಗಾಗುತ್ತದೋ ಹಾಗೆ ಉತ್ತರ ಕೊಡುತ್ತಿದ್ದೀರಿ. ಸಮುದ್ರ ಪ್ರದೇಶದಲ್ಲಿ "ಸೀ ಬರ್ಡ್" ಪ್ರಾಜೆಕ್ಟ್ ಬೇರೆ ಬರುತ್ತಿದೆ. ಇದರ ಜೊತೆಗೆ ಸೂಪರ್ ಥರ್ಮಲ್ ಪ್ರಾಜೆಕ್ಟ್ ಸಹ ಬರುತ್ತಿದೆ, ಆದರಿಂದ ಮೀನುಗಾರರಿಗೆ ಯಾವುದೇ ರೀತಿಯ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕು. ಇಮೇಲೆ ಇನ್ನೂ ಒಂದು ಮಾತನ್ನು ತಾವು ಹೇಳಿದೀರಿ. ಮಂಗಳೂರು ಪೋರ್ಟ್ ಅಭಿವೃದ್ಧಿಗಾಗಿ ೧೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು. ನೀವು ೧೨ ಕೋಟಿ ರೂಪಾಯಿಗಳನ್ನು ಮಂಗಳೂರು ಪೋರ್ಟ್ ಅಭಿವೃದ್ಧಿಗಾಗಿ ಇಟ್ಟು ಈಗಾಗಲೇ ಮೂರೂವರೆ ವರ್ಷಗಳಾಯಿತು. ನನಗೆ ತಿಳಿದ ಪ್ರಕಾರ ಇದುವರೆಗ ಸುಮಾರು ೪೦ ಅಥವಾ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಉಳಿದ ಹಣವನ್ನು ಇನ್ನೆರಡು ವರ್ಷಗಳಲ್ಲಿ ಖರ್ಚು ಮಾಡುವುದಕ್ಕಾಗುತ್ತದೆಯೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಮಂಗಳೂರು ಪೋರ್ಟ್ ಅಭಿವೃದ್ಧಿಗಾಗಿ ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರೆಂದು ಹೇಳಬೇಕಾಗುತ್ತದೆ. ೧೨ ಕೋಟಿ ರೂಪಾಯಿಗಳನ್ನು ಈ ಕೆಲಸಕ್ಕಾಗಿ ಇಡಲಾಗಿದೆಯೆಂದು ಹೇಳಿ ನಮಗೆಲ್ಲಾ ಒಂದು ಆಸೆ ಹುಟ್ಟಿಸುತ್ತೀರಿ. ಆದರೆ ಖರ್ಚು ಮಾತ್ರ ಮಾಡುವುದಿಲ್ಲ. ಇದರ ಬಗ್ಗೆ ವಾಸ್ತವಿಕವಾದ ಚಿತ್ರವನ್ನು ನಮಗೆ ಕೊಟ್ಟರೆ ಒಳ್ಳೆಯದೆಂದು ಅನಿಸುತ್ತದೆ, ಹಿಂದೆ ನಮ್ಮ ಸರ್ಕಾರ ಇದ್ದಾಗ್ಗೆ ಮೀನುಗಾರರಿಗೆ "ಸಾಗರ ದೀಪ" ಎನ್ನುವ ಯೋಜನೆಯನು ಮಾಡಿ ಈ ಯೋಜಯು ಮೂಲಕ ಮೀನುಗಾರರಿಗೆ ಸಬ್ಸಿಡಿ ಹಣವನ್ನು

ಕೊಡಲಾಗುತ್ತಿತ್ತು. ಈ ಯೋಜನೆಯನ್ನು ಮುಂದುವರಿಸಲಿಕ್ಕೆ ಎಷ್ಟು ಹಣವನ್ನು ತಾವು ಕೊಟ್ಟಿದ್ದೀರೆಂದು ಹೇಳಬೇಕು. ಇದರ ಜೊತೆಗೆ ಮೀನುಗಾರರಸಲುವಾಗಿ ಹೊಸ ಸ್ಕೀಮುಗಳನ್ನು ಏನು ಹಾಕಿದ್ದೀರಿ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೊಡಿ. ಫಾರ್ಮರ್‍ಸ್ ಮಕ್ಕಳಿಗೆ ಯಾವ ರೀತಿ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ರಿಸರ್ವೇಷನ್‌ನ್ನು ಕೊಡಲಾಗುತ್ತದೆಯೋ ಅದೇ ರೀತಿ ಫಿಷರೀಸ್ ಕಾಲೇಜುಗಳಲ್ಲಿ ಮೀನುಗಾರರ ಕುಟುಂಬದಿಂದ ಬರುವ ಹುಡುಗರಿಗೆ ರಿಸರ್ವೇಷನ್ ಇಡಬೇಕು. ಮೀನುಗಾರರ ಕುಟುಂಬದಿಂದ ಬರುವ ಮಕ್ಕಳಿಗೆ ರಿಸರ್ವೇಷನ್ ಇಡುವುದಕ್ಕೆ ಇರುವ ತೊಂದರೆ ಏನು ? ನಾವು ಕೇಳಿದ ಪ್ರಶ್ನೆಗಳಿಗೆ ತಾವೇನೋ ಉತ್ತರವನ್ನು ಹೇಳುತ್ತೀರಿ. ಆದರೆ ಅದನ್ನು ಫಾಲೋ ಅಪ್ ಮಾಡುವುದಿಲ್ಲ. ಮೀನುಗಾರರ ಕುಟುಂಬದಿಂದ ಬರುವ ಹುಡುಗರಿಗೆ ಫಿಷರೀಸ್ ಕಾಲೇಜುಗಳಲ್ಲಿ ರಿಸರ್ವೇಷನ್ ಇಡುತ್ತೇವೆಂದು ಹೇಳಿದರೆ ಮಾತ್ರ ನಮಗೆ ತೃಪ್ತಿಯಾಗುತ್ತದೆ. ಸುಮ್ಮನೆ ನೀವು ಘೋಷಣೆ ಮಾಡುವುದರಿಂದ ಸಾರ್ಥಕವಾಗುವುದಿಲ್ಲ. ಇನ್ನು ಕೊನೆಯದಾಗಿ ಮೀನುಗಾರರಿಗೆ ವರ್ಷಕ್ಕೆ ನೂರು ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ತಾವು ಹೇಳಿದ್ದೀರಿ. ಅದರಂತೆ ಇದುವರೆಗೆ ಮನೆಗಳನ್ನು ಕಟ್ಟುವುದಕ್ಕೆ ಎಷ್ಟು ಜಾಗವನ್ನು ಅಕ್ವೈರ್ ಮಾಡಿಕೊಂಡಿದ್ದೀರೆಂದು ಹೇಳಬೇಕು ಮತ್ತು ಮನೆಗಳನ್ನು ಕಟ್ಟುವುದಕ್ಕೆ ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಒದಗಿಸಿದ್ದೀರೆಂದು ಕೇಳುತ್ತೇನೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಸಭಾಧ್ಯಕ್ಷರೇ, ಮೀನುಗಾರರ ಕುಟುಂಬದಿಂದ ಬರುವ ಹುಡುಗರಿಗೆ ಫಿಷರೀಸ್ ಕಾಲೇಜುಗಳಲ್ಲಿ ರಿಸರ್ವೇಷನ್ ಇರಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದನ್ನು ಮಾಡುತ್ತೇವೆಂದು ನಾನು ಹೇಳುತ್ತೇನೆ. ನಾನು ಮಾತು ಕೊಟ್ಟರೆ, ಆ ಮಾತಿನ ಪ್ರಕಾರ ನಡೆದುಕೊಳ್ಳುತ್ತೇನೆ. ನಾನು ವಿದ್ಯಾ ಇಲಾಖೆಯನ್ನು ನೋಡಿಕೊಂಡಾಗಲೂ, ಪ್ರವಾಸೋದ್ಯಮ ಇಲಾಖೆ ನೋಡಿಕೊಂಡಾಗಲೂ ನಾನು ಕೊಟ್ಟ ಆಶ್ವಾಸನೆಗಳನ್ನು ಫಾಲೋಅಪ ಮಾಡಿ ಕೆಲಸವನ್ನು ಮಾಡಿಸಿದ್ದೇನೆ. ಅದೇ ರೀತಿ ರಿಸರ್ವೇಷನ್ ಇರುವ ವಿಷಯದಲ್ಲೂ ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಚರ್ಚಿಸಿ ಈ ಕೆಲಸ ಆಗುವಂತೆ ಮಾಡುತ್ತೇನೆ, ಎರಡನೆಯದಾಗಿ ಶ್ರೀಮಾನ್ ಮೊಯಿಲಿಯವರು ಟ್ರಾವಲರ್‌ಸ್‌ಗಳು ಏನು ಇವೆಯೋ ಅವುಗಳನ್ನು ನವೀಕರಣ ಮಾಡುವುದಕ್ಕೆ ಹೇಳಿದ್ದಾರೆ. ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ನಬಾರ್ಡ್‌ನವರ ಜೊತೆ ಮಾತನಾಡಿ ಈ ದೇಶೀಯ ಟ್ರಾವಲರ್‌ಸನ್ನು ಅಕ್ಸೆಪ್ಟ್ ಮಾಡಬೇಕೆಂದು ಹೇಳುತ್ತೇನೆ. ಈ ಕೆಲಸ ಆಗುವುದಕ್ಕೆ ಅವರ ಜೊತೆ ಚರ್ಚೆ ಮಾಡುತ್ತೇನೆಂದು ಹೇಳುತ್ತೇನೆ. ಅಮೇಲೆ, ಇನ್ನೂ ಹಲವಾರು ಸಲಹೆಗಳನ್ನು ಮಾನ್ಯ ಮೊಯಿಲಿಯವರು ಕೊಟ್ಟಿದ್ದಾರೆ. ನಾನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಶಾಸಕರುಗಳನ್ನು ಕರೆದು ಇದರ ಬಗ್ಗೆ ಚರ್ಚಿಸುತ್ತೇನೆ, ಈಗಾಗಲೇ ಈ ತರಹ ಸಲಹಾ ಸಮಿತಿಯನ್ನು ಮೂರು ಸಾರಿ ಕರೆದು ಸಭೆ ಮಾಡಿದ್ದೇನೆ. ನನ್ನ ಇಲಾಖೆಗೆ ಸಂಬಂಧಪಟ್ಟ ಸಲಹಾ ಸಮಿತಿಯು ಮೂರು ಸಾರಿ ಸಭೆಯನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಎರಡೂ ಜಿಲ್ಲೆಯ ಶಾಸಕರನ್ನು ಕರೆದು ಅವರ ಜೊತೆಯಲ್ಲಿ ಚರ್ಚೆ ಮಾಡಿ ಆ ಯೋಜನೆಯನ್ನು ಯಾವ ರೀತಿಯಲ್ಲಿ ಜಾರಿಗೆ ತರಬೇಕೆಂದು ಬಗ್ಗೆ ಅವರ ಅಭಿಪ್ರಾಯಗಳನ್ನು ಪಡೆದುಕೊಳ್ಳುತ್ತೇನೆ ಹಾಗೆಯೇ ಸಾಗರ ದೀಪ ಯೋಜನೆಯು ಮಾನ್ಯ ಮೊಯಿಲಿಯವರ ಕಾಲದಲ್ಲಿ ಜಾರಿಗೆ ತಂದಿದ್ದರು. ಅದೊಂದು ಉತ್ತಮವಾದಂಥ ಕಾರ್ಯಕ್ರಮವಾಗಿದೆ. ಆ ಸಮಯದಲ್ಲಿ ಆ ಕಾರ್ಯಕ್ರಮವು ಮೂರು ವರ್ಷಗಳ ಅವಧಿಗೆ ಎಂದು ತಾವು ಘೋಷಣೆ ಮಾಡಿದ್ದೀರಿ. ಅದು ಅಲ್ಲಿಗೇ ನಿಂತು ಹೋಯಿತು, ಮತ್ತೆ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿದೆಯೋ ಎಂಬ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಅದನ್ನು ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ, ಹೋದ ವರ್ಷ ನಾವು ಏಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಒಂದು ಕೋಟಿ ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಹಣವನ್ನು ಇಟ್ಟಿದ್ದೇವೆ. ಅದನ್ನು ಖರ್ಚು ಮಾಡುತ್ತೇವೆ.

ಶ್ರೀ ಬಿ. ಎ. ಇದಿನಬ್ಬ.—ಅಧ್ಯಕ್ಷರೇ, ನಾನು ಮೊನ್ನೆ ಒಂದು ಸೂಚನೆಯನ್ನು ಕೊಟ್ಟಿದ್ದೆ. ಮೀನುಗಾರರ ಈ ಒಂದು ಪ್ರವೃತ್ತಿಯು ಬಹಳ ಒಳ್ಳೆಯ ರೀತಿಯಲ್ಲಿ ಮುಂದುವರಿಯಬೇಕಾದರೆ ಅಲ್ಲಿ ಒಂದು ಜೆಟ್ಟಿಯನ್ನು ಮಾಡಬೇಕೆಂದು ಹೇಳಿದ್ದೇನೆ, ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಂಗಳೂರಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ, ಆದರೆ ಅದರ ಕಾರ್ಯಾಚರಣೆಯಾಗಿಲ್ಲ. ಅದೇರೀತಿ ತಡೆಗೋಡೆಗಳನ್ನು

ಹಾಕುವುದು ಬಹಳ ಪ್ರಾಮುಖ್ಯವಾದ ವಿಚಾರ, ಅದನ್ನು ಮಾಡದಿದ್ದರೆ ಮೀನುಗಾರರು ಬದುಕುವುದಕ್ಕೆ ಆಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರದವರಿಗಾದರೂ ಹೇಳಿ ಅದನ್ನು ಮಾಡಿಸುವುದಕ್ಕೆ ಸಕಲ ಪ್ರಯತ್ನಗಳನ್ನು ಮಾಡಬೇಕು. ಇನ್ನು ಮೀನುಗಾರರ ಅಭಿವೃದ್ಧಿ ನಿಗಮ ಏನಿದೆ ಅಲ್ಲಿ ಅವಶ್ಯಕತೆಗಿಂತ ಹೆಚ್ಚು ಜನರನ್ನು ನೇಮಕ ಮಾಡಿಕೊಂಡಿದ್ದಾರೆ ಎಂಬ ದೂರು ಬಂದಿದೆ. ಅದರ ಬಗ್ಗೆ ಹೇಳಬೇಕು.

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ನಾನು ಉತ್ತರವನ್ನು ಕೊಡುವಾಗ ಮಾನ್ಯ ಸದಸ್ಯರು ಇರಲಿಲ್ಲ, ತಡೆಗೋಡೆ ಕಟ್ಟುವ ಕಾರ್ಯಕ್ರಮವನ್ನು ಈ ವರ್ಷ ಪ್ರಾರಂಭ ಮಾಡಬೇಕೆಂದಿದ್ದೇವೆ. ಮಾನ್ಯ ಇದಿನಬ್ಬನವರು ಏನೊಂದು ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳಿಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯವಾಯಿತು.

ಅಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> ''೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ : ೫೫ ಮತ್ತು ೪೮ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಈ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡಬೇಕು.''

ಪ್ರಸಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಅಭಿಯಾಚನೆ ಕ್ರಮಾಂಕ : ೫೫—ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು, ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ : ೪೮—ರೇವು ಮತ್ತು ಜಲಸಾರಿಗೆ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—೧೯೮೮-೮೯ನೇ ಸಾಲಿಗೆ ಸಂಬಂಧಿಸಿದಂತೆ ಬೇಡಿಕೆಗಳ ಸಂಖ್ಯೆ ೭–೧೩ರ ಮೇಲೆ ನಡೆದ ಚರ್ಚೆಗೆ ಗಣಿ ಮತ್ತು ಭೂ ವಿಜ್ಞಾನ ಮತ್ತು ಯುವಜನ ಸೇವಾ ರಾಜ್ಯಮಂತ್ರಿಯವರಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು. ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಪ್ರಾರಂಭಿಸುವುದು.

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ನನಗೆ ಸಂಬಂಧಪಟ್ಟಿರತಕ್ಕಂಥ ಎರಡು ಬೇಡಿಕೆಗಳಾದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಈ ಇಲಾಖೆಯು ಬಹಳ ಹಳೆಯ ಇಲಾಖೆ ಎಂದು ಹೇಳಬಹುದು. ೧೮೯೪ನೇ ಇಸವಿಯಲ್ಲಿ ಮೈಸೂರು ಜಿಯಾಲಜಿಕಲ್

ಇಲಾಖೆ ಎಂದು ಇದು ಪ್ರಾರಂಭವಾಯಿತು. ಬೇರೆ ರಾಜ್ಯಗಳಲ್ಲಿ ಅಂತರ್‌ಜಲ ಮತ್ತು ಖನಿಜ ಸಂಪತ್ತುಗಳಿಗೆ ಸಂಬಂಧಪಟ್ಟಿರತಕ್ಕಂಥ ಬೇರೆ ಬೇರೆ ಇಲಾಖೆಗಳು ಇದ್ದರೂ ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಇಲಾಖೆಗೆ ಒಬ್ಬರೇ ಡೈರೆಕ್ಟರ್ ಇದ್ದು ಆ ಕೆಲಸವನ್ನು ಮಾಡುತ್ತಾ ಇದ್ದಾರೆ, ಈ ಇಲಾಖೆಯವರು ರಾಜ್ಯದಲ್ಲಿ ಖನಿಜ ನಿಕ್ಷೇಪಗಳ ಸಮೀಕ್ಷೆ ಹಾಗೂ ಅಂತರ್‌ಜಲಸಂಪತ್ತು ಮತ್ತು ಅದರ ಬಳಕೆ ಬಗ್ಗೆ ತಾಂತ್ರಿಕ ಸಲಹೆಗಳನ್ನು ಕೊಡುವುದು ಈ ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಇದನ್ನು ಎರಡು ಅಂಗಗಳಾಗಿ ವಿಭಾಗಿಸಬಹುದು. ಒಂದು ಅಂಡರ್‌ಗ್ರೌಂಡ್ ವಾಟರ್ ವಿಭಾಗ, ಇನ್ನೊಂದು ಮಿನರಲ್ಸ್ ವಿಭಾಗ ಖನಿಜಗಳ ವಿಭಾಗದಲ್ಲಿ ಮುಖ್ಯವಾಗಿ ಭೂಮಿಯಲ್ಲಿ ಅಡಕವಾಗಿರ ತಕ್ಕಂಥ ಖನಿಜಗಳನ್ನು ಪತ್ತೆ ಮಾಡುವುದು, ಅದನ್ನು ಹೊರಗೆ ತೆಗೆಯುವುದು, ಖನಿಜಗಳ ಮೇಲಿನ ರಾಜಸ್ವವನ್ನು ವಸೂಲು ಮಾಡುವುದು, ಖನಿಜಗಳನ್ನು ಗುತ್ತಿಗೆಗೆ ಕೊಡುವುದು ಮುಂತಾದವುಗಳು ಈ ಇಲಾಖೆಯ ಮುಖ್ಯ ಕಾರ್ಯವಾಗಿದೆ. ಈ ಖನಿಜ ಇಲಾಖೆಗೆ ಬಹಳ ಮಹತ್ವ ಬಂದಿರುವುದಲ್ಲದೆ ಇದರಲ್ಲಿ ಸಿಬ್ಬಂದಿ ಕೊರತೆ ಹೆಚ್ಚಿನ ಪ್ರಮಾಣದಲ್ಲಿದ್ದು ಇದನ್ನು ನಿವಾರಣೆ ಮಾಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನಿಸಿದ್ದು ಆದಷ್ಟು ಬೇಗ ಇದು ಇತ್ಯರ್ಥ ಆಗುತ್ತದೆ.

ಇನ್ನು ಅಂತರ್ಜಲ ವಿಭಾಗದಲ್ಲಿ ಭೂಮಿಯಲ್ಲಿರುವ ನೀರನ್ನು ಕಂಡುಹಿಡಿದು ಅದರ ಗುಣಮಟ್ಟ ಮತ್ತು ಯಾವ ಜಾಗ ಎಂದು ರೈತರಿಗೆ ತೋರಿಸಬೇಕಾದ ಪಾಯಿಂಟ್ ಮುಂತಾದವುಗಳ ಬಗ್ಗೆ ಮಹತ್ವವಾದ ಪಾತ್ರವನ್ನು ಈ ವಿಭಾಗ ಹೊಂದಿದೆ. ಮೊದಲಿಗೆ ಈ ಮಿನರಲ್ ಸೆಕ್ಷನ್‌ಗೆ ಅಷ್ಟು ಮಹತ್ವ ಇರಲಿಲ್ಲ. ಯಾವಾಗ ಕಪ್ಪು ಮತ್ತು ಕೆಂಪು ಕಲ್ಲುಗಳ ಹಾವಳಿ ಶುರುವಾಯಿತೋ ಆಗ ಅದರ ಪ್ರಭಾವ ಜಾಸ್ತಿಯಾಯಿತು. ಏಕೆಂದರೆ ಮೊದಲು ಇಲ್ಲಿ ೫ ಕೋಟಿ ಆದಾಯವಿದ್ದರೆ ಇತ್ತೀಚೆಗಾಗಿ ೧೧ ಕೋಟಿಗೆ ಏರಿದೆ. ಈ ಕಪ್ಪು ಮತ್ತು ಕೆಂಪು ಕಲ್ಲುಗಳ ಬಗ್ಗೆ ಹೇಳುವುದಾದರೆ ಇದು ವಿವಾದಾತ್ಮಕ ವಿಷಯವಾಗಿದೆ, ಏಕೆಂದರೆ ನಮ್ಮ ಕಾಯಿದೆಯಲ್ಲೇ ಬಹಳ ನ್ಯೂನತೆಗಳು ಇರುವುದರಿಂದ ಯಾರಿಗೆ ಎಲ್ಲೆಲ್ಲಿ ಗಣಿ ಮಾಡಬೇಕೆಂದು ಮನಸ್ಸಾಗುವುದೋ ಅಲ್ಲೆಲ್ಲಾ ಗಣಿ ತೋಡುತ್ತಿದ್ದಾರೆ. ಇದು ಇಲಾಖೆಯ ನ್ಯೂನತೆಯಲ್ಲ. ೭೭ನೇ ಇಸವಿಯಲ್ಲಿ ಹೈಕೋರ್ಟ್ ಆಜ್ಞೆಯಿಂದಾದದ್ದು. ಈಗ ಅದಕ್ಕೆ ತಿದ್ದುಪಡಿ ಮಾಡಲು ಕೆಲವು ಪ್ರಸ್ತಾವನೆ ತಯಾರಾಗಿದ್ದು ಅದು ಲಕ್ಷ್ಮೀಸಾಗರ್‌ರವರ ಇಲಾಖೆಯ ಮುಂದಿದೆ. ಇದಲ್ಲದೆ ಅಂತರ್ಜಲ ವಿಭಾಗಕ್ಕೆ ಕರ್ನಾಟಕದಲ್ಲಿ ಸಂಬಂಧಪಟ್ಟ ಹಾಗೆ ಕೆಲವು ವಲಯ ಗಳನ್ನು ಅಂದರೆ ಕಪ್ಪು ವಲಯ ಮತ್ತು ಬೂದು ವಲಯಗಳೆಂದೂ ವಿಂಗಡಿಸಲಾಗಿದೆ, ಇವರ ಪ್ರಕಾರ ಕಪ್ಪು ಭಾಗಗಳು ಬೆಂಗಳೂರು ತಾಲೂಕಿನ ಜೀವನಹಳ್ಳಿ, ಹೊಸಕೋಟೆ ಕೋಲಾರ ಜಿಲ್ಲೆಯಲ್ಲಿ ಕೋಲಾರ, ಬೆಳಗಾಂ ಜಿಲ್ಲೆಯಲ್ಲಿ ರಾಯಬಾಗ್, ಚಿತ್ರದುರ್ಗ ಜಿಲ್ಲೆಯಲ್ಲಿ ಮೊಳಕಾಲ್ಮೂರು. ಬೂದುವಲಯಗಳೆಂದರೆ ಬೆಳಗಾಂ ಜಿಲ್ಲೆಯಲ್ಲಿ ಚಿಕ್ಕೋಡಿ, ಕೋಲಾರದಲ್ಲಿ ಬಾಗೇಪಲ್ಲಿ, ಬಂಗಾರಪೇಟೆ, ಮಾಲೂರು ಕೋಲಾರದಲ್ಲಿ ಶಿಡ್ಲಘಟ್ಟ ಮತ್ತು ಉತ್ತರ ಕನ್ನಡದಲ್ಲಿ ಕುಮಟಳ, ದಕ್ಷಿಣ ಕನ್ನಡದಲ್ಲಿ ಮಂಗಳೂರು ಈ ಪರಿಗಣನೆಯಂತೆ ಕರ್ನಾಟಕ ರಾಜ್ಯದಲ್ಲಿ ರೈತರಿಗೆ ಬಹಳ ತೊಂದರೆಯಾಗಿದೆ ಎಂದು ಸದಸ್ಯರು ಒತ್ತಿ ಹೇಳಿದ್ದಾರೆ. ಇದರ ಬಗ್ಗೆ ರೀಸರ್ವೆ ಮಾಡಬೇಕೆಂದು ತೀರ್ಮಾನ ಮಾಡಿದ್ದು ನಾಲ್ಕು ತಾಲ್ಲೂಕುಗಳಲ್ಲಿ ಕೆಲಸ ಕೈಗೆತ್ತಿಕೊಂಡಿದ್ದೇವೆ. ಇದನ್ನು ಸಾಧ್ಯವಾದಷ್ಟು ಬೇಗ ಮುಗಿಸು ತ್ತೇವೆ. ನಮ್ಮ ಇಲಾಖೆಯ ಕೆಲವು ಕೆಲಸವನ್ನು ನಬಾರ್ಡ್‌ನವರು ಮಾಡುತ್ತಾರೆ ಅದಕ್ಕೆ ನಾವು ಸಲಹೆ ಕೊಡುತ್ತೇವೆ ಅಷ್ಟೆ. ಈ ಕೆಲಸಗಳಿಂದ ರೈತರಿಗೆ ತೊಂದರೆಯಾಗಿದ್ದು ಅದನ್ನು ನಿವಾರಣೆ ಮಾಡುವು ದಕ್ಕೆ ಪ್ರಯತ್ನ ಮಾಡುತ್ತೇನೆ.

ಭೂಮಿಯಲ್ಲಿ ನೀರು ಯಾವ ಮಟ್ಟದಲ್ಲಿದೆ ಭೂಮಿಯಲ್ಲಿ ಅಡಕವಾಗಿರತಕ್ಕಂತಹ ಕಲ್ಲಿನ ಪ್ರಮಾಣ ಗುಣ ಎಂಥಾದ್ದು ಎಂಬುದನ್ನು ಇದರಿಂದ ತಿಳಿದುಕೊಳ್ಳಲಿಕ್ಕೆ ಅನುಕೂಲವಾಗುತ್ತದೆ. ಇದು ಅತ್ಯಂತ ಆಧುನಿಕವಾದಂತಹ ವಿಧಾನವೆಂದು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯವನ್ನು ೫ ಭಾಗಗಳಾಗಿ ವಿಂಗಡಿಸಿ ಅಂದರೆ ಉತ್ತರ ಕರ್ನಾಟಕದಲ್ಲಿ ೩ ಭಾಗಗಳು, ದಕ್ಷಿಣ ಕನ್ನಡದಲ್ಲಿ ೨ ಭಾಗಗಳಾಗಿ ವಿಂಗಡಿಸಿ ಈ ಕಾರ್ಯಕ್ರಮವನ್ನು ಸಧ್ಯದಲ್ಲಿಯೇ ಕೈಗೊಂಡು ಸರ್ವೆ ಮಾಡುವ ಕೆಲಸವನ್ನು ಪ್ರಾರಂಭ ಮಾಡುತ್ತೇ ವೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ, ಇಷ್ಟೇ ಅಲ್ಲದೆ ಇನ್ನೂ ಅನೇಕ ಹಿರಿಯ ಸದಸ್ಯರುಗಳು ನನ್ನ ಇಲಾಖೆಯ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ ಮತ್ತು ಈ ಇಲಾಖೆಯಲ್ಲಿರತಕ್ಕಂತಹ ಕೊರತೆಗಳ ಬಗ್ಗೆ, ಲಂಚದ ಹಾವಳಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಈ ಇಲಾಖೆಯಲ್ಲಿ ಕೆಲವು ನ್ಯೂನತೆಗಳು ಇವೆ ಅದನ್ನು ಸಾಧ್ಯವಾದ ಮಟ್ಟಿಗೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ

ಚಿನ್ನಪ್ಪನವರು ಈ ಇಲಾಖೆಗೆ ಬರೀ ೫ ಕೋಟಿ ರೂಪಾಯಿಗಳು ಮಾತ್ರ ಇದೆ, ಇದಕ್ಕೆ ಮಂತ್ರಿಗಳು ಏಕೆ ಬೇಕು ಎಂದು ಹೇಳಿದ್ದಾರೆ. ಈ ಇಲಾಖೆಯಲ್ಲಿ ೫ ಕೋಟಿ ಅಲ್ಲ ೧೧ ಕೋಟಿ ರೂಪಾಯಿಗಳ ಆದಾಯ ಬರುತ್ತದೆ ಇದು ರೈತರಿಗೆ ಬಹಳ ಮುಖ್ಯವಾಗಿರತಕ್ಕಂಥಾದ್ದು ಇಲ್ಲಿ ಒಬ್ಬ ಮಂತ್ರಿಯಾಗಿ ಇರುವುದು ತಪ್ಪೇನು ಅಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೈಸೂರು ಜಿಲ್ಲೆಯ ಚಾಮರಾಜ ನಗರ ಕ್ಷೇತ್ರದಲ್ಲಿ ಅಕ್ರಮವಾಗಿ ಖನಿಜ ಸಂಪತ್ತು ಕಳಿಸುತ್ತಿದ್ದಾರೆ ಎಂದು ಮಾನ್ಯ ಚಿನ್ನಪ್ಪನವರು ಹೇಳಿದ್ದಾರೆ. ಅಕ್ರಮವಾಗಿ ಸಾಗಿಸತಕ್ಕಂತಹ ಕೆಲಸದಲ್ಲಿ ಸರಕಾರದ, ಅಧಿಕಾರಿಗಳ ಕೈವಾಡವಿಲ್ಲ ಹೈಕೋರ್ಟಿನವರು ಹೋದ ವರ್ಷ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಭೂಮಿಯಲ್ಲಿರತಕ್ಕಂತಹ ಕಪ್ಪು ಕಲ್ಲುಗಳು ಕರ್ನಾಟಕ ರಾಜ್ಯದಲ್ಲಷ್ಟೇ ಅಲ್ಲ ಹಳೆಯ ಮದ್ರಾಸ್‌ಗೂ ಅನ್ವಯಿಸುತ್ತದೆ. ಭೂಮಿಯಲ್ಲಿರತಕ್ಕಂತಹ ಖನಿಜಗಳನ್ನು ತೆಗೆಯುವುದನ್ನು ತಡೆಯಲಿಕ್ಕೆ ಸರಕಾರಕ್ಕೆ ಯಾವ ಒಂದು ಅಧಿಕಾರವೂ ಇಲ್ಲವೆಂದು ಸ್ಪಷ್ಟವಾಗಿ ಆಜ್ಞೆಯನ್ನು ಹೊರಡಿಸಿದ ಮೇಲೆ ಈ ರೀತಿಯಾಗಿದೆ. ಈ ಇಲಾಖೆಯಲ್ಲಿನ ಕೆ.ಎಂ.ಸಿ. ರೂಲ್ ಏನು ಇದೆ ಅದನ್ನು ತಿದ್ದುಪಡಿ ಮಾಡಬೇಕಾಗಿದೆ. ತಿದ್ದುಪಡಿ ಮಾಡಿ ಸರಿಪಡಿಸುತ್ತೇನೆಂದು ಹೇಳಲಿಕ್ಕೆ ಬಯಸುತ್ತೇನೆ, ಇನ್ನು ಖನಿಜ ಸರ್ವೇಕ್ಷೆಯನ್ನು ವೈಜ್ಞಾನಿಕವಾದ ರೀತಿಯಲ್ಲಿ ಮಾಡುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಆ ರೀತಿ ಹೇಳತಕ್ಕಂಥಾದ್ದು ಸರಿಯಲ್ಲ, ಖನಿಜ ಸರ್ವೇಕ್ಷೆಯನ್ನು ಮಾಡುವುದರಲ್ಲಿ ಇಲಾಖೆಯ ಎಲ್ಲಾ ಅಧಿಕಾರಿಗಳೂ ಕೂಡ ತರಬೇತಿಯನ್ನು ಪಡೆದಿದ್ದಾರೆ. ಬೇಕಾದಷ್ಟು ಖನಿಜ ಸಂಪತ್ತನ್ನು ಕಂಡು ಹಿಡಿದಿದ್ದಾರೆ. ಕರ್ನಾಟಕದಲ್ಲಿ ೨೦ ಸಿಮೆಂಟ್ ಕಾರ್ಖಾನೆಗಳು ಇದೆ ಇದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ರಾಜ್ಯದಲ್ಲಿ ದೊರೆಯುವ ಕೆಂಪು ಹರಳನ್ನು ಪರಿಷ್ಕರಿಸಿ ಕೈಗಾರಿಕೆಯನ್ನು ಪ್ರಾರಂಭ ಮಾಡಬೇಕೆಂದು ಚಿನ್ನಪ್ಪನವರು ಹೇಳಿದ್ದಾರೆ. ರೂಬಿ ಎಂದು ಏನು ಹೇಳುತ್ತೇವೆ ಅದು ತುಮಕೂರು ಜಿಲ್ಲೆಯ ಅಕ್ಕಪಕ್ಕದಲ್ಲಿ ಸಿಗತಕ್ಕಂತಹ ಅತ್ಯಂತ ಬೆಳೆ ಬಾಳುವ ಹರಳು ಮೈಸೂರು ಮಿನರಲ್ಸ್ ಮತ್ತು ನಮ್ಮ ಇಲಾಖೆಯವರು ಇದರ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಅಭ್ಯಾಸ ಮಾಡಿದ್ದಾರೆ. ಫ್ಯಾಕ್ಟರಿಗಳನ್ನು ಹಾಕಿದರೆ ಅದು ವಯಬಲ್ ಅಲ್ಲವೆಂದು ಹೇಳಿದ್ದಾರೆ. ಆದರೂ ಸಹ ಬೇರೆಯವರಿಗೆ ಗುತ್ತಿಗೆ ಕೊಟ್ಟು ಸರಕಾರ ಹಣ ಪಡೆಯಬಹುದೆಂದು ಸಲಹೆ ಕೊಟ್ಟಿದ್ದಾರೆ ಅದನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇನ್ನು ಮಾನ್ಯ ನೀಲಕಂಠಪ್ಪನವರು ಒಂದೆರಡು ಸಲಹೆಗಳನ್ನು ಕೊಟ್ಟಿದ್ದಾರೆ. ಕೆಲವು ಜನರಿಗೆ ಮಾತ್ರ ಈ ಇಲಾಖೆಯಿಂದ ಅನುಕೂಲವಾಗುತ್ತದೆ ಇದು ಕೆಲವು ಜನರ ಹಿಡಿತದಲ್ಲಿದೆ ಬಡವರಿಗೆ ಸಹಾಯವಾಗುವುದಿಲ್ಲ ಅವರಿಗೆ ಗುತ್ತಿಗೆಗಳು ಸಿಗುವುದಿಲ್ಲವೆಂದು ಹೇಳಿದ್ದಾರೆ ಅವರ ಸಲಹೆಯನ್ನು ಕೂಡ ಗಮನದಲ್ಲಿಟ್ಟುಕೊಳ್ಳುತ್ತೇನೆ ಮುಂದೆ ಗುತ್ತಿಗೆಗಳನ್ನು ಕೊಡುವಾಗ ಬಡವರಿಗೆ ಸಹಾಯ ಮಾಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ೧೦೦ ವೆಲ್ ಸ್ಕೀಮ್ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಿದ್ದಾರೆ ಅದು ನನ್ನ ಇಲಾಖೆ ಸಂಬಂಧಪಡುವುದಿಲ್ಲ, ಗ್ರಾಮೀಣಾಭಿವೃದ್ಧಿ ಇಲಾಖೆಯವರು ಅದನ್ನು ಮಾಡುತ್ತಾರೆ ನ್ಯೂನತೆಗಳು ಏನಾದರೂ ಇದ್ದರೆ ಸರಿಪಡಿಸುತ್ತೇನೆ. ಸಂಪೂರ್ಣವಾಗಿ ನನಗೆ ಅದರ ಸಂಬಂಧ ಬರುವುದಿಲ್ಲ.

ಶ್ರೀ ಯು. ಭೂಪತಿ.—ನೀರು ಇದೆಯೋ ಇಲ್ಲವೋ ಎಂದು ಹೇಳತಕ್ಕಂಥಾದ್ದು ತಾವೇ.

ಶ್ರೀ ಕೆ.ಬಿ. ಶಾಣಪ್ಪ.—ನೀರು ತೋರಿಸಲಿಕ್ಕೆ ತಾವು ಒಪ್ಪಿದರೆ ಮಾತ್ರ ಮಾಡುತ್ತಾರೆ,

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅದನ್ನು ಬೇಕಾದರೆ ಸರಿಪಡಿಸುತ್ತೇನೆ.

ಮಾನ್ಯ ಸದಸ್ಯರಾದ ಚಂದ್ರಕಾಂತ್ ಬೆಲ್ಲದ್ ಅವರು ಪ್ರಸ್ತುತದಲ್ಲಿ ಗಣಿ, ಈ ಮೂರು ಇಲಾಖೆಗಳಿಗೂ ಸಂಬಂಧಪಡುತ್ತದೆ. ಎಂದು ಹೇಳಿದ್ದಾರೆ. ರೆವಿನ್ಯೂ ಇಲಾಖೆಗೂ ಸಂಬಂಧಪಡುತ್ತದೆ ಫಾರೆಸ್ಟ್ ಇಲಾಖೆಗೂ ಸಂಬಂಧಪಡುತ್ತದೆ, ನಿಮ್ಮ ಇಲಾಖೆಗೂ ಸಂಬಂಧಪಡುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಇದರಲ್ಲಿ ಬಹಳ ನ್ಯೂನತೆಗಳು ಕಂಡುಬರುತ್ತವೆ ಎಂದು ಮಾನ್ಯ ಸದಸ್ಯರಾದ ಚಂದ್ರಕಾಂತ ಬೆಲ್ಲದ್ ಅವರು ಹೇಳಿದ್ದಾರೆ. ಇದು ಸತ್ಯಾಂಶ ಇದೆ. ಇವತ್ತು ರೆವಿನ್ಯೂ ಲ್ಯಾಂಡ್‌ನಲ್ಲಿರತಕ್ಕಂಥ ಲ್ಯಾಂಡನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ನೋಡುತ್ತಿದ್ದಾರೆ, ಫಾರೆಸ್ಟ್‌ಗೆ ಬರತಕ್ಕಂಥ ಎಲ್ಲಾ ಖನಿಜಗಳಿಗೂ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರೇ ಗುತ್ತಿಗೆಯನ್ನು ಕೊಡುತ್ತಾರೆ, ಸರ್ಕಾರಿ ಜಮೀನಿನಲ್ಲಿರತಕ್ಕಂಥಾದುಕ್ಕೆ ನಮ್ಮ ಇಲಾಖೆಯವರು ಗುತ್ತಿಗೆಯನ್ನು ಕೊಡುತ್ತಾರೆ. ಆದ್ದರಿಂದ ಇಲ್ಲಿ ಕೆಲವು ನ್ಯೂನತೆಗಳು ಕಂಡುಬರುತ್ತದೆ. ಇದನ್ನು ಸರಿ ಮಾಡಲಿಕ್ಕೆ ಮೂರು ಇಲಾಖೆಗಳನ್ನು ಸೇರಿಸಿ ಒಂದೇ ಹಾದಿಯಲ್ಲಿ ತೆಗೆದುಕೊಂಡು ಹೋಗಬೇಕು ಎಂದು ಪ್ರಸ್ತಾವನೆಯನ್ನು ಅವರು ಹೇಳಿದ್ದಾರೆ. ಇದು

ಈಗಾಗಲೇ ಸರ್ಕಾರದ ಮುಂದೆ ಇದೆ, ಸಾಧ್ಯವಾದಷ್ಟು ಬೇಗ ನಾನು ಇದನ್ನು ಇತ್ಯರ್ಥ ಮಾಡುತ್ತೇನೆ ಎಂದು ಹೇಳುತ್ತೇನೆ. ಈ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಹೆಚ್ಚಿನ ಮಾಹಿತಿ ಇರತಕ್ಕಂಥ ಮಾನ್ಯ ಸದಸ್ಯರಾದ ಭೂಪತಿಯವರು ಬಹಳ ಒಳ್ಳೆಯ ಸಲಹೆಗಳನ್ನು ಈ ಇಲಾಖೆಯ ಮೇಲೆ ಕೊಟ್ಟು ಬೆಳಕನ್ನು ಚೆಲ್ಲಿದ್ದಾರೆ. ಮೊಟ್ಟಮೊದಲು ಅವರು ಹೇಳಿರತಕ್ಕಂಥದ್ದು ಶಾಸನಸಭೆಗಳಿಗೆ ಒದಗಿಸಿರುವ ಮಾಹಿತಿಗಳಲ್ಲಿ ಇಲಾಖೆಯ ಒಳಾಡಳಿತಕ್ಕೆ ಸಂಬಂಧಿಸಿದ ಬಗ್ಗೆ ಸಾಕಷ್ಟು ಪ್ರಾಮುಖ್ಯತೆ ಇಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ, ಆದರೆ ಈ ಇಲಾಖೆ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿರುವುದರಿಂದ ಅವರ ಒಂದು ಕೈಪಿಡಿಯಲ್ಲಿ ಇದನ್ನು ಪ್ರಿಂಟ್ ಮಾಡಿದ್ದೇವೆ, ಮುಂದಿನ ಸಲ ಆ ರೀತಿ ಆಗದ ಹಾಗೆ ಜವಾಬ್ದಾರಿ ವಹಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಎರಡನೆಯದಾಗಿ ಏನು ಹೇಳಿದ್ದಾರೆಂದರೆ ಮಿನರಲ್ಸ್ ವಿಭಾಗ ಹಾಗೂ ಅಂತರಜಲ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ವಿವರಗಳನ್ನು ಸಲ್ಲಿಸಿಲ್ಲ ಎಂದು ಹೇಳಿದ್ದಾರೆ. ಬಹಳ ಜನ ಅಧಿಕಾರಿಗಳೆಲ್ಲರೂ ಮಿನರಲ್ಸ್ ಸೆಕ್ಷನ್‌ನಲ್ಲಿ ಕೆಲಸ ಮಾಡುವುದಕ್ಕೆ ಇಷ್ಟಪಡುತ್ತಾರೆ ಎಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಇದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುವುದಿಲ್ಲ. ಈ ಸಲ ಅಧಿಕಾರಿಗಳ ಒಂದು ಬದಲಾವಣೆಯನ್ನು ಮಾಡುವಾಗ ಬಹಳ ಮುನ್ನೆಚ್ಚರಿಕೆಯನ್ನು ವಹಿಸಿ ಆ ನ್ಯೂನತೆಗಳನ್ನು ಕಂಡುಹಿಡಿದು ಅವರನ್ನು ಅಲ್ಲಿಂದ ತೆಗೆದುಹಾಕುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಮೂರನೆಯದು ಅವರು ಎತ್ತಿರತಕ್ಕಂಥ ಪ್ರಶ್ನೆ ಹೆಚ್ಚಿನ ಪ್ರಮಾಣದಲ್ಲಿ ಅತಿಕ್ರಮವಾಗಿ ಖನಿಜಗಳನ್ನು ವಶಪಡಿಸಿಕೊಂಡಿದ್ದಾರೆ. ಅದನ್ನು ಸರಿಯಾಗಿ ಫೌಂಡ್ರಿಯಲ್ಲಿ ಫಿಕ್ಸ್ ಮಾಡಿಲ್ಲ ಎಂದು ಹೇಳಿದ್ದಾರೆ. ಎಲ್ಲೆಲ್ಲಿ ಆ ನ್ಯೂನ್ಯತೆಗಳು ಇದೆ ಅವುಗಳನ್ನು ಕಂಡುಹಿಡಿದು ಅವರ ಅರ್ಜಿಗಳನ್ನು ತೆಗೆದುಕೊಂಡು ರಿಸರ್ವ್ ಮಾಡಿ ಫೌಂಡ್ರಿಗಳಲ್ಲಿ ಫಿಕ್ಸ್ ಮಾಡಿಕೊಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರ ಗಮನದಲ್ಲಿ ಬೇರೆ ಯಾವುದಾದರೂ ನಿರ್ದಿಷ್ಟವಾದಂಥ ಘಟನೆಗಳು ಇದ್ದು, ಅವುಗಳನ್ನು ಕೊಟ್ಟರೆ ಅದನ್ನು ನಾನು ಬಗೆಹರಿಸಿಕೊಡುತ್ತೇನೆಂದು ಮಾನ್ಯ ಸದಸ್ಯರಾದ ಭೂಪತಿಯವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಭೂಪತಿಯವರು ಖನಿಜಗಳ ಹಕ್ಕಿಗೆ ಸಂಬಂಧಿಸಿದ ತೆರಿಗೆಯನ್ನು ಜಿಲ್ಲಾ ಪರಿಷತ್ತಿನವರಿಗೆ ನೀವು ಇನ್‌ಸ್ಟ್ರಕ್ಷನ್ ಕೊಟ್ಟು ಮಂಡಲದವರಿಗೆ ಕಲೆಕ್ಟ್ ಮಾಡಬೇಡ ಎನ್ನುವ ಅಭಿಪ್ರಾಯವನ್ನು ಹೇಳಿದ್ದಾರೆ. ಅದು ನಿಜ. ಆದರೆ ಅದನ್ನು ಕೊಟ್ಟಿರತಕ್ಕಂಥ ಆರ್ಡರ್ ಮಾಡಿದ್ದು ನಾವಲ್ಲ. ಹೈಕೋರ್ಟ್‌ನಲ್ಲಿ ಒಂದು ತಡೆಯಾಜ್ಞೆ ಇರುವುದರಿಂದ ಆ ರೀತಿ ಸ್ವಲ್ಪ ಮಂಡಲಪಂಚಾಯಿತಿಗಳಿಗೆ ತೊಂದರೆಯಾಗುತ್ತದೆ. ಹೈಕೋರ್ಟಿನ ತಡೆಯಾಜ್ಞೆ ವೆಕೇಟ್ ಆದಮೇಲೆ ಅದನ್ನು ನಾನು ಸರಿಪಡಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಇನ್ನು ಗಣಿ ಪ್ರದೇಶದಲ್ಲಿ ರಸ್ತೆಗಳ ಅಭಿವೃದ್ಧಿ ಮಾಡಬೇಕೆಂದು ಹೇಳಿದ್ದಾರೆ, ಅದು ನನ್ನ ಇಲಾಖೆಗೆ ಸಂಬಂಧಪಡುವುದಿಲ್ಲ. ಇದು ಎಂ. ಎಂ. ಟಿ. ಕಂಪನಿಗೆ ಬರುತ್ತದೆ. ಮತ್ತು ಕಬ್ಬಿಣ ಅದಿರಿನ ಮಂಡಳಿ ಇವರುಗಳಿಗೆ ಇದರ ಸಂಬಂಧ ಬರುತ್ತದೆ. ಇವರ ಜೊತೆ ಚರ್ಚೆ ಮಾಡಿ ಅದನ್ನು ಸರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ. ಇನ್ನು ಮೊಹಿನುದ್ದೀನ್ ಕಮಿಟಿಯವರು ಎಂ. ಎಂ. ಎಲ್. ಮೇಲೆ ಕೊಟ್ಟಿರತಕ್ಕಂಥ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡಿಲ್ಲ ಎಂದು ಹೇಳಿದ್ದಾರೆ, ಅದು ಸರಿಯಲ್ಲ. ಮೊಹಿನುದ್ದೀನ್ ಕಮಿಟಿಯವರು ಏನು ಎಂ. ಎಂ. ಎಲ್. ಮೇಲೆ ಅಬ್‌ಸರ್ವೇಷನ್ಸ್ ಮಾಡಿದ್ದರೋ, ಹೆಚ್ಚು ಕಡಿಮೆ ಎಲ್ಲಾ ನೋಡಿ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಒಬ್ಬ ಅಧಿಕಾರಿ ಐದು ಲಕ್ಷ ರೂಪಾಯಿಗಳ ಮಿಸ್‌–ಅಪ್ರೋಪ್ರಿಯೇಷನ್ ಮಾಡಿದ್ದ, ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದೇವೆ, ಅವನು ಈಗಾಗಲೇ ನೌಕರಿ ಬಿಟ್ಟು ಹೋಗಿದ್ದಾರೆ. ಅದೇ ರೀತಿ ತುಂಗಭದ್ರಾ ಮಿನರಲ್ಸ್‌ನ ಇಬ್ಬರು ಅಧಿಕಾರಿಗಳು ಮಿಸ್‌–ಅಪ್ರೋಪ್ರಿಯೇಷನ್ ಮಾಡಿದರು, ಅವರನ್ನೂ ಸಹಿತ ನೌಕರಿಯಿಂದ ತೆಗೆದುಹಾಕಿದ್ದೇವೆ. ಅವರ ಮೇಲೆ ಪೋಲೀಸ್ ಕೇಸನ್ನು ಸಹ ಹಾಕಿದ್ದೇವೆ.

ಅದೇ ರೀತಿಯಾಗಿ ಮ್ಯಾನೇಜಿಂಗ್ ಡೈರೆಕ್ಟರ್ ಅವರ ಮೇಲೆ ಕೆಲವೊಂದು ಛಾರ್ಜಸ್‌ಗಳನ್ನು ಮಾಡಿದ್ದಾರೆ. ಎಂ.ಡಿ. ಅವರಮೇಲೆ ಇಲಾಖೆಯವರು ನೇರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಏಕೆಂದರೆ ಅವರು ಐ.ಎ ಎಸ್. ಅಧಿಕಾರಿಗಳು. ಡಿಪಿಎಆರ್‌ನವರು ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾಗದ ಬರೆದಿದ್ದೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ, ಅದೇ ರೀತಿಯಾಗಿ ಹಿರಿಯ ಸದಸ್ಯರಾದ ಶ್ರೀ ಆರ್. ವೆಂಕಟರಾಮಯ್ಯನವರು ಈ

ಇಲಾಖೆಯ ಬಗ್ಗೆ ಕೆಲವೊಂದು ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಅವು ಬಹಳ ಮಹತ್ವವಾದ ವಿಚಾರ ಅಂದರೆ ಈ ಅಂತರ್ಜಲ ವಿಭಾಗದಲ್ಲಿ ಕಪ್ಪು ಮತ್ತು ಬಿಳಿದು ಬಣ್ಣವೆಂದು ಮಾಡಿದ್ದೀರಿ, ಇದರಿಂದ ಬಡ ರೈತರಿಗೆ ಹೆಚ್ಚು ತೊಂದರೆಯಾಗುತ್ತದೆ, ಮತ್ತು ಶ್ರೀ ಮಂತರಿಗೆ ಅನುಕೂಲವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಾವು ಒಂದು ಅಂತರ್ಜಲ, ಅಂಡರ್‌ಗ್ರೌಂಡ್ ವಾಟರ್ ಲೆಜಿಸ್ಲೇಷನ್ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗಾಗಲೇ ಈ ತೀರ್ಮಾನ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಇದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಆದರೆ ಅವರ ಬಗ್ಗೆ ಪ್ರಿನ್ಸಿಪಲ್ ಆಗಿ ಯಾವುದೇ ಒಂದು ತಕರಾರು ಇಲ್ಲ, ಕೆಲವು ನ್ಯೂನತೆಗಳು ಇವೆ, ಸಾಧ್ಯವಾದಷ್ಟು ಬೇಗ ಅವುಗಳನ್ನು ಇತ್ಯರ್ಥ ಮಾಡುವ ಹಾಗೆ ಮಾಡುತ್ತೇನೆ ಎಂದು ತಿಳಿಯಹೇಳುತ್ತೇನೆ. ಮತ್ತು ಕೆಲವು ಸದಸ್ಯರು ವಿಫಲವಾದ ನೀರಿನಿಂದ ಬಾವಿಗಳ ಸಮಸ್ಯೆ ಶೀಘ್ರವಾಗಿ ಪರಿಹಾರ ಆಗುವುದಿಲ್ಲ, ತಾಲೂಕಿಗೆ ಒಬ್ಬ ಸಹಾಯಕ ಅಧಿಕಾರಿಗಳನ್ನು ಹಾಕಿ ಎಂದು ಹೇಳಿದ್ದಾರೆ. ಅವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯನ್ನು ಗಮನದಲ್ಲಿ ಇಟ್ಟುಕೊಂಡು ಅದರಂತೆ ಮಾಡುತ್ತೇವೆ. ಅದೇ ರೀತಿಯಾಗಿ ಇವೊತ್ತು ಮಿನರಲ್ಸ್ ಸೆಕ್ಷನ್‌ನಲ್ಲಿ ಬಹಳ ಜನ ಕಡಿಮೆ ಇದ್ದಾರೆ. ಅಲ್ಲಿ ಬಹಳ ಅವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದನ್ನು ಗಮನದಲ್ಲಿ ಇಟ್ಟುಕೊಂಡಿದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ಗಮನದಲ್ಲಿ ಇಟ್ಟುಕೊಳ್ಳುತ್ತೇನೆ ಅಂದರೆ ಕೆಲಸ ಆದ ಹಾಗೆ ಆಗುತ್ತದೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾಡಿಕೊಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ, ಆದರೆ ಪ್ರಯತ್ನ ಮಾಡುತ್ತೇವೆ ಎಂದು ಅಷ್ಟು ಮಾಡುತ್ತೇವೆ ಎಂದು ಅಷ್ಟು ಮಾತ್ರ ಹೇಳಬಹುದು. ಮಾನ್ಯ ಸದಸ್ಯರು ಅದೇ ರೀತಿಯಾಗಿ ಮತ್ತೊಂದು ವಿಚಾರವನ್ನು ಅಂದರೆ ಗ್ರಾನೈಟ್ಸ್ ಶಿಲೆಗಳ ಬಗ್ಗೆ ಹೇಳಿದ್ದಾರೆ. ಮತ್ತು ಇದರಲ್ಲಿ ಕಳ್ಳತನಗಳು ನಡೆಯುತ್ತಿದೆ ಎಂದೂ ಹೇಳಿದ್ದಾರೆ. ಅದು ನಿಜ, ಇದಕ್ಕಾಗಿ ಕೆಲವು ಕಾಯಿದೆಗಳನ್ನು ತಿದ್ದುಪಡಿ ಮಾಡುತ್ತೇವೆ. ಅದನ್ನು ಸಾಧ್ಯವಾದಷ್ಟು ಬೇಗ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ. ಅದೇ ರೀತಿಯ ಹಿರಿಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್ ಬಗ್ಗೆ ಕೆಲವು ಅಬ್ಸರ್ವೇಷನ್‌ಗಳನ್ನು ಮಾಡಿದ್ದಾರೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಇದರ ಬಗ್ಗೆ ಮೊಟ್ಟಮೊದಲು ೮೫–೮೬ನೇ ಸಾಲಿನ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ವಿವರಣೆಗಳಲ್ಲಿ ಹಟ್ಟಿ ಬಂಗಾರದ ಸಂಸ್ಥೆ ಮತ್ತು ಭಾರತ ಬಂಗಾರ ಗಣಿ ಸಂಸ್ಥೆಗೆ ಸಂಬಂಧಿಸಿದಂತೆ ಹೇಳಿದ್ದಾರೆ. ಇದರ ಬಗ್ಗೆ ಬಂಗಾರದಹಟ್ಟಿ ಗಣಿ ಸಂಸ್ಥೆಗೆ ಸಂಬಂಧಿಸಿದಂತೆ ಪರಿಷ್ಕೃತ ದರದ ಮೇಲೆ ಬಾಡಿಗೆಯನ್ನು ಈಗಾಗಲೇ ಪಾವತಿ ಮಾಡಲಾಗಿದೆಯೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಎರಡನೆಯದು ೫೨ನೇ ಸಾಲಿನಲ್ಲಿ ಗಣಿ ಗುತ್ತಿಗೆ ಮಂಜೂರಾತಿ ನೀಡಿದ್ದನ್ನು ೧೯೭೨ನೇ ಸಾಲಿನಲ್ಲಿ ನವೀಕರಿಸುವಾಗ ಪ್ರಸ್ತುತ ಜಾರಿಯಲ್ಲಿದ್ದ ಕಾನೂನನ್ನು ಅನುಸರಿಸಿಲ್ಲ ಎಂದು ಹೇಳಿದ್ದಾರೆ. ಇದನ್ನು ಇತ್ತೀಚೆಗೆ ಸರಿಮಾಡಿದ್ದೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ. ಇನ್ನು ಒಂದು ವಿಚಾರವನ್ನು ಸುಣ್ಣದ ಕಲ್ಲಿಗೆ ಸಂಬಂಧಪಟ್ಟಂತೆ. ಮಾನ್ಯ ಸದಸ್ಯರು ಹೇಳಿದ್ದಾರೆ. ಯಾವುದೋ ನಮ್ಮ ವಾಡಿ ಸ್ಟೋನ್ ಕಂಪನಿಯವರು ಮಾಡಿರುವ ಅವ್ಯವಹಾರವೆಂದು ಹೇಳಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗಿದೆ. ಈ ಸಂಸ್ಥೆ ಪ್ರತಿ ದಿವಸ ಉತ್ಪಾದಿಸುವ ಸಿಮೆಂಟ್ ಪ್ರಮಾಣದ ಆಧಾರದ ? ಮೇಲೆ ರಾಜಧನವನ್ನು ಲೆಕ್ಕಾಚಾರ ಮಾಡಿ ವಸೂಲು ಕ್ರಮ ಜಾರಿಮಾಡಲಾಗಿದೆ. ಅದೂ ಅಲ್ಲದೇ, ೧೯೮೬–೮೭ನೇ ಸಾಲಿನಲ್ಲಿ ವಸೂಲಾದ ೧ ಕೋಟಿ ೭೩ ಲಕ್ಷ ರೂಪಾಯಿಗಳ ಜೊತೆಗೆ ೧೯೮೮–೮೯ರಲ್ಲಿ ೩ ಕೋಟಿ ೩೦ ಲಕ್ಷದಷ್ಟು ವಸೂಲು ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ.

ಅದೇ ರೀತಿಯಾಗಿ ನನ್ನ ಪ್ರಸ್ತಾವನೆ ೧೩ರ ಬಗ್ಗೆ ಸ್ವಲ್ಪ ಹೇಳುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಯುವಜನ ಸೇವಾ ಇಲಾಖೆ ಬಗ್ಗೆ ಹೇಳುವುದಾದರೆ ಮಾನ್ಯ ಶಾಣಪ್ಪನವರು ಹೇಳುತ್ತಿದ್ದಾರೆ, ಹೊಸದಾಗಿ ಇಲಾಖೆಯನ್ನು ತೆಗೆದುಕೊಂಡಿದ್ದೀರಿ ಬೇಗ ಮುಗಿಸಿ ಎಂದು. ಈ ಇಲಾಖೆ ೧೯೬೯ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಎಂದು ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ಇಲಾಖೆ ಅತ್ಯಂತ ಮಹತ್ವದ ಇಲಾಖೆಯಾಗಿದೆ. ಏಕೆಂದರೆ ದೇಶದಲ್ಲಿ

ಬರತಕ್ಕಂಥಹ ಯುವಕರಿಗೆ ಸೇವೆ ಸಲ್ಲಿಸತಕ್ಕಂಥ ಅವಕಾಶ ಇದೆ. ಬೇರೆ ರಾಜ್ಯಗಳ ಹಾಗೆ ಕರ್ನಾಟಕ ರಾಜ್ಯವೂ ಇದಕ್ಕೆ ಪ್ರಾಶಸ್ತ್ಯ ಕೊಟ್ಟಿದೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಯುವಕರಿಗೆ ಪ್ರೋತ್ಸಾಹ ಕೊಡಬೇಕು, ಅವರು ಸಮಾಜದಲ್ಲಿ ಮುಂದೆ ಬರಲಿಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ಮಹತ್ವವಾದ ಉದ್ದೇಶವನ್ನು ಈ ಇಲಾಖೆ ಹೊಂದಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

೫-೦೦ ಪಿ.ಎಂ.

ನಮ್ಮ ಯುವಕ ಯುವತಿಯರು ರಾಜ್ಯ ಮಟ್ಟದ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಪಾಲ್ಗೊಂಡು ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತಂದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಉದಾಹರಣೆಗಾಗಿ ವಂದನಾರಾವ್ ಅವರು ಅಲ್ಪ ಕಾಲದಲ್ಲಿಯೇ ತಮ್ಮ ದಿನನಿತ್ಯ ಜೀವನದಲ್ಲಿ ಈ ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮ ಜೀವನವನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಏನು ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ಸಂಪೂರ್ಣವಾದ ಸಹಕಾರವನ್ನು ನಮ್ಮ ಯುವಜನ ಸೇವಾ ಇಲಾಖೆ ನೀಡುತ್ತದೆ ಎಂದು ಹೇಳುತ್ತೇನೆ. ಈ ಇಲಾಖೆ ಪ್ಲಾನ್‌ನಲ್ಲಿ ೧೯೮೮-೮೯ನೇ ಸಾಲಿನಲ್ಲಿ ೧.೬೨ ಕೋಟಿ ರೂಪಾಯಿಗಳನ್ನು ಮತ್ತು ನಾನ್-ಪ್ಲಾನ್‌ನಲ್ಲಿ ೩.೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಎಲ್ಲ ಜಿಲ್ಲೆಗಳಲ್ಲಿಯೂ ಕ್ರೀಡಾಂಗಣಗಳನ್ನು ನಿರ್ಮಿಸಬೇಕೆಂಬ ಮಹತ್ವವಾದಂಥ ಕಾರ್ಯಕ್ರಮವನ್ನು ನಮ್ಮ ಯುವಜನಸೇವಾ ಇಲಾಖೆ ಹಾಕಿಕೊಂಡಿದೆ. ಇದರ ಪ್ರಕಾರ ಈಗ ೧೯ ಜಿಲ್ಲೆಗಳಲ್ಲಿ ಇದರ ಒಂದು ಕೆಲಸ ನಡೆದಿದೆ. ಮಾನ್ಯ ಸದಸ್ಯರು ಪ್ರತಿ ತಾಲ್ಲೂಕು ಮಟ್ಟದಲ್ಲಿಯೂ ಸಹ ಕ್ರೀಡಾಂಗಣವನ್ನು ನಿರ್ಮಿಸಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಕ್ರೀಡೆಗಳ ಸಲುವಾಗಿ ಸೆಂಟ್ರಲಿ ಸ್ಪಾನ್ಸಾರ್ಡ್ ಸ್ಕೀಮಿನಲ್ಲಿ ೩.೧೭. ಕೋಟಿ ರೂಪಾಯಿಗಳಷ್ಟು ಹಣದ ಪ್ರಾವಿಜನ್ ಮಾಡಿದ್ದರೂ ಸಹ ಅದನ್ನು ಪೂರ್ತಿಯಾಗಿ ಬಳಸಿಕೊಂಡಿಲ್ಲ. ಅದರಲ್ಲಿ ಒಂದು ಕೋಟಿ ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಗಿದೆ. ಇದಕ್ಕೆ ಕಾರಣವೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ. — ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ. ತಾಲ್ಲೂಕ್ ಮಟ್ಟದಲ್ಲಿಯೂ ಕ್ರೀಡಾಂಗಣ ಆಗಬೇಕು ಎಂಬುದನ್ನು ನಾನು ಸಹ ಒಪ್ಪುತ್ತೇನೆ. ಆದರೆ ನಾವು ಈಗಿರುವಂತಹ ಹಣದ ಚೌಕಟ್ಟಿನಲ್ಲಿ ಕೆಲಸ ಮಾಡದೇ ಮೊದಲನೆಯ ಹಂತದಲ್ಲಿ ನಾವು ಜಿಲ್ಲಾಮಟ್ಟಗಳಲ್ಲಿ ಈ ಕ್ರೀಡಾಂಗಣಗಳನ್ನು ರಚನೆ ಮಾಡಿ ಎರಡನೇ ಹಂತದಲ್ಲಿ ನಾವು ಒಂದು ವ್ಯಾಪಕವಾದಂಥ ಪ್ಲಾನನ್ನು ತಯಾರು ಮಾಡಿ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿಯೂ ಕ್ರಿಡಾಂಗಣಗಳನ್ನು ನಿರ್ಮಿಸಲು ನಾವು ಪ್ರಯತ್ನ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಈಗಾಗಲೇ ನಾವು ೬ ತಾಲ್ಲೂಕ್‌ಗಳಲ್ಲಿ ಇದರ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸಾಗರ, ದಾವಣಗೆರೆ, ಕುಮಟ, ಹೊಳೆನರಸೀಪುರ, ಚಿಕ್ಕಬಳ್ಳಾಪುರ...

ಶ್ರೀ ಕೆ. ಬಿ. ಶಾಣಪ್ಪ —ನಮ್ಮ ಗುಲ್ಬರ್ಗ ಜಿಲ್ಲೆ ಇವರ ತಲೆಯಲ್ಲಿ ಇಲ್ಲ ಎಂದು ಕಾಣುತ್ತದೆ. ಇವರ ಯಾವುದೇ ಸ್ಕೀಮಿನಲ್ಲಿಯೂ ಸಹ ನಮ್ಮ ಜಿಲ್ಲೆ ಸೇರಿಸದಿರಲು ಕಾರಣವೇನು ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮುಂದೆ ನಾವು ಈ ಬಗ್ಗೆ ವ್ಯಾಪಕವಾದಂಥ ಯೋಜನೆಯನ್ನು ಕೈಕೊಳ್ಳುವಾಗ ಗುಲ್ಬರ್ಗಾ ಜಿಲ್ಲೆಯ ಬಗ್ಗೆಯೂ ಸಹ ಪರಿಶೀಲನೆ ಮಾಡುತ್ತೇವೆ ನಮ್ಮ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಪ್ರತಿಭಾನ್ವಿತ ಯುವಕ ಯುವತಿಯರ ಸಲುವಾಗಿ ಕ್ರೀಡಾ ನಿಲಯಗಳನ್ನು, ಕ್ರೀಡಾ ವಿಭಾಗಗಳನ್ನು ಮತ್ತು ಕ್ರೀಡಾ ಶಾಲೆಗಳನ್ನು ನಡೆಸುತ್ತಿದೆ, ನಮ್ಮ ಕ್ರೀಡಾಪಟುಗಳಿಗೆ ಅನುಕೂಲವಾಗಲಿ ಎಂದು ನಾವು ಕ್ರೀಡಾಶಾಲೆಗಳನ್ನು ತೆಗೆದಿದ್ದೇನೆ. ಮತ್ತೆ ನಮ್ಮ ಸರ್ಕಾರ ಒಳಾಂಗಣ ಕ್ರೀಡಾಂಗಣ ನಿರ್ಮಾಣವನ್ನು ಬೆಂಗಳೂರು ನಗರದಲ್ಲಿ ಕೈಕೊಳ್ಳಬೇಕೆಂದು ಒಂದು ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿದೆ ದಿ:೧೮-೯-೧೯೮೭ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಒಂದು ಸಭೆಯನ್ನು ಸಹ ನಡೆಸಿ ಕ್ರೀಡಾಂಗಣದ ಮುಂಭಾಗದ ಪ್ರದೇಶದಲ್ಲಿ ನವದೆಹಲಿಯ ಕನ್ನಾಟ್ ಪ್ಲೇಸ್‌ನಲ್ಲಿ ಇರುವ ಭೂಗತ ಪಾಲ್ಕೆ ಬಜಾರ್ ಮಾದರಿಯಲ್ಲಿಯೇ ಒಳಾಂಗಣ ಕ್ರೀಡಾಂಗಣವನ್ನು ನಿರ್ಮಿಸಬೇಕೆಂದು ತೀರ್ಮಾನ ಕೈಕೊಳ್ಳಲಾಗಿದೆ. ಇದಕ್ಕೆ ೬ ರಿಂದ ೮ ಕೋಟಿ ರೂಪಾಯಿಗಳು ಖರ್ಚಾಗಬಹುದೆಂಬ ಅಂದಾಜು ಇದೆ, ಈ ಒಳಾಂಗಣ

ಕ್ರೀಡಾಂಗಣದ ಮುಂದೆ ಷಾಪಿಂಗ್ ಕಾಂಪ್ಲೆಕ್ಸ್ ನಿರ್ಮಾಣ ಮಾಡಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿದೆ. ಮತ್ತೆ ನಾವು ಕರ್ನಾಟಕ ಸ್ಪೋರ್ಟ್ಸ್ ಕೌನ್ಸಿಲ್‌ಗೆ ೧೯೮೩–೮೪ರಲ್ಲಿ ೨೦ ಲಕ್ಷ ರೂಪಾಯಿಗಳನ್ನು. ೧೯೮೪-೮೫ರಲ್ಲಿ ೩೧ ಲಕ್ಷ ರೂಪಾಯಿಗಳನ್ನು, ೧೯೮೫-೮೬ರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಮತ್ತು ೧೯೮೭–೮೮ರಲ್ಲಿ ೨೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅದೇ ರೀತಿಯಾಗಿ, ಸ್ಪೋರ್ಟ್ಸ್ ಸಲುವಾಗಿ ಕೆಲವು ಅಸೋಸಿಯೇಷನ್‌ಗಳಿವೆ ಅಂದರೆ ಸುಮಾರು ೫೨ ಅಸೋಸಿಯೇಷನ್‌ಗಳಿವೆ. ಅವಕ್ಕೂ ನಾವು ಪ್ರತಿವರ್ಷ ಸ್ವಲ್ಪ ಮಟ್ಟಿಗೆ ಅವುಗಳಲ್ಲಿ ಕಾರ್ಯಾಚರಣೆಗಾಗಿ ದುಡ್ಡನ್ನು ಬಿಡುಗಡೆ ಮಾಡಿದ್ದೇವೆ. ಯುವಜನ ಸೇವಾ ಇಲಾಖೆ ಮೇಲೆ ಕೆಲವು ಸದಸ್ಯರುಗಳು ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಕ್ರೀಡಾಂಗಳು ಆಗಬೇಕು, ಇದಕ್ಕೆ ಏನಾದರೂ ಒಂದು ಮಾಸ್ಟರ್‌ಪ್ಲಾನ್ ಮಾಡಿರಿ ಎಂದು ಮಾನ್ಯ ಭೂಪತಿಯವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅವರ ಸಲಹೆಯನ್ನು ನಾನು ಸಂಪೂರ್ಣವಾಗಿ, ತಾತ್ವಿಕವಾಗಿ ಒಪ್ಪದೇ ಇದ್ದರೂ ಸಹ ಸ್ವಲ್ಪಮಟ್ಟಿಗೆ ನಾನು ಒಪ್ಪುತ್ತೇನೆ. ಈ ಒಂದು ಜಿಲ್ಲಾ ಮಟ್ಟದ ಕ್ರೀಡಾಂಗಣಗಳ ಕಾರ್ಯ ಏನು ಇದೆ ಅದು ಮುಕ್ತಾಯ ಆದಮೇಲೆ ಇಡೀ ರಾಜ್ಯದ ಎಲ್ಲಾ ತಾಲ್ಲೂಕುಗಳ ಮಾಸ್ಟರ್ ಪ್ಲಾನ್‌ನನ್ನು ತಯಾರು ಮಾಡಿಸುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಅದೇರೀತಿ ಹೋಬಳಿ ಮಟ್ಟದಲ್ಲೂ ಸಹಿತ ವ್ಯಾಯಾಮ ಶಾಲೆಗಳನ್ನು ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವ್ಯಾಯಾಮ ಶಾಲೆಗಳು ಹೊಸದಾಗಿ ರಚಿತವಾದ ಜಿಲ್ಲಾಪರಿಷತ್ತುಗಳ ವ್ಯಾಪ್ತಿಯಲ್ಲಿ ಬರುತ್ತವೆ. ಅವುಗಳ ಜೊತೆಗೆ ಪತ್ರ ಸಮಾಲೋಚನೆ ಮಾಡುತ್ತೇನೆ ಎಂದು ಹೇಳುತ್ತೇನೆ. ಹಿರಿಯ ಸದಸ್ಯರಾದ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಹುಲುಕೋಟಿಯ ಕ್ರೀಡಾಂಗಣಕ್ಕೆ ಕೇಂದ್ರ ಸರ್ಕಾರ ದುಡ್ಡು ಕೊಟ್ಟರೂ ನೀವು ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ, ಅದು ನಿಜ ಇದೆ ಕೇಂದ್ರ ಸರ್ಕಾರದವರು ೨ ಲಕ್ಷ, ೫೦ ಸಾವಿರ ಬಿಡುಗಡೆ ಮಾಡಿದ್ದಾರೆ. ಇನ್ನು ೮–೧೦ ದಿವಸದಲ್ಲಿ ಹಣವನ್ನು ಬಿಡುಗಡೆ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಮಾನ್ಯ ಖರ್ಗೆಯವರು ಎಲ್ಲಾ ಜಿಲ್ಲೆಗಳಲ್ಲೂ ನೆಹರು ಯುವಕ ಕೇಂದ್ರಗಳನ್ನು ತೆಗೆಯಬೇಕು ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೩ ಕೇಂದ್ರಗಳಿವೆ. ಅದರಲ್ಲಿ ೪ ಫುಲ್ ಫ್ಲೆಡ್ಜ್‌ಡ್ ಇದೆ; ಉಳಿದವನ್ನು ಫುಲ್‌ಫ್ಲೆಡ್ಜ್‌ಡ್ ಮಾಡಬೇಕು ಎಂದು ನಾವು ಕೇಳಿದ್ದು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಈ ಪ್ರಸ್ತಾವನೆಯನ್ನು ಅವರು ಹೇಳಿದ್ದಾರೆ. ೪ ಮಾತ್ರ ಫುಲ್‌ಫ್ಲೆಡ್ಜ್‌ಡ್ ಆಗಿದೆ ಇನ್ನು ಉಳಿದವು ಏಕೆ ಆಗಿಲ್ಲ ಎಂದು ಹೇಳಿದ್ದಾರೆ. ಇದು ನಮ್ಮ ಇಲಾಖೆಗೆ ಸಂಬಂಧ ಪಡುವುದಿಲ್ಲ. ಇದು ಕೇಂದ್ರಸರ್ಕಾರದ ಒಂದು ಯೋಜನೆ. ಕೇಂದ್ರದ ಯುವಜನ ಕ್ರೀಡಾ ಮಂತ್ರಿಗಳಾದ ಶ್ರೀಮತಿ ಮಾರ್ಗರೇಟ್ ಆಳ್ವರವರಿಗೆ ವಂದನೆಗಳನ್ನು ಹೇಳಬೇಕು. ಅವರು ಯೂತ್ ಹಾಸ್ಟೆಲ್ಸನ್ನು ಕೊಡುತ್ತಾ ಇದ್ದಾರೆ. ಮಾನ್ಯ ಖರ್ಗೆಯವರು ಹೇಳಿದರು, ೭೫ ಪರ್ಸೆಂಟ್ ಅವರು ಕೊಡುತ್ತಾರೆ, ನೀವು ೨೫ ಪರ್ಸೆಂಟ್ ಹಾಕಿ ಏಕೆ ಮಾಡಬಾರದು ಎಂದು. ೧೦೦ ಪರ್ಸೆಂಟ್ ಪೂರ್ತಿ ಅವರು ಕೊಡುತ್ತಾರೆ. ಮೈಂಟೆನೆನ್ಸ್ ನಮ್ಮದು ಇರುತ್ತದೆ. ಪ್ರತಿವರ್ಷ ಒಂದು ಅಥವಾ ಎರಡನ್ನು ಮಾತ್ರ ಸ್ಯಾಂಕ್ಷನ್ ಮಾಡುತ್ತಾರೆ. ಇನ್ನೂ ಹೆಚ್ಚು ಮಾಡಲಿಕ್ಕೆ ಮಂತ್ರಿಗಳಿಗೆ ಪತ್ರ ಬರೆಯುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಅದೇರೀತಿ ಕ್ರೀಡಾಂಗಣವನ್ನು ನಿರ್ಮಾಣ ಮಾಡಿದಿರಿ ಅಲ್ಲಿ ಮೈಂಟೆನೆನ್ಸ್ ಇಲ್ಲ ಎಂದು ಮಾನ್ಯ ಖರ್ಗೆಯವರು ಹೇಳಿದ್ದಾರೆ. ಆದರೆ ಈಗ ಯಾವ ಜಿಲ್ಲಾಮಟ್ಟದ ಕ್ರೀಡಾಂಗಣಗಳು ಸಂಪೂರ್ಣವಾಗಿ ಮುಕ್ತಾಯವಾಗಿಲ್ಲ, ಅವು ಮುಕ್ತಾಯ ಆದಮೇಲೆ ಅಲ್ಲಿ ಮೈಂಟನೆನ್ಸ್‌ಗೆ ಏನಾದರೂ ಒಂದು ಬಜೆಟ್‌ನಲ್ಲಿ ಪ್ರಾವಿಜನ್ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಅದೇರೀತಿ ಇಲಾಖೆಯಲ್ಲಿ ಒದಗಿಸತಕ್ಕಂಥ ಹಣವನ್ನು ಸರಿಯಾಗಿ ಖರ್ಚುಮಾಡಿಲ್ಲ, ಕೆಲವೊಂದು ಹಣವನ್ನು ಲ್ಯಾಪ್ಸ್ ಮಾಡಿದಿರಿ ಎಂದು ಹೇಳಿದ್ದಾರೆ. ಅದು ನಿಜ ಇದೆ. ಅದನ್ನು ನಾವಾಗಿಯೇ ಲ್ಯಾಪ್ಸ್ ಮಾಡಿಲ್ಲ. ಎನ್. ಸಿ. ಸಿ. ಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹುಡುಗರನ್ನು ತೆಗೆದುಕೊಂಡಿಲ್ಲ. ಯೂನಿವರ್ಸಿಟಿಗಳಲ್ಲಿ ಸ್ವಲ್ಪ ಹಣ ಲ್ಯಾಪ್ಸ್ ಆಗಿದೆ. ಕೆಲವು ಸ್ಕೀಮುಗಳನ್ನು ಯೂತ್ ಸರ್ವೀಸ್ ಡಿಪಾರ್ಟ್‌ಮೆಂಟ್‌ನವರು ಮಾಡಿ ಕಳಿಸಿದರೂ ಆ ಸ್ಕೀಮುಗಳಿಗೆ ಮಂಜೂರಾತಿ ದೊರಕದೆ ಲ್ಯಾಪ್ಸ್ ಆಗಿದೆ ಎಂದು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಬಯಸುತ್ತೇನೆ. ಅದೇ ರೀತಿಯಾಗಿ ವಿಶ್ವವಿದ್ಯಾನಿಲಯದ ಯುವ

ಜನೋತ್ಸವಕ್ಕೆ ಕಡಿಮೆ ಹಣ ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಇನ್ನು ಮುಂದೆ ಅವರ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ನಾನು ಕೆಲಸ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮಾನ್ಯ ನಂಜಯ್ಯನ ಮಠ್‌ರವರು ಎನ್. ಸಿ. ಸಿ. ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಎನ್. ಸಿ. ಸಿ. ಕೆಡೆಟ್ ಆಗಿದ್ದವರು, ಮತ್ತು ಲೀಡರಾಗಿದ್ದರು. ನಾನೂ ಅವರೂ ಎನ್. ಸಿ. ಸಿ, ಕೆಡೆಟ್‌ಗಳಾಗಿದ್ದೆವು. ಇದನ್ನು ಸಂಪೂರ್ಣವಾಗಿ ಜಾರಿ ಮಾಡಬೇಕು ಎಂದು ಮಾನ್ಯ ನಂಜಯ್ಯನ ಮಠ್‌ರವರು ಹೇಳಿದ್ದಾರೆ. ಆದರೆ ಇದು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ–ಎರಡೂ ಕೂಡಿ ಮಾಡತಕ್ಕಂಥ ಯೋಜನೆ, ಇದನ್ನು ಸಂಪೂರ್ಣ ವಾಗಿ ಜಾರಿಯಲ್ಲಿ ತರುವುದರ ಬಗ್ಗೆ ನಾವು ಪ್ರಯತ್ನ ಮಾಡುತ್ತೇನೆಂದು ಮಾನ್ಯ ನಂಜಯ್ಯನಮಠ್ ರವರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಆಮೇಲೆ ತಾಲ್ಲೂಕ್ ಮಟ್ಟದಲ್ಲಿ ಯುವಜನ ಮೇಳಗಳನ್ನು ಮಾಡುವಾಗ ಮುಂಚೆ ತಿಳಿಸುವುದಿಲ್ಲ, ತುರ್ತಾಗಿ ತಿಳಿಸಿದರೆ ಹೆಚ್ಚು ಕ್ರೀಡಾಪಟುಗಳು ಭಾಗವಹಿಸು ವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ಅದು ನಮಗೆ ಸಂಬಂಧಪಡುವುದಿಲ್ಲ. ಜಿಲ್ಲಾಪರಿಷತ್ ನವರಿಗೆ ಈ ಸೂಚನೆಯನ್ನು ನಾನು ಕಳಿಸುತ್ತೇನೆ ಎಂದು ಹೇಳಲಿಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ನನ್ನ ಈ ಎರಡೂ ಇಲಾಖೆಗಳ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ಎಲ್ಲ ವಿಚಾರಗಳಿಗೂ ಬಹುಶಃ ಸಮರ್ಪಕವಾದ ಉತ್ತರವನ್ನು ನಾನು ಕೊಟ್ಟಿ ದ್ದೇನೆ ಎಂದು ತಿಳಿದು ಕೊಂಡಿದ್ದೇನೆ. ಆದ್ದರಿಂದ ಮಾನ್ಯ ಸಭೆಯು ನನ್ನ ಈ ಇಲಾಖೆಗಳ ಬೇಡಿಕೆಗಳ ಮಂಜೂರಾತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ನನ್ನ ಜಿಲ್ಲೆಯಲ್ಲಿ ಇವರು ಕೊಟ್ಟಿರತಕ್ಕ ತಾಲ್ಲೂಕುಗಳನ್ನು ನೋಡಿದರೆ ಬಹಳ ಭಯವಾಗುತ್ತದೆ. ಕೋಲಾರ ಜಿಲ್ಲೆಯಲ್ಲಿ ೨ ತಾಲ್ಲೂಕುಗಳನ್ನು ಒಂದು ಬ್ಲಾಕ್ ಮಾಡಿದ್ದಾರೆ. ಅವು ಯಾವುವು ಅಂದರೆ ಮುಳಬಾಗಿಲು ಮತ್ತು ಗೌರಿಬಿದನೂರು ಈ ಎರಡನ್ನೂ ಒಂದೇ ಬ್ಲಾಕ್ ಮಾಡಿದ್ದಾರೆ. ನಾನು ಹೇಳುತ್ತೇನೆ ಇವರು ಏನು ತಾಲ್ಲೂಕು ಯೂನಿಯನ್ನು ಮಾಡಿದ್ದಾರೆ ಅದು ಬೇಡ. ವಿಲೇಜ್ ಯೂನಿಟ್ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ವಿಲೇಜ್ ಯೂನಿಟ್‌ನ್ನು ಮಾಡದಿದ್ದರೆ ಮಂಡಲವನ್ನಾದರೂ ಮಾಡಲಿ.

ಶ್ರೀ ರಮೇಶ ಸಿ. ಜಿಗಜಿಣಗಿ.—ಇಡೀ ತಾಲ್ಲೂಕನ್ನೇ ಮಾಡುತ್ತೀರಿ, ಇದು ಸರಿಯಲ್ಲ ವಿಲೇಜ್ ಯೂನಿಟ್ ಅಥವಾ ಮಂಡಲ್ ಯೂನಿಟ್ ಎಂದು ಮಾಡಿ ಎಂದು ಮಾನ್ಯ ಸದಸ್ಯರು ಏನು ಹೇಳುತ್ತಿ ದ್ದಾರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಪ್ಪು, ಬೂದು ಎಂದು ಮಾಡುವ ಬಗ್ಗೆ ನಾನು ಒಂದು ಸರ್ವೆ ಮಾಡಿಸಿ ವಾಟರ್ ಷೆಡ್‌ನ್ನು ಮಾಡಿಸಿ, ಯಾವ ಯಾವ ತಾಲ್ಲೂಕಿನಲ್ಲಿ ನೀರಿಲ್ಲ ಅಂಥಕಡೆ ಇದನ್ನು ಮಾಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ. ಆದರೆ ಇದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ಇದನ್ನು ನಬಾರ್ಡ್‌ನವರು ಮಾಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ೧೨೦ ವೆಲ್ಸ್ ಸ್ಕೀಂ, ಮತ್ತು ಗಂಗಾ ಕಲ್ಯಾಣ ಯೋಜನೆಗಾಗಿ ಜಿಯಲಾಜಿಕಲ್ ಡಿಪಾರ್ಟ್‌ಮೆಂಟ್‌ನವರು ಸರ್ಟಿಫೈ ಮಾಡುತ್ತಾರೆ. ಕಪ್ಪು ಬೂದು ಅಂತ ಏನು ಹೇಳುತ್ತಾರೆ ಅದನ್ನೆಲ್ಲಾ ನಾನು ಒಪ್ಪುವುದಿಲ್ಲ. ೧೦೦ ವೆಲ್ಸ್ ಸ್ಕೀಂ. ಗಂಗಾ ಕಲ್ಯಾಣ ಯೋಜನೆ ಇಂಥ ಸ್ಕೀಂಗಳು ರೈತರಿಗೆ ಬಹಳ ಅನುಕೂಲವಾಗುವುದರಿಂದ ಇವುಗಳನ್ನು ಮಾಡಿಸುವುದಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಸಿ. ಜಿಗಜಿಣಗಿ.—ಗಂಗಾಕಲ್ಯಾಣ ಸ್ಕೀಂ ಇರಬಹುದು, ೧೦೦ ವೆಲ್ಸ್ ಸ್ಕೀಂ ಇರ ಬಹುದು. ಅಥವಾ ಬೇರೆ ಇನ್ನಾವುದೇ ಗ್ರೂಪ್‌ವೈಸ್ ಸ್ಕೀಂ ಇರಬಹುದು, ಇವೆಲ್ಲಾ ನಮ್ಮ ರೈತರಿಗೆ ಬಹಳ ಅನುಕೂಲವಾದುವು, ಆದರೆ ಒಂದೊಂದನ್ನೇ ನಾವು ಮಾಡುವುದಕ್ಕೆ ಬರುವುದಿಲ್ಲ ರೈತರ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಆದರೆ ಇನ್ನು ನಾನು ನಬಾರ್ಡ್ ನವರಿಗ ಬರೆದು ಕಳುಹಿಸುತ್ತೇವೆ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ, ಗುಲ್ಬರ್ಗಾದ ಷಹಾಬಾದ್ ಸ್ಟೋನ್ ಬಹಳ ಹೆಸರುವಾಸಿ ಯಾದುದು. ಮೊದಲು ಒಂದು ಕಲ್ಲಿಗೆ ೨.೫೦ ರೂಪಾಯಿ ರಾಯಲ್ಟಿ ಇದ್ದುದಕ್ಕೆ ೮೪–೮೫ರಲ್ಲಿ ನೀವು ಬಂದಮೇಲೆ ೧೦ ರೂಪಾಯಿ ಎಂದು ಮಾಡಿದಿರಿ, ಡೆಡ್ ರೆಂಟ್ ೫೦೦ರೂ, ಇದ್ದುದನ್ನು ೫೦೦೦ರೂ

ಎಂದು ಮಾಡಿದಿರಿ ಇದರ ಬಗ್ಗೆ ಅಲ್ಲಿನ ಅಸೋಸಿಯೇಷನ್‌ನವರು ಒಂದು ಮನವಿಯನ್ನು ಕೊಟ್ಟು ಇದನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅಂದರೆ ಡೆಡ್ ರೆಂಟ್‌ನ್ನು ೧೦೦೦ರೂ ಎಂದು ಮಾಡಿ, ಮತ್ತು ರಾಯಲ್ಟಿಯನ್ನು ೫೦ರೂ. ಎಂದು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ದಯವಿಟ್ಟು ಇದನ್ನು ಮಾಡಬೇಕು. ತಾವೂ ಕೂಡ ಅಲ್ಲಿಗೆ ಹೋಗಿದ್ದಾಗ ಆಶ್ವಾಸನೆಯನ್ನು ಕೊಟ್ಟು ಬಂದಿದ್ದೀರಿ.

ಶ್ರೀ ರಮೇಶ ಸಿ. ಜಿಗಜಿಣಗಿ.—ತಾವು ಹೇಳುತ್ತಿರುವುದು ಸತ್ಯ. ಆದರೆ ನಾನು ಗುಲ್ಬರ್ಗಾಕ್ಕೆ ಹೋದಾಗ ಅಲ್ಲಿನ ಅಸೋಸಿಯೇಷನ್‌ನವರು ಬಂದು ನನ್ನನ್ನು ಭೇಟಿ ಮಾಡಿದ್ದು ನಿಜ, ನಾನು ಅವರಿಗೆ ಏನು ಹೇಳಿದೆ ಎಂದರೆ ಇದನ್ನು ನಾನು ಏನಾದರೂ ಒಂದು ರೀತಿಯಲ್ಲಿ ತೀರ್ಮಾನ ಮಾಡುತ್ತೇನೆ ಇದನ್ನು ಪರಿಶೀಲನೆ ಮಾಡಬೇಕಾಗಿದೆ ಎಂದು ಹೇಳಿ ಬಂದಿದ್ದು ನಿಜ. ಮಾನ್ಯ ಶಾಣಪ್ಪನವರು ಹೇಳಿದ್ದು ನಿಜ, ಇಲ್ಲೀಗಲ್ ಕ್ವ್ಯಾರೀಸ್ ಹೆಚ್ಚಾಗುತ್ತದೆ. ಬೇಕಾದರೆ ಡೆಡ್ ರೆಂಟ್‌ನ್ನು ಕಡಿಮೆ ಮಾಡುತ್ತೇವೆ. ಆದರೆ ರಾಯಲ್ಟಿಯನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ. ೫ ವರ್ಷಕ್ಕೊಮ್ಮೆ ನಾವು ರಾಯಲ್ಟಿಯನ್ನು ಹೆಚ್ಚಿಗೆ ಮಾಡುತ್ತೇವಲ್ಲಾ ಆಗ ನೋಡೋಣ. ೧೯೯೦ರಲ್ಲಿ ನಾವು ಇದರ ಬಗ್ಗೆ ಪರಿಷ್ಕರಣೆ ಮಾಡುವಾಗ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಸ್ವಾಮಿ, ನಿವೃತ್ತ ಪೈಲ್ವಾನ್‌ರಿಗೆ ಮಾಸಾಶನವನ್ನು ಕೊಡಬೇಕೆಂದು ನಾನು ಯೋಜನಾ ಇಲಾಖೆಯ ಮಂತ್ರಿಯಾಗಿದ್ದಾಗ ; ದೇವರಾಜ ಅರಸ್‌ರವರ ಕಾಲದಲ್ಲಿ ಒಂದು ಸ್ಕೀಂನ್ನು ಮಾಡಿದೆ, ಆದರೆ ದುರಾದೃಷ್ಟವಶಾತ್ ಇದನ್ನು ಇಂಪ್ಲಿಮೆಂಟ್ ಮಾಡುವುದರೊಳಗೆ ನಮ್ಮ ಸರ್ಕಾರ ಹೋಯಿತು. ನೂರಾರು ಪೈಲ್ವಾನ್‌ರನ್ನು ತರಬೇತಿ ಮಾಡಿರತಕ್ಕ ಮತ್ತು ಮಾಡುತ್ತಿರತಕ್ಕ ಪೈಲ್ವಾನ್‌ರಿಗೆ ಸಹಕಾರಿಯಾಗಲೆಂದು ನಾವು ಈ ಒಂದು ಯೋಜನೆಯನ್ನು ಮಾಡಿದ್ದೆವು.

ಇವರು ಏನೆಂದರೆ ಒಂದು ಮಾಡಿಬಿಟ್ಟರು, ಒಂದು ಸ್ಕೀಮ್ ಮಾಡಿಬಿಟ್ಟು ಅವರೆಲ್ಲರೂ ಸರ್ಟಿಫಿಕೇಟ್ ಹಾಜರು ಮಾಡಬೇಕೆಂದು ಹೇಳಿದರು. ಆ ಕಾಲದಲ್ಲಿ ಸರ್ಟಿಫಿಕೇಟ್ ಇಲ್ಲದ ಕಾಲ ಇತ್ತು. ಹಳೆಕಾಲದ ಪೈಲ್ವಾನ್‌ಗಳಿಗೋಸ್ಕರ ಇದನ್ನು ಮಾಡಿದ್ದು. ಅಂದರೆ ೭೭–೮೫–೮೬–೯೦ ವರ್ಷದ ಪೈಲ್ವಾನ್‌ಗಳು. ತಮಗೆ ಪೆನ್‌ಷನ್ ಬರುತ್ತದೆಂದು ಕಾಯ್ದುಕೊಂಡಿದ್ದಾರೆ. ಕಳೆದ ೫–೬ ವರ್ಷಗಳಿಂದ ಲಾಟರಿ ಹೊಡೆಯುತ್ತಿದ್ದಾರೆ. ಈವಾಗ ಇತ್ತೀಚೆಗೆ ಇದನ್ನು ಬರೆದಮೇಲೆ ಡಿ.ಸಿ.ಯವರಿಂದ ಇದರ ಬಗ್ಗೆ ಪ್ರಮಾಣ ಪತ್ರವನ್ನು ಕೊಡಬೇಕು. ಅವರು ಅದನ್ನು ವೆರಿಫೈ ಮಾಡಿಬಿಟ್ಟು ಇವರು ಪೈಲ್ವಾನ್ ಆಗಿದ್ದು ಇಂಥ ಕಾಲದಲ್ಲಿ ಕುಸ್ತಿ ಮಾಡಿದ್ದರು. ಇಂಥ ಲೆವಲ್‌ನ್ನು ತಲುಪಿದ್ದರು ಎಂದು ಹೇಳಿಬಿಟ್ಟು ಸರ್ಟಿಫಿಕೇಟ್ ಕೊಡಬೇಕು. ವಿದೇಶಗಳಲ್ಲಿ ಹೋಗಿ ಕೀರ್ತಿ ಸಂಪಾದನೆ ಮಾಡಿದಂಥ ಪೈಲ್ವಾನರುಗಳು ಕೂಡ ಊಟಕ್ಕೆ ಗತಿ ಇಲ್ಲದೆ ಸಾಯುತ್ತಿದ್ದಾರೆ. ಅವರಿಗೆ ಪೆನ್‌ಷನ್ ಕೊಡತಕ್ಕಂಥ ವಿಚಾರದಲ್ಲಿ ಏನೂ ಮಾಡದಿದ್ದುದರಿಂದ ಅವರು ಕೊಳೆಯುತ್ತಿದ್ದಾರೆ. ದಯವಿಟ್ಟು ಯಾವುದಾದರೂ ಒಂದು ತಾರೀಖನ್ನು ನಿಗದಿ ಮಾಡಿ. ಆ ತಾರೀಖಿನೊಳಗೆ, ಅವರು ಸತ್ತು ಹೋಗುವ ಮೊದಲು ಮಾಸಾಶನವನ್ನು ಕೊಡುವುದರ ಬಗ್ಗೆ ಒಂದು ಭರವಸೆಯನ್ನು ಕೊಡಬೇಕೆಂದು ತಮ್ಮನ್ನು ಒತ್ತಾಯ ಪಡಿಸುತ್ತೇನೆ. ಇದು ಒಂದು,

ಶ್ರೀ ರಮೇಶ್ ಜಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ ನಾನು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತಮೇಲೆ ಹೆಚ್ಚು ಜನ ಪೈಲ್ವಾನ್‌ಗಳು ಮಾಸಾಶನ ಕೊಡಬೇಕೆಂದು ಹೇಳಿ ಅರ್ಜಿಯನ್ನು ಕೊಟ್ಟಿದ್ದರು. ಆದರೆ ಕೆಲವೊಂದು ತಾಂತ್ರಿಕ ತೊಂದರೆಯಿಂದಾಗಿ ಬಿಡುಗಡೆ ಮಾಡಲಿಕ್ಕೆ ಆಗಲಿಲ್ಲ. ಸಾಧ್ಯವಾದಷ್ಟು ಬೇಗ ಅಂದರೆ ವೇಳೆಯನ್ನು ಹೇಳಲಿಕ್ಕೆ ಆಗುವುದಿಲ್ಲ, ನಿಮಗೆ ಅದನ್ನು ಮಾಡಿಸಿಕೊಡುತ್ತೇನೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದೇನು ತೊಂದರೆ ಇಲ್ಲಿ ಚರ್ಚೆ ಮಾಡೋಣ. ಮಾನ್ಯ ಅಧ್ಯಕ್ಷರೆ ೧೦ ನಿಮಿಷ ಕೊಟ್ಟರೆ ಚರ್ಚೆ ಮಾಡೋಣ. ಏತಕ್ಕೆಂದರೆ ಅವರು ಸತ್ತು ಹೋಗುತ್ತಿದ್ದಾರೆ. ಏನು ಅಂಥ ತೊಂದರೆ. ಡಿ.ಸಿ.ಯವರು ಆ ಊರಲ್ಲಿ ನಾಲ್ಕು ಜನರನ್ನು ಕೇಳಲಿಕ್ಕೆ ಹೇಳಿ. ಅವರು ಪೈಲ್ವಾನ್‌ರಾಗಿದ್ದರೆ, ಇಲ್ಲವೇ ಎಂದು. ಅವರು ಯಾರಾದರೂ ಹೇಳುತ್ತಾರೆ. ಸ್ವಾಮಿ ಇವರು ಕುಸ್ತಿ ಮಾಡುತ್ತಿದ್ದರು ಇಲ್ಲ ಎನ್ನುವುದನ್ನು ಅವರನ್ನು ನೋಡಿದರೆನೆ ನಮಗೂ ನಿಮಗೂ ಗೊತ್ತಾಗುತ್ತದೆ. ಇಂಥ ವೆಲ್‌ಫೇರ್ ಸ್ಕೀಮ್‌ನ್ನು ಧಾರಾಳವಾಗಿ ಇಂಪ್ಲಿಮೆಂಟ್ ಮಾಡಿದರೆ ಸರ್ಕಾರಕ್ಕೂ ಭೂಷಣ. ನಾನು ಪೈಲ್ವಾನ್ ಆಗಿದ್ದೆ ಎಂದು ಹೇಳುವುದಕ್ಕೆ ತಾವು ಏನು ಅವಸ ಸುತ್ತಳತೆಯನ್ನು

ಮಾಡಿಕೊಳ್ಳುತ್ತಾ ಕುಳಿತುಕೊಳ್ಳುತ್ತೀರಾ ? ಅವನು ಹೊಟ್ಟೆಗಿಲ್ಲದೆ ಬರೀ ಎಲುಬಿನ ಗೂಡಾಗಿದ್ದಾನೆ. ಏನು ತಾಂತ್ರಿಕ ತೊಂದರೆ; ೧೨ ವರ್ಷಗಳಿಂದ ತಾಂತ್ರಿಕ ತೊಂದರೆ ಇದ್ದರೆ ದಯವಿಟ್ಟು ಒಂದು ಮೀಟಿಂಗ್ ಕರೆಯಿರಿ. ಏನು ತಾಂತ್ರಿಕ ತೊಂದರೆ ಇದೆ ಎನ್ನುವುದನ್ನು ಅಧಿಕಾರಿಗಳಿಂದ ಕೇಳೋಣ. ತಾಂತ್ರಿಕ ತೊಂದರೆ ಇದ್ದರೆ ಅದನ್ನು ಲಿಬರಲ್ ಮಾಡಿ. ಯೋಗ್ಯತೆ ಇದ್ದರೆ ಮಾಡುತ್ತೇವೆ ಇಲ್ಲದಿದ್ದರೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಬೇಕು.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾಡಲಿಕ್ಕೆ ಆಗುವುದಿಲ್ಲವೆಂದು ಇಲ್ಲಿ ಹೇಳಲಿಕ್ಕೆ ಆಗುವುದಿಲ್ಲ. ನಾನು ಸಾಧ್ಯವಾದಷ್ಟುಮಟ್ಟಿಗೆ ಮಾಡಿ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಈ ಅಂತರ್‌ಜಲವನ್ನು ಕಂಡು ಹಿಡಿಯತಕ್ಕಂಥ ಸಂದರ್ಭದಲ್ಲಿ ಬಹುಭಾಗ ಉಪ್ಪು ನೀರು ನಿಲ್ಲತಕ್ಕಂಥ ಸಂದರ್ಭ ಬಂದು ರೈತ ಬಹಳ ನಷ್ಟ ಅನುಭವಿಸುತ್ತಿದ್ದಾನೆ. ಅಂತರ ಜಲ ಏನಾದರೂ ಸಿಹಿನೀರು ಸಿಕ್ಕತಕ್ಕಂಥ ಪ್ರದೇಶವನ್ನು ಗುರುತಿಸಿ ತೋಡಿಸಲಿಕ್ಕೆ ವ್ಯವಸ್ಥೆಯನ್ನು ಮಾಡಿ ರೈತರಿಗೆ ಆಗತಕ್ಕಂಥ ನಷ್ಟವನ್ನು ತಪ್ಪಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೀರಾ ಎನ್ನುವುದನ್ನು ಒಂದು ಸೂಚನೆ ಮತ್ತೆ ಯುವಜನ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೊದಲು ಏನಾಗುತ್ತಿತ್ತು ಎಂದರೆ ದಸರಾ ಕ್ರೀಡೆಯನ್ನು ಮುಕ್ತವಾಗಿ ಪ್ರವೇಶ ಇಟ್ಟು ತಾಲ್ಲೂಕು ಮಟ್ಟದಲ್ಲಿ, ವಿಭಾಗಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಮುಂಚಿತವಾಗಿ ವ್ಯವಸ್ಥೆಯನ್ನು ಮಾಡುತ್ತಿದ್ದರು. ಗ್ರಾಮಾಂತರ ಜನತೆಗೆ ಇದ್ದುದು ಕ್ರೀಡೆಗೆ ಇದು ಒಂದೇ ಒಂದು ಅವಕಾಶವಿತ್ತು. ಇತ್ತೀಚೆಗೆ ನೇರವಾಗಿ ಕೆಲವಾರು ವರ್ಷಗಳಿಂದ ಆಯ್ಕೆ ಮಾಡುವ ಮೂಲಕ ದಸರಾ ಕ್ರೀಡಾ ಕೂಟವನ್ನು ನಡೆಸುತ್ತಿದ್ದಾರೆ. ಈ ಸ್ಪರ್ಧೆಗಳು ಮುಗಿದಮೇಲೆ ಪತ್ರಿಕೆಗಳಲ್ಲಿ ಬರುವುದನ್ನು ನೋಡುತ್ತಿದ್ದೇವೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಗೆ ಅನಾನುಕೂಲವಾಗಿದೆ. ಮೊದಲಿದ್ದ ಪ್ರಕಾರವಾಗಿ ಮುಕ್ತವಾಗಿ ಪ್ರವೇಶಕ್ಕೆ ಅವಕಾಶಮಾಡಿಕೊಟ್ಟು ಎಲ್ಲ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ದಿಸೆಯಲ್ಲಿ ಸರ್ಕಾರ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ ಕರ್ನಾಟಕ ಕೇಸರಿ ಕಂಠೀರವ ಕುಸ್ತಿಸ್ಪರ್ಧೆ ನಡೆಸಬೇಕಾದ ಸಂದರ್ಭದಲ್ಲಿ ಮುಕ್ತ ಪ್ರವೇಶ ಇತ್ತು. ಕುಸ್ತಿ ಪಟುಗಳಿಗೆ ಹೋಗಿಬರತಕ್ಕಂಥ ಭತ್ಯ, ದಿನಭತ್ಯವನ್ನು ಕೊಟ್ಟು ಸ್ಪರ್ಧೆ ನಡೆಸುತ್ತಿದ್ದರು. ಈಗ ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಸೀಮಿತಗೊಳಿಸಿ ಅವರ ದೇಹದ ಮತ್ತು ತೂಕದಮೇಲೆ ಸುಮಾರು ೧೦ ಜನ ಕುಸ್ತಿ ಪಟುಗಳನ್ನು ಆರಿಸಿ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಇದರಿಂದ ಗ್ರಾಮಾಂತರ ಪ್ರದೇಶದ ಕುಸ್ತಿ ಪಟುಗಳಿಗೆ ನಷ್ಟವಾಗುತ್ತಿದೆ. ಮೇಲೆ ಬರತಕ್ಕಂಥವರಿಗೆ ಇದರಿಂದಾಗಿ ಧಕ್ಕೆಯಾಗುತ್ತಿದೆ. ಆದ್ದರಿಂದ ಮೊದಲಿನ ಪದ್ಧತಿಯಂತೆ ಸಾಕಷ್ಟು ಹಣವನ್ನು ಕೊಟ್ಟು ಮುಕ್ತ ಪ್ರವೇಶಕ್ಕೆ ಅವಕಾಶವನ್ನು ಮಾಡಿ ಕೊಟ್ಟು ಅವರು ಹೋಗಿ ಬರುವುದಕ್ಕೆ ಪ್ರವಾಸಭತ್ಯ, ದಿನಭತ್ಯವನ್ನು ಕೊಡುವ ಮೂಲಕ ಸರ್ಕಾರ ಈ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಹಿರಿಯ ಕುಸ್ತಿ ಪಟುಗಳಿಗೆ ಮಾಸಾಶನ ಕೊಡುವ ಬಗ್ಗೆ ಶ್ರೀನಿವಾಸ್‌ರವರು ಹೇಳಿದ್ದಾರೆ. ಈಗ ಏನಾಗಿದೆ ಎಂದರೆ ನಮ್ಮ ಅಧಿಕಾರಿಗಳಿಗೆ ಕಣ್ಣು ತೆರೆದು ನೋಡುವಷ್ಟು ಸೌಜನ್ಯ ಇರುವುದಿಲ್ಲ. ಚಿತ್ರದುರ್ಗ ಜಿಲ್ಲೆಯಿಂದ ೬ ಜನ ಕುಸ್ತಿ ಪಟುಗಳಿಗೆ ಮಾಸಾಶನ ಕೊಡಬೇಕೆಂದು ಅಲ್ಲಿನ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿದ್ದಾರೆ ಯುವಜನ ಕ್ರೀಡಾ ಅಧಿಕಾರ ವರ್ಗದವರು ಅದನ್ನು ಎಲ್ಲಿಟ್ಟಿದ್ದರೋ ಅಲ್ಲೇ ಇಟ್ಟಿದ್ದಾರೆ ನಾವು ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಅಲ್ಲಿಂದ ಇಲ್ಲಿಗೆ ಹೊತ್ತುಕೊಂಡು ಬಂದು ಕೊಟ್ಟರೆ ಅದು ಹಾಗೆಯೇ ಇದೆ. ಇಡೀ ರಾಜ್ಯದಲ್ಲಿ ಹಿರಿಯ ಕುಸ್ತಿ ಪಟುಗಳಿಗೆ ಮತ್ತು ಇನ್ನಿತರ ಕ್ರೀಡಾಪಟುಗಳಿಗೆ ಮಾಸಾಶನ ಕೊಡುವ ವ್ಯವಸ್ಥೆ ಮಾಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಶ್ರೀನಿವಾಸ್‌ರವರು ಹೇಳಿದರು, ನಾವು ಮಾಡಿದ ಕಾನೂನು ಎಂದು ೬೦ ವರ್ಷ ಆಗಿರಬೇಕು, ಅವರಿಗೆ ಪ್ರಶಸ್ತಿ ಪತ್ರ ಇರಬೇಕೆಂದು ತಾವು ಕಾನೂನು ಮಾಡಿದ್ದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್,—ನಾವು ಮಾಡಿದಾಗ ಅದು ಇರಲಿಲ್ಲ. ನಂತರ ಎಲ್ಲವನ್ನು ಸೇರಿಸಿದ್ದಾರೆ.

ಶ್ರೀ ಕೆ. ಮಲ್ಲಪ್ಪ.—ಒಂದು ಮಾತನ್ನು ಶ್ರೀನಿವಾಸ್‌ರವರ ಗಮನಕ್ಕೆ ರುತ್ತೇನೆ. ಅವರು ಯುವಜನ ಸಚಿವರಾಗಿದ್ದಾಗ ಮಾಸಾಶನ ಕೊಡಬೇಕೆಂದು ಒತ್ತಾಯಿಸಿದವರು ನಾವು ಎಂದು ಅವರ ಗಮನಕ್ಕೆ ತರುತ್ತೇನೆ. ನಾವು ಸರ್ಕಾರಕ್ಕೆ ಒಂದು ಮನವಿ ಪತ್ರ ಕೊಟ್ಟು ಬೇಡಿಕೆ ಇಟ್ಟಾಗ ದೇವರಾಜ

ಅರಸುರವರು ಮಾಡಬಹುದೆಂದು ಮಾಡಿದ್ದಾರೆ. ಅದಕ್ಕೆ ಯಾವ ರೂಪದಲ್ಲಿ ಹಣ ಕೊಡುತ್ತಿದ್ದಾರೆ ಎಂಬುದನ್ನು ಹೇಳಬೇಕು. ದೇಶಕ್ಕೆ ಹೆಸರು ಬರಬೇಕಾದರೆ ಕ್ರೀಡಾಪಟುಗಳಿಂದ. ಅಂತರಾಷ್ಟ್ರೀಯ ಮಟ್ಟದಲ್ಲಿ ಕೂಡ ಕ್ರೀಡಾ ಪಟುಗಳಿಂದಲೇ ಹೆಸರು. ಕೂಡಲೇ ಕುಸ್ತಿ ಪಟುಗಳಿಗೆ ಮತ್ತಿತರ ಪಟು ಗಳಿಗೆ ಮಾಸಾಷನ ಕೊಡಬೇಕೆಂದು ಒತ್ತಾಯಿಸುತ್ತಾ ಈ ಬಗ್ಗೆ ಸಚಿವರಿಂದ ಆಶ್ವಾಸನೆ ನಿರೀಕ್ಷಿಸುತ್ತೇನೆ

ಶ್ರೀ ರಮೇಶ ಸಿ. ಜಿಗಜಿಣಗಿ.—ಕುಸ್ತಿಪಟುಗಳಿಗೆ ಮಾಸಾಶನ ಕೊಡತಕ್ಕ ವಿಚಾರವನು ಈಗಾಗಲೇ ಹೇಳಿದ್ದೇನೆ. ಬೇಗ ಅಂದರೆ ಇಲ್ಲೇ ಮಾಡಿಕೊಡುವುದಕ್ಕಾಗುವುದಿಲ್ಲ ಸದಸ್ಯರಿಗೆ ಎಷು ಕಳಕಳಿ ಇದೆಯೋ ಸರ್ಕಾರಕ್ಕೂ ಅಷ್ಟೇ ಕಳಕಳಿ ಇದೆ. ಸಾಧ್ಯವಾದಷ್ಟು ಬೇಗ ಮಾಡಿಕೊಡುತ್ತೇವೆ ಅವರು ಕೂಡ ಮಂತ್ರಿಯಾಗಿ ಕೆಲಸ ಮಾಡಿದವರು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೋದ ವರ್ಷ ಕೂಡ ಹೀಗೇ ಉತ್ತರಿಸಿದ್ದೀರಿ. ಬೇಗ ಅಂದರೆ ಎಷ್ಟು ವರ್ಷದಲ್ಲಿ, ಎಷ್ಟು ತಿಂಗಳಲ್ಲಿ ಎಂದು ಖಚಿತವಾಗಿ ಬೇಡವೆ ?

ಶ್ರೀ ರಮೇಶ ಸಿ. ಜಿಗಜಿಣಗಿ.—ಅವರು ಕೂಡ ಮಂತ್ರಿಯಾಗಿದ್ದವರು. ಈ ರೀತಿ ಕೇಳುವುದು ಸರಿಯಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ರೀತಿ ಹೇಳುವುದೂ ಸರಿಯಲ್ಲ.

ಅಧ್ಯಕ್ಷರು.—ಆದಷ್ಟು ಬೇಗ ಅನ್ನುತ್ತಾರೆ. ಅಶ್ಯೂರೆನ್ಸ್ ಕಮಿಟಿ ಇದೆ ನೋಡುತ್ತಾರೆ ಬಿಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್,—ಹೋದವರ್ಷ ಮತ್ತು ಆಚೆ ವರ್ಷ ಕೂಡ ಇದೇ ಪ್ರಶ್ನೆ ಕೇಳಿದ್ದೇನೆ. ೩ ವರ್ಷವಾಯಿತು ನಾನು ಕೇಳಿ.

ಶ್ರೀ ರಮೇಶ ಸಿ. ಜಿಗಜಿಣಗಿ.—ಸಾಧ್ಯವಾದಷ್ಟು ಬೇಗ ಮಾಸಾಶನ ಕೊಡತಕ್ಕ ವಿಚಾರವನ್ನು ಸರ್ಕಾರದ ಮುಂದಿಟ್ಟು ತೀರ್ಮಾನ ಕೈಗೊಳ್ಳುತ್ತೇವೆ. ಮಲ್ಲಪ್ಪನವರು ಬಾವಿ ತೋಡಿದರೆ ಸವಳು ನೀರು ಬಂದು ರೈತರಿಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಭೂಮಿಯಲ್ಲಿ ಎಂತಹ ನೀರಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯತೆ ಇದೆ. ಆದರೆ ಅದು ಸಂಪೂರ್ಣವಾಗಿ ಉಪಯೋಗಕ್ಕೆ ಬರುತ್ತದೆಯೋ ಅಥವಾ ಇಲ್ಲವೋ ಎಂಬುದು ಬೋರ್ ಹಾಕುವವರೆಗೆ ಗೊತ್ತಾಗುವುದಿಲ್ಲ. ಆದರೂ ಸಾಧ್ಯವಾದ ಮಟ್ಟಿಗೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ದಸರಾ ಕ್ರೀಡಾ ಕೂಟದಲ್ಲಿ ಕುಸ್ತಿ ಪಟುಗಳಿಗೆ ತೊಂದರೆಯಾಗಿದೆ, ವೆಯಿಟ್ ಮೇಲೆ ಪಟುಗಳನ್ನು ಆರಿಸಬಾರದು ಎಂದು ಹೇಳುತ್ತಾರೆ. ದಸರಾ ಕ್ರೀಡಾ ಕೂಟವನ್ನು ನಡೆಸುವವರು ಸ್ಪೋರ್ಟ್ಸ್ ಕೌನ್ಸಿಲ್‌ನವರು. ಈ ತೊಂದರೆಯನ್ನು ನಿವಾರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ,

ಶ್ರೀ ಬಿ. ಆರ್, ನೀಲಕಂಠಪ್ಪ.—ಕುಸ್ತಿ ಪುಟಗಳಿಗೆ ಮಾಸಾಶನ ನೀಡುವ ಬಗ್ಗೆ ಒಂದು ವರ್ಷ ದಿಂದ ಪ್ರತಿಯೊಬ್ಬ ಅಧಿಕಾರಿಗಳ ಹತ್ತಿರ, ಮಂತ್ರಿಗಳ ಹತ್ತಿರ ಹೋಗಿದ್ದೇನೆ. ಹೋದ ವರ್ಷ ಇಟ್ಟಿದ್ದ ಬಡ್ಜೆಟ್ ಕಡಿಮೆ ಇದೆ ಎಂದು ಹಣಕಾಸಿನ ಕಾರ್ಯದರ್ಶಿಗಳು ಹೇಳಿದರು. ಮಾನ್ಯ ಮಂತ್ರಿ ಗಳು ಒಂದು ತಿಂಗಳೊಳಗೆ ಆ ಹಣವನ್ನು ತುಂಬಿ ಕುಸ್ತಿ ಪಟುಗಳಿಗೆ ಮಾಸಾಶನ ಬಿಡುಗಡೆ ಮಾಡಬೇಕೆಂದರು. ಪ್ರತಿಯೊಬ್ಬ ಕಾರ್ಯದರ್ಶಿಗಳ ಹತ್ತಿರ ಹೋಗಿದ್ದೇನೆ. ಮುಖ್ಯ ಮಂತ್ರಿಗಳಿಗೆ ನೇರವಾಗಿ ಹೇಳಿದ್ದೇನೆ. ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿದ್ದೇನೆ. ಎಷ್ಟು ಹಣ ಕಡಿಮೆ ಇದೆ ಅದನ್ನು ತುಂಬಿ ಬಿಡುಗಡೆ ಮಾಡಿ ಎಂದರು, ೨೬ ಜನರಿಗೆ ಡಿ. ಪಿ. ಯವರು ರೆಕಮಂಡ್ ಮಾಡಿದ್ದಾರೆ. ಅದನ್ನು ಬಿಡುಗಡೆ ಮಾಡಲಿಕ್ಕೆ ಇದರಿಂದ ಆಗುತ್ತಿಲ್ಲ. ತಾಂತ್ರಿಕ ತೊಂದರೆ ಅನ್ನುತ್ತಾರೆ, ತಾಂತ್ರಿಕ ತೊಂದರೆ ಏನೂ ಇಲ್ಲ. ಪ್ರತಿಯೊಂದನ್ನು ನಾನು ನೋಡಿದ್ದೇನೆ. ಒಂದು-ಒಂದೂವರೆ ಲಕ್ಷ ರೂಪಾಯಿ ಕಡಿಮೆ ಇದೆ ಎಂದು ಮುಖ್ಯ ಮಂತ್ರಿಗಳ ಹತ್ತಿರ ಮತ್ತು ಯೋಜನಾ ಮಂತ್ರಿಗಳ ಹತ್ತಿರ ಹೋದಾಗ ಹಣ ಬಿಡುಗಡೆ ಮಾಡಿ ಮಾಸಾಶನ ಕೊಡಬಹುದೆಂದು ಮುಖ್ಯ ಮಂತ್ರಿಗಳು ಲೆಟರ್ ಕೊಟ್ಟಿದ್ದಾರೆ.

ಅದೇ ಲೆಟರ್ ಫೈನಾನ್ಸ್ ಸೆಕ್ರೆಟರಿ ಮತ್ತು ಯುವ ಜನ ಸೇವಾ ಮಂತ್ರಿಗಳ ಹತ್ತಿರ ಕೂಡ ಹೋಯಿತು, ತಾಂತ್ರಿಕ ತೊಂದರೆ ಇದೆ ಎಂದು ಹೇಳುತ್ತಿರುವುದು ಸುಳ್ಳು. ತಾಂತ್ರಿಕ ತೊಂದರೆ ಏನೂ ಇಲ್ಲ, ಫೈಲ್ ತರಿಸಿ ನೋಡಿ. ಕೊಡುವುದಿಲ್ಲ ಅಂದರೆ ಹೇಳಿಬಿಡಿ. ನಮ್ಮ ತಾಲ್ಲೂಕಿನಲ್ಲಿ

ಸಂಮಾರು ೨೬ ಜನರದ್ದು ಬಂದಿದೆ. ನೇರವಾಗಿ ಕೊಡಬಹುದು. ಇಡೀ ಜೀವನ ಎಲ್ಲಾ ಪೈಲ್ವಾನ್ ಗಿರಿ ಮಾಡಿ ಸಾಯುವ ಸ್ಥಿತಿಯಲ್ಲಿದ್ದಾರೆ. ಅವರು ನಮ್ಮ ಮನೆ ಹತ್ತಿರ ಬಂದು ಸಾಯುವುದು ಬೇಡ. ತಾಂತ್ರಿಕ ತೊಂದರೆ ದೇವರಾಣೆಗೂ ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.— ನೀವು ಕೊಡಿಸದೇ ಹೋದರೆ ಆ ಪೈಲ್ವಾನರು ನಿಮ್ಮನ್ನು ಬಿಡುವುದಿಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.— ದುಡ್ಡು ಬಿಡುಗಡೆ ಮಾಡಬೇಕು. ಇಲಾಖೆಯವರು ಹೊಸದಾಗಿ ಇದನ್ನು ನೋಡುತ್ತಿರಬಹುದು. ನಾನು ಪ್ರತಿಯೊಂದು ಫೈಲ್ ನೋಡಿದ್ದೇನೆ. ಅದೆಲ್ಲಾ ಹಳೇ ಫೈಲುಗಳು. ನಮ್ಮಪ್ಪನಾಣೆ ನಿಜವಾಗಿಯೂ ಏನೂ ತೊಂದರೆ ಇಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ.— ಹಣವನ್ನು ಬಿಡುಗಡೆ ಮಾಡುವ ವಿಚಾರದಲ್ಲಿ ಕಾಯಿದೆ ಕಾನೂನಿನ ಚೌಕಟ್ಟಿನಲ್ಲಿ ಕ್ರಮವನ್ನು ನಾಳೆಯೋ ತೆಗೆದುಕೊಳ್ಳುತ್ತೇನೆ, ನಾಳೆಯೋ ಅಧಿಕಾರಿಗಳನ್ನು ಕರೆದು ಮೀಟಿಂಗ್ ಮಾಡಿ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ.— ಮಾನ್ಯ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತಂದಿದೆ. ಪುತ್ತೂರಿನಲ್ಲಿ ರಾಜ್ಯ ಮಟ್ಟದ ಕ್ರೀಡೆ ನಡೆಸುವಾಗ ಕ್ರೀಡಾ ಕೌನ್ಸಿಲ್ ಅಧ್ಯಕ್ಷರಾದ ಶ್ರೀ ಬಿ. ಎಸ್. ರಾಘವನ್ ಅವರು ೧೦ ಸಾವಿರ ರೂಪಾಯಿಯನ್ನು ಈ ಕ್ರೀಡೆಗೆ ಕೊಡುತ್ತೇವೆಂದು ಘೋಷಣೆ ಮಾಡಿದ್ದರು. ಆದರೆ ಕಳೆದ ಒಂದೂವರೆ ವರ್ಷದಿಂದ ಆ ದುಡ್ಡು ನಮಗೆ ಮುಟ್ಟಿಲ್ಲ. ಅದರ ಬಗ್ಗೆ ಉತ್ತರ ಹೇಳಲಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ.— ಮಾನ್ಯ ಅಧ್ಯಕ್ಷರೆ, ಕ್ರೀಡಾ ಸ್ಪರ್ಧೆಗಳು ನಡೆದಾಗ ಕ್ರೀಡಾ ಕೌನ್ಸಿಲ್ ಅಧ್ಯಕ್ಷರು ೧೦ ಸಾವಿರ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದು ನಿಜ. ಆದರೆ ಆ ಕ್ರೀಡೆ ನಡೆಸಿರತಕ್ಕ ಸಂಸ್ಥೆಯ ಮೇಲೆ ಸಾರ್ವಜನಿಕರಿಂದ ದೂರುಗಳು ಬಂದಿದ್ದರಿಂದ ನೇರವಾಗಿ ಹಣವನ್ನು ಬಿಡುಗಡೆ ಮಾಡಿಲ್ಲ. ಸಾಧ್ಯವಾದಷ್ಟು ಬೇಗ ಬಿಡುಗಡೆ ಮಾಡುವುದಕ್ಕೆ ರಾಜ್ಯ ಕ್ರೀಡಾ ಮಂಡಲಿಗೆ ಹೇಳುತ್ತೇನೆ.

SRI MOHAMMED LIAQUDDIN. (Bidar)—In Bidar District a stadium was started tobe constructed some 12 years ago. Now the galleries have been completed. Technical sanction is not yet received. Now construction of pavilion is to be taken up. I think by the time the pavilion is completed the entire stadium will fall down. It has already fallen. Galleries have also fallen. I would like to know from the hon'ble Minister when the stadium will be completed. Next point is, regarding the swimming pool. When Iwas the President of the Municipality, construction of swimming pool was proposed but till this day no sanction is accorded and no construction is started. In respect of this also I want an answer from the hon'ble Minister. Then about the umpires. Our standard of games has considerably fallen at the national level. Basic difficulty is in the training system. All the umpires are sub-standard umpires. I suggest to the Hon'ble Minister to conduct a training course for the umpires to bring up the standard of games and to regain the past famous name of Karnataka in games. I would request the Hon'ble Minister to give a clear answer.

ಶ್ರೀ ರಮೇಶ್ ಸಿ. ಜಿಗಜಿಣಗಿ.— ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ಸ್ಟೇಡಿಯಂ ಮಂಜೂರು ಮಾಡಿಲ್ಲ ಎಂದು ಅವರು ಹೇಳುತ್ತಿದ್ದಾರೆ. ೧೯ ಜಿಲ್ಲೆಗಳಲ್ಲೂ ಜಿಲ್ಲಾ ಮಟ್ಟದ

ಕ್ರೀಡಾಂಗಣವನ್ನು ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅದರ ಜೊತೆಗೆ ಬೀದರ್‌ನಲ್ಲೂ ಮಾಡಲು ತೀರ್ಮಾನ ಮಾಡಿದ್ದೇವೆ ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಸ್ವಿಮಿಂಗ್‌ಪೂಲ್ ಬಗ್ಗೆ ಹೇಳಿದ್ದಾರೆ. ಅದನ್ನು ಮೊದಲು ಪ್ರಾವಿಷನ್ ಮಾಡಿಕೊಂಡಿದ್ದರು. ಅದರ ಬಗ್ಗೆ ಹೆಚ್ಚಿನ ವಿವರ ಬೇಕಾದರೆ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಸಧ್ಯದಲ್ಲಿ ವಿವರ ಇಲ್ಲ. ನಂತರ ಒಳ್ಳೆಯ ಅಂಪೈರ್‌ಗಳನ್ನು ನೇಮಕಾತಿ ಮಾಡಿ ಆಟದ ಗುಣ ಮಟ್ಟವನ್ನು ಸರಿಯಾಗಿ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ; ಅವರ ಸಲಹೆಯನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

೫-೩೦ ಪಿ. ಎಂ.

† ಶ್ರೀ ಎಸ್. ಎಸ್. ಕಡಪಟ್ಟಿ.— ಸನ್ಮಾನ್ಯ ಅಧ್ಯಕ್ಷರೇ, ನೆರೆ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ಅಲ್ಲಿನ ಗಣಿಗಳ ಮೇಲೆ ಬರುವ ಆದಾಯವನ್ನು ಬಹುಪಾಲು ಹೆಚ್ಚು ಮಾಡಿ ಅವರು ತಮ್ಮ ರಾಜ್ಯದ ಆದಾಯವನ್ನು ಹೆಚ್ಚು ಮಾಡಿಕೊಂಡಿದ್ದಾರೆ. ಆ ಬಗ್ಗೆ ನಾನು ಒಂದು ಮನವಿ ಪ್ರತಿಯನ್ನು ಕೂಡಾ ಕಳೆದ ವರ್ಷ ಈ ಸದನದಲ್ಲಿ ಹಾಗೂ ಮಾನ್ಯ ಮಂತ್ರಿಯವರಿಗೂ ಕೊಟ್ಟಿದ್ದೆ. ಇದರ ಬಗ್ಗೆ ನಮ್ಮ ರಾಜ್ಯದ ಆದಾಯವನ್ನು ಸಹ ಹೆಚ್ಚು ಮಾಡಬೇಕು ಎಂದು ಹಿಂದಿನ ಸಲ ಮಂತ್ರಿಗಳು ಕೂಡಾ ಆಶ್ವಾಸನೆ ಕೊಟ್ಟಿದ್ದರು. ಬೇಗನೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಒಂದು ವರ್ಷ ಆಗಿ ಹೋಯಿತು. ಇದರಿಂದ ರಾಜ್ಯಕ್ಕೆ ಆದಾಯ ಬರುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಸುಗ್ರೀವಾಜ್ಞೆ ಮಾಡಿಯಾದರೂ ನಿಷ್ಕರ್ಷೆ ಮಾಡಬೇಕು. ಇನ್ನು ಅನ್ ಆಥರೈಸ್ಡ್ ಕ್ವಾರೀಸ್ ನಮ್ಮ ತಾಲ್ಲೂಕಿನಲ್ಲಿ ಬಹು ಮಟ್ಟಿಗೆ ನಡೆದಿದೆ. ಸರ್ಕಾರಿ ಭೂಮಿಯಲ್ಲೂ ಕೂಡಾ ಅನ್ ಆಥರೈಸ್ಡ್ ಕ್ವಾರಿ ಕೆಲಸ ನಡೆದಿದೆ. ಈ ಬಗ್ಗೆ ಅನೇಕ ಸಲ ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಕೂಡಾ ಪರಿಣಾಮಕಾರಿ ರೀತಿಯಲ್ಲಿ ತಡೆಗಟ್ಟುವುದಕ್ಕೆ ಆಗಿಲ್ಲ. ಈ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ?

ಶ್ರೀ ರಮೇಶ್ ಸಿ. ಜಿಗಜಿಣಗಿ.— ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ಬೇರೆ ರಾಜ್ಯದಲ್ಲಿ ನಮಗಿಂತಲೂ ಹೆಚ್ಚು ಆದಾಯ ಇದೆ ಎಂದು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಸ್ವಲ್ಪ ಮಟ್ಟಿಗೆ ಕಾಯ್ದೆಯಲ್ಲಿ ಕೆಲವು ಲೋಪದೋಷಗಳು ಇರುವುದರಿಂದ ಅದನ್ನು ಸರಿ ಮಾಡಿ ಆಮೇಲೆ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚಿನ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಅವರ ಕ್ಷೇತ್ರದಲ್ಲಿ ಏನು ಅನಧಿಕೃತ ಕ್ವಾರಿಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಅದು ನಿಜ ಇದೆ. ಹೈಕೋರ್ಟಿನ ಆಜ್ಞೆ ಆದ ಮೇಲೆ ಕೆಲವೊಂದು ಕ್ವಾರಿಗಳು ಬಂದಿದ್ದು, ಇದರಲ್ಲಿ ಕೆಲವೊಂದು ಕಾನೂನು ತೊಡಕುಗಳು ಇರುತ್ತವೆ. ಇವೆಲ್ಲಾ ಕಾಯ್ದೆಯ ತಿದ್ದುಪಡಿ ಆದ ಮೇಲೆ ಸರಿ ಹೋಗುತ್ತವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮದನ ಗೋಪಾಲ ನಾಯಕ್.— ಮಾನ್ಯ ಮಂತ್ರಿಗಳು ಮಾತನಾಡುತ್ತಾ ತಮ್ಮ ಹತ್ತಿರ ಯುವ ಜನ ಸೇವಾ ಇಲಾಖೆಯಲ್ಲಿ ೫೨ ಅಸೋಷಿಯೇಷನ್‌ಗಳು ಇವೆಯೆಂದು ಹೇಳಿದ್ದಾರೆ. ಅವುಗಳು ಯಾವುವು ? ಹಾಗೂ ಹೇಗೆ ಕಾರ್ಯನಿರ್ವಹಿಸುತ್ತಿವೆಯೆಂಬುದನ್ನು ಹೇಳುತ್ತೀರಾ ? ನನ್ನ ತಾಲ್ಲೂಕಿನಲ್ಲಿ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಮಾಡುವ ಸಲುವಾಗಿ ಸಲಹೆ ಪಡೆಯಲು ಬ್ಯಾಡ್ಮಿಂಟನ್ ಅಸೋಷಿಯೇಷನ್‌ಗೆ ಹೋದೆ. ಅಲ್ಲಿ ಬರೀ ಬೋರ್ಡ್ ಇತ್ತೇ ವಿನಹ ಬೇರೆ ಯಾರೂ ಇರಲಿಲ್ಲ. ಸೆಕ್ರೆಟರಿಯವರು ಎಲ್ಲಿ ಇರುತ್ತಾರೆಂದು ಅಲ್ಲಿ ಒಬ್ಬರನ್ನು ಕೇಳಲಾಗಿ ಮಲ್ಲೇಶ್ವರಂ ಕ್ಲಬ್‌ನಲ್ಲಿ ಇರುತ್ತಾರೆ ಎಂದು ಹೇಳಿದರು. ನಾನು ಅಲ್ಲಿಗೆ ಹೋದಾಗ ಅವರು ಟೈಮ್ ಕೊಟ್ಟರು. ನಾನು ಅಲ್ಲಿಗೆ ಟೈಮ್ ಪ್ರಕಾರ ಹೋದರೂ ಅವರು ಮಾತನಾಡುವುದಕ್ಕೆ ರೆಡಿಯಿರಲಿಲ್ಲ. ಈ ರೀತಿಯಾದ ಅಸೋಶಿಯೇಷನ್‌ಗಳು. ಬರೀ ಬೋರ್ಡ್‌ಗಳು ಇವೆಯೇ ಹೊರತು ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿಲ್ಲ. ಈ ಅಸೋಷಿಯೇಷನ್ಸ್ ಏನಿವೆಯೋ ಇವುಗಳೆಲ್ಲಾ ಒಂದೇ ಸ್ಥಳದಲ್ಲಿ ಇರುವಂತೆ ಕಂಠೀರವಾ ಸ್ಟೇಡಿಯಂನಲ್ಲಿ ಏಕೆ ಅವಕಾಶವನ್ನು ಮಾಡಿಕೊಡಬಾರದು ?

ಇನ್ನು ಎರಡನೆಯದಾಗಿ ನಮ್ಮ ರಾಜ್ಯದಲ್ಲಿ ಎನ್.ಐ.ಎಸ್, ಕೋಚ್‌ಗಳು ಬಹಳ ಕಡಿಮೆ ಇದ್ದಾರೆ. ಇದರಿಂದಾಗಿ ಪಟಿಯಾಲಾದಿಂದ ಬಂದಿರುವ ಕೋಚಸ್ ನಾವು ನೋಡಬಹುದು. ನಮ್ಮ ರಾಜ್ಯದ ಕೋಚ್‌ಗಳು ಎಷ್ಟು ಜನ ಇದ್ದಾರೆ? ಪಟಿಯಾಲಾದಿಂದ ಬಂದಿರತಕ್ಕ ಎನ್ ಐ ಎಸ್ ಕೋಚ್‌ಗಳಿಗೆ ಏನಾದರೂ ವಸತಿ ವ್ಯವಸ್ಥೆ ಮಾಡಿಕೊಟ್ಟಿದ್ದೀರಾ?

ಇನ್ನು ಮೂರನೆಯದಾಗಿ ತಾಲ್ಲೂಕು ಮಟ್ಟದ ಕ್ರೀಡಾ ಪಟುಗಳಿಗೆ ಬಹುಮಾನ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಮಲ್ಲಪ್ಪನವರು ಹೇಳಿದರು. ಮೊದಲು ದಸರಾ ಸ್ಪೋರ್ಟ್ಸ್ ಪ್ರಾರಂಭ ಆಗುತ್ತಿದ್ದುದು ತಾಲ್ಲೂಕು ಮಟ್ಟದಲ್ಲಿ ಎಂದು. ಪ್ರತಿಯೊಂದು ಕಾಂಪಿಟೀಷನ್ ಕೂಡಾ ಮೊದಲು ತಾಲ್ಲೂಕು, ನಂತರ ಜಿಲ್ಲಾ ಮಟ್ಟ, ಆ ನಂತರ ಡಿವಿಜನ್ ಹಾಗೂ ಸ್ಟೇಟ್ ಲೆವೆಲ್‌ನಲ್ಲಿ ಹಂತಹಂತವಾಗಿ ಕ್ರೀಡೆಗಳು ನಡೆಯುತ್ತಿದ್ದವು. ಈಗ ಅದನ್ನೆಲ್ಲಾ ರದ್ದು ಮಾಡಿ ಬರೀ ಲಿಟ್ರರಿ ಕಾಂಪಿಟೇಷನ್, ಡ್ರಾಮಾ ಕಾಂಪಿಟೇಷನ್ ಇಟ್ಟಿದ್ದಾರೆ ಇದರಿಂದ ಹಳ್ಳಿ ಮಟ್ಟದಲ್ಲಿ ಇರುವ ಕ್ರೀಡಾಪಟುವಿಗೆ ಅವಕಾಶ ಸಿಗುವುದಿಲ್ಲ. ಆದ್ದರಿಂದ ರದ್ದು ಮಾಡಿರುವುದನ್ನು ಪುನಃ ಪ್ರಾರಂಭ ಮಾಡುವ ವಿಚಾರ ಇದೆಯೇ

ಶ್ರೀ ರಮೇಶ್ ಸಿ. ಜಿಗಜಿಣಗಿ.—ರದ್ದು ಮಾಡಿರುವುದನ್ನು ಪುನಃ ಪ್ರಾರಂಭ ಮಾಡುವ ವಿಷಯ ಸರ್ಕಾರದ ಮುಂದೆ ಇಲ್ಲ ಎಂದು ಹೇಳಿ, ಏನು ಶಿ ಅಸೋಶಿಯೇಷನ್‌ಗಳ ಬಗ್ಗೆ ಕೇಳಿದ್ದಾರೆ ಆ ಶಿ ಅಸೋಶಿಯೇಷನ್‌ಗಳ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುತ್ತೇನೆ.

ಎರಡನೆಯದಾಗಿ ಅಸೋಸಿಯೇಶನ್‌ಗಳ ಮೇಲೆ ಡೈರೆಕ್ಟ್ ಆಗಿ ಇಲಾಖೆಗೆ ಹತೋಟಿ ಇಲ್ಲ. ಇಲಾಖೆ ದುಡ್ಡು ಕೊಟ್ಟಮೇಲೆ ೯೦ ದಿವಸಗಳಲ್ಲಿ ಕೊಟ್ಟಿರುವ ದುಡ್ಡಿಗೆ ರಸೀತಿ ಕೊಡಬೇಕು ಎಂದಿದೆ. ಅದನ್ನು ಕೊಡದೇ ಇದ್ದರೆ ಮಾತ್ರ ಕ್ರಮ ತೆಗೆದುಕೊಳ್ಳುತ್ತೇವೆ ವಿನಹ ಡೈರೆಕ್ಟ್ ಆಗಿ ಅಸೋಸಿ-ಯೇಶನ್‌ಗಳು ನಮ್ಮ ಕಂಟ್ರೋಲ್‌ನಲ್ಲಿ ಬರುವುದಿಲ್ಲ. ಇನ್ನು ಎನ್.ಐ.ಎಸ್. ಕೋಚ್‌ಗಳ ಬಗ್ಗೆ ಹೇಳುತ್ತಾ ಇವರು ಬಹಳ ಕಡಿಮೆ ಇದ್ದಾರೆ ಎಂದು ಹೇಳಿದ್ದಾರೆ. ನಿಜ, ಎನ್.ಐ.ಎಸ್. ಟ್ರೈನಿಂಗ್ ತೆಗೆದುಕೊಳ್ಳತಕ್ಕಂಥ ಜನ ಕಡಿಮೆ ಇದ್ದಾರೆ. ಇದನ್ನು ಹೆಚ್ಚಿಗೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಈಗ ತಾಲ್ಲೂಕು ಮಟ್ಟದಲ್ಲಿ ನಡೆಯತಕ್ಕಂಥ ಕ್ರೀಡೆಗಳಲ್ಲಿ ಕ್ರೀಡಾಪಟುಗಳಿಗೆ ಬಹುಮಾನ ಹಂಚುತ್ತಿಲ್ಲ ಎಂದು ಹೇಳಿದ್ದಾರೆ. ಆದರೆ ಒಂದಲ್ಲ ಒಂದು ರೀತಿಯಿಂದ ಇದನ್ನು ಹಂಚುತ್ತಿದ್ದೇವೆ ಎಂದು ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.—ಶ್ರೀ ಡಿ. ಟಿ. ಜಯಕುಮಾರ್ ನೀವು ಕೇಳಿ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ, ಆಕಡೆಯುವರಿಗೊಬ್ಬರಿಗೆ ಈ ಕಡೆಯುವರೊಬ್ಬರಿಗೆ ಅಂತ ನಾನು ಎಲ್ಲರಿಗೂ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಎಂ. ಶಿವಣ್ಣ.—ತಮ್ಮನ್ನು ಎಷ್ಟು ಸಾರಿ ಕೇಳಬೇಕು. ನನಗೆ ಮಾತನಾಡುವುದಕ್ಕೂ ಅವಕಾಶ ಇಲ್ಲ. ಈಗಲೂ ಅವಕಾಶ ಇಲ್ಲವೆಂದರೆ ಹೇಗೆ ? ಎಷ್ಟು ಸಾರಿ ತಮ್ಮನ್ನು ಕೇಳಬೇಕು ?

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಎಲ್ಲರಿಗೂ ಅವಕಾಶ ಕೊಡುತ್ತಿದ್ದೇನೆ ನಾನು.

ಶ್ರೀ ಡಿ.ಟಿ. ಜಯಕುಮಾರ್.—ಸನ್ಮಾನ್ಯ ಅಧ್ಯಕ್ಷರೇ, ಜನತಾ ಸರ್ಕಾರ ಬಂದಮೇಲೆ ತಾಲ್ಲೂಕು ಮತ್ತು ಜಿಲ್ಲೆಗಳಲ್ಲಿ ಕ್ರೀಡಾಂಗಣ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದರು. ಈ ತಾಲ್ಲೂಕುಗಳಲ್ಲಿ ಹಣವನ್ನು ಸಾಕಷ್ಟು ಒದಗಿಸಿದ್ದಾರೆ. ಆದರೆ ಮಂಗಳೂರು ಕ್ರೀಡಾಂಗಣಕ್ಕೆ ಅಲ್ಲಿಯ ಮುನಿಸಿಪಾಲಿಟಿಯವರೇ ನಡೆಸಬೇಕೆಂದು ಆದೇಶವನ್ನು ನೀಡಿದ್ದಾರೆ. ಇದು ತಾರತಮ್ಯ ಮಾಡಿದ ಹಾಗೆ ಆಗುತ್ತದೆ. ಈ ರೀತಿ ಸಂಬಂಧಪಟ್ಟ ಮುನಿಸಿಪಾಲಿಟಿ ಅಥವಾ ಕಾರ್ಪೋರೇಷನ್‌ಗಳೇ ಆಯಾಯ ಕ್ರೀಡಾಂಗಣಗಳನ್ನು ಕಟ್ಟಿಸಿಕೊಡಬೇಕೆಂದು ಪರವಾನಗಿ ಕೊಡುವುದಾದರೆ ಮೈಸೂರು ನಗರದ ಕ್ರೀಡಾಂಗಣವನ್ನು ಮೈಸೂರು ಕಾರ್ಪೋರೇಷನ್‌ಗೆ ವಹಿಸಿಕೊಡಿ. ಈ ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಕ್ರೀಡಾಂಗಣವನ್ನು ಮುನಿಸಿಪಾಲಿಟಿಯವರಿಗೇ ವಹಿಸಿಕೊಟ್ಟಿದ್ದು ನಿಜ. ಆದರೆ ಈ ರೀತಿ ತಾರತಮ್ಯ ಮಾಡಿದ್ದೀರಿ ಎಂದು ಹೇಳಿದ್ದಾರೆ. ತಾರತಮ್ಯ ಎಂದು ಇಲ್ಲಿ ಹೇಳುವುದಕ್ಕೆ ನಾನು ಬಯಸುವುದಿಲ್ಲ. ನಾನು ಇಷ್ಟು

ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ನಮ್ಮ ಇಲಾಖೆಗೆ ಸಂಬಂಧಪಟ್ಟಿರತಕ್ಕಂಥ ಕ್ರೀಡಾಂಗಣಗಳನ್ನು ಮುನಿಸಿಪಾಲಿಟಿಗೆ ವಹಿಸುವುದು ಅಷ್ಟು ಉಚಿತ ಅಲ್ಲವೆಂದು ಅಭಿಪ್ರಾಯ ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು.--ಶಿವಣ್ಣನವರೇ ನೀವು ಕೇಳಿ. ನಿಮಗೆ ಸ್ವಲ್ಪ ತಾಳ್ಮೆ ಇರಬೇಕು.

ಶ್ರೀ ಎಂ. ಶಿವಣ್ಣ.--ಅಧ್ಯಕ್ಷರೇ, ನಾನು ನಿನ್ನೆ ಕೂಡ ತಮ್ಮನ್ನು ಕೇಳಿದ್ದೆ.

ಅಧ್ಯಕ್ಷರು.--ಎಲ್ಲರಿಗೂ ಅವಕಾಶ ಕೊಡಬೇಕು ನಿಜ. ಅದೇ ಕೆಲಸವನ್ನು ನಾನು ಇಲ್ಲಿ ಮಾಡುತ್ತಿದ್ದೇನೆ. ಆ ಕಡೆಯಲ್ಲಿ ಒಬ್ಬರಿಗೆ, ಈ ಕಡೆಯಲ್ಲಿ ಒಬ್ಬರಿಗೆ ಅಂತ ಅವಕಾಶ ಕೊಡುತ್ತಿದ್ದೇನೆ. ನೀವು ಏನೋ ಮಾತನಾಡುತ್ತೀರಿ ? ಆಗಲಿ ಕೇಳಿ.

ಶ್ರೀ ಎಂ. ಶಿವಣ್ಣ.--ಮಾನ್ಯ ಅಧ್ಯಕ್ಷರೇ, ರಾಜ್ಯಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಈ ಯುವಜನ ಸೇವಾ ಇಲಾಖೆಯ ಅಧಿಕಾರಿಗಳನ್ನು ನೋಡುತ್ತಿದ್ದೇವೆ. ಆದರೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಏನಿದ್ದಾರೆ ಅವರು ಕೊಬ್ಬು ಬೆಳೆಸಿ ಕೂತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಯಾವ ಕೆಲಸವೂ ಆಗುತ್ತಿಲ್ಲ. ಒಂದೊಂದು ತಾಲ್ಲೂಕಿನಲ್ಲಿ ಈ ಯುವಕ-ಯುವತಿ ಮಂಡಲಿಗಳು ನೂರು-ಇನ್ನೂರು ಇವೆ. ಯಾವ ಯುವಕ ಮಂಡಲದಲ್ಲಾಗಲೀ, ಯುವತಿ ಮಂಡಲದಲ್ಲಾಗಲೀ ಯಾವುದೇ ಕೆಲಸ ಮಾಡುತ್ತಿಲ್ಲ, ನಾನು ಒಂದು ಮಂಡಲದ ಅಧ್ಯಕ್ಷನಾಗಿದ್ದೇನೆ. ಹತ್ತು-ಹದಿನೈದು ವರ್ಷಗಳಿಂದ ಕೂಡ ಏನೂ ಕೆಲಸ ನಡೆಯುತ್ತಿಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಮೈಸೂರು ನಗರದ ಕ್ರೀಡಾಂಗಣ ಕೆಲಸ ಕುಂಟುತ್ತಾ ನಡೆದಿದೆ. ಇದನ್ನು ಬೇಗ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ? ಬೆಂಗಳೂರು ನಗರದಲ್ಲಿರತಕ್ಕಂಥ ಬಿ.ಡಿ.ಎ.ನಲ್ಲಿ ಕ್ರೀಡಾಪಟುಗಳಿಗೆ ಸೈಟುಗಳನ್ನು ಕೊಡುವುದಕ್ಕೆ ಸಚಿವರು ಹೇಳಿದ್ದಾರೆ. ಮೈಸೂರು ಮತ್ತು ಇನ್ನಿತರ ನಗರಗಳಲ್ಲೂ ಕೂಡ ಅನೇಕ ಕ್ರೀಡಾಪಟುಗಳು ಇದ್ದಾರೆ. ಅನೇಕ ಸ್ನೇಹಿತರು ಹೇಳಿದ ಹಾಗೆ ಅನೇಕ ಕುಸ್ತಿ ಪೈಲ್ವಾನರುಗಳು ನಮ್ಮನ್ನು ತಮಗೆ ಸೈಟು ಕೊಡಿ ಮನೆ ಕೊಡಿಸಿ ಎಂದು ಕೇಳುತ್ತಿದ್ದಾರೆ. ದಾರಾಸಿಂಗ್, ಕಿಂಗ್‌ಕಾಂಗ್‌ರಂಥ ಮಹಾನ್ ಕುಸ್ತಿಪಟುಗಳನ್ನು ನಾವು ಈ ದೇಶದಲ್ಲಿ ನೋಡುತ್ತಿದ್ದೇವೆ ನಮ್ಮ ರಾಜ್ಯದಲ್ಲೂ ನೋಡಿದ್ದೇವೆ. ಮೈಸೂರು ಭಾಗದಲ್ಲಂತೂ, ಮೈಸೂರು ಮಹಾರಾಜರ ಕಾಲದಿಂದಲೂ ಉತ್ತರ ಕುಸ್ತಿಪಟುಗಳನ್ನು ನಾವು ನೋಡಿದ್ದೇನೆ, ಇಂತಹ ಕ್ರೀಡಾಪಟುಗಳಿಗಾಗಿ ತಾವು ಏನು ಕಾರ್ಯಕ್ರಮ ಕೈಗೊಳ್ಳುತ್ತೀರೆಂದು ನಾನು ಕೇಳಬಯಸುತ್ತೇನೆ. ಹಾಗೆಯೇ ಶಾಲೆ ಮತ್ತು ಕಾಲೇಜುಗಳಲ್ಲಿ ಖಾಸಗಿಯಾಗಿ ನಡೆಸತಕ್ಕಂಥ ಸಂದರ್ಭದಲ್ಲಿ ಅಲ್ಲಿ ಆಡಲಿಕ್ಕೆ ಸರಿಯಾದ ಜಾಗ ಇರುವುದಿಲ್ಲ. ಕ್ರೀಡಾಂಗಣ ಇರುವುದಿಲ್ಲ. ಅವರು ಕ್ರೀಡಾಂಗಣಕ್ಕಾಗಿ ಕಟ್ಟುನಿಟ್ಟಾಗಿ ಜಾಗವನ್ನು ಮೀಸಲಿಡಬೇಕು ಎನ್ನುವ ಸೂಚನೆಯನ್ನು ಅವರಿಗೆ ತಾವು ವಿದ್ಯಾ ಇಲಾಖೆಯ ಮೂಲಕ ಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಶಾಲೆಗಳಲ್ಲೂ ಕ್ರೀಡಾಂಗಣ ಇರಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೆ ಜಿಲ್ಲಾ ಕ್ರೀಡಾಂಗಣ ಮಾಡುವುದು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ, ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಮಂಡಲಗಳಲ್ಲಿ ಕ್ರೀಡಾಂಗಣ ಇರಬೇಕೆಂದು ಸಂಬಂಧಪಟ್ಟ ಜಿಲ್ಲಾ ಪರಿಷತ್ತುಗಳಿಗೆ ನಮ್ಮ ಇಲಾಖೆಯ ಮುಖಾಂತರ ತಿಳಿಸುತ್ತೇನೆ. ಎರಡನೇಯದಾಗಿ, ತಾಲ್ಲೂಕು ಮಟ್ಟದ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ದೂರನ್ನು ಇಟ್ಟಿದ್ದಾರೆ. ಇವುಗಳನ್ನು ಚುರುಕುಗೊಳಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಇನ್ನೊಂದು ವಿಚಾರ. ಬೆಂಗಳೂರು ನಗರದಲ್ಲಿ ಒಳ್ಳೆಯ ಕ್ರೀಡಾಪಟುಗಳಿಗೆ ಬಿ.ಡಿ.ಎ. ಸೈಟು ಕೊಟ್ಟಿದ್ದಾರೆ, ಮೈಸೂರು ಅಥವಾ ಬೇರೆ ಕಡೆಗಳಲ್ಲಿ ಇರತಕ್ಕ ಕ್ರೀಡಾಪಟುಗಳಿಗೆ ಏಕೆ ಸೈಟುಗಳನ್ನು ಕೊಡಿಸಬಾರದು ಎಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ. ಇದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸಿ. ಎಂ. ಉದಾಸಿ.—ಸ್ಥಳೀಯ ಸಂಘ-ಸಂಸ್ಥೆಗಳವರು ಕ್ರೀಡಾಕೂಟಗಳನ್ನು ಏರ್ಪಡಿಸಿದ ಬಗ್ಗೆ ಸರ್ಕಾರದಿಂದ ಸಿಗತಕ್ಕ ಸಹಾಯಧನ ಇದುವರೆಗೂ ಸಿಗುತ್ತಾ ಇಲ್ಲ. ಬೆಂಗಳೂರಿನಲ್ಲಿರತಕ್ಕ ಸಂಸ್ಥೆಗಳವರಿಗೆ ಮಾತ್ರ ಈ ಸಹಾಯಧನ ಸಿಗುತ್ತಿದೆ. ಗ್ರಾಮೀಣ ಭಾಗದ ಸಂಘಸಂಸ್ಥೆಗಳವರು

ಸರ್ಕಾರಕ್ಕೆ ಸಹಾಯಧನಕ್ಕೆ ಕೊಟ್ಟ ಅರ್ಜಿಗಳಿಗೆ, ಸಿಗುತ್ತಾ ಇಲ್ಲ. ಈ ಬಗ್ಗೆ ಸರಿಯಾದ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಮಂಗಳೂರಿನಲ್ಲಿರತಕ್ಕ ಸ್ಟೇಡಿಯಂ ಈಗಾಗಲೇ ಅಲ್ಲಿನ ಮುನಿಸಿಪಾಲಿಟಿಯವರಿಗೆ ನಿಯೋಜಿಸಲ್ಪಟ್ಟಿದೆ ಎಂದು ಕೇಳಿಬಂದಿದೆ. ಅದೇ ರೀತಿ, ಕಾನೂನು ಪ್ರಕಾರ ಕೊಡುವುದಕ್ಕೆ ಸಾಧ್ಯವಿದ್ದರೆ, ಧಾರವಾಡದಲ್ಲಿರುವಂಥ ಆರ್. ಎನ್. ಶೆಟ್ಟಿ ಕ್ರೀಡಾಂಗಣವನ್ನು ಅಲ್ಲಿನ ಕಾರ್ಪೊರೇಷನ್‌ಗೆ ಏಕೆ ವಹಿಸಬಾರದು? ಧಾರವಾಡದಲ್ಲಿ ಆರ್, ಎಸ್. ಶೆಟ್ಟಿ ಕ್ರೀಡಾಂಗಣ ಸುಸಜ್ಜಿತವಾಗಿ ತಯಾರಾಗಿದೆ. ಈ ಕ್ರೀಡಾಂಗಣದಲ್ಲಿ ಸತತವಾಗಿ ಆಟಗಳ ಚಟುವಟಿಕೆಗಳು ನಡೆಯಬೇಕು. ಧಾರವಾಡದಲ್ಲಿ ಎರಡು ವಿಶ್ವವಿದ್ಯಾನಿಲಯಗಳು ಇವೆ, ಮತ್ತು ಯುವಕ ಸಂಘಗಳು ಇವೆ. ಅಲ್ಲಿ ಸತತವಾಗಿ ಆಟಗಳು ನಡೆಯುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಹೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಬೆಲ್ಲದ್‌ರವರು ಕೇಳಿದ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಜಯಕುಮಾರ್‌ರವರು ಕೇಳಿದ್ದಾರೆ, ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಆರ್. ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಸತತವಾಗಿ ಆಟಗಳ ಚಟುವಟಿಕೆ ನಡೆಯುವುದಕ್ಕೆ ಇಲಾಖೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಆರ್.ಎನ್. ಶೆಟ್ಟಿ ಕ್ರೀಡಾಂಗಣದ ಬಗ್ಗೆ ಧಾರವಾಡದಲ್ಲಿ ನಮ್ಮ ಇಲಾಖೆಯವರು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದಾರೆಂದು ನನ್ನ ಭಾವನೆ. ಆದರೆ, ಇನ್ನೂ ಈ ಬಗ್ಗೆ ಕಾರ್ಯಕ್ರಮ ನಡೆಯದೇ ಇದ್ದರೆ, ಮುಂದೆ ಕಾರ್ಯಕ್ರಮಗಳು ನಡೆಯುವಂಥ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಕೆ, ಹೆಚ್. ಶ್ರೀನಿವಾಸ್ —ಮಾನ್ಯ ಅಧ್ಯಕ್ಷರೇ ಗ್ರಾಮೀಣ ಭಾಗದಲ್ಲಿ ಕ್ರೀಡೆಗೆ ಉತ್ತೇಜನದ ಬಗ್ಗೆ ಬರೀ ಭಾಷಣ ಮಾಡುತ್ತಿದ್ದೇವೆಯೋ ಹೊರತು ನಿಜವಾಗಿಯೂ ಯಾವುದೇ ವಿಶೇಷವಾದ ಕಾರ್ಯಕ್ರಮ ಹಾಕಿ ಕೈಗೊಂಡಿಲ್ಲ. ಗ್ರಾಮೀಣ ಮಟ್ಟದಲ್ಲಿ ಒಂದು ಸ್ಟೇಡಿಯಂ, ಈಜುಕೊಳ ಮುಂತಾದ ವ್ಯವಸ್ಥೆ ಮಾಡುವ ವಿಚಾರ ಬಹಳ ದೂರದಲ್ಲಿದೆ. ವಿದೇಶಿ ರಾಷ್ಟ್ರಗಳು ಕೂಡ ಸ್ಟೇಡಿಯಂ, ಈಜುಕೊಳಗಳನ್ನು ಪಟ್ಟಣ ಪ್ರದೇಶಗಳಲ್ಲಿ ಕೊಡುವುದಕ್ಕಿಂತ ಮುಂಚೆ ಗ್ರಾಮೀಣ ಭಾಗದಲ್ಲಿ, ಏನೇನು ಅನುಕೂಲತೆಗಳು ಇವೆ,ಏನೇನು ಸಾಧ್ಯತೆಗಳು ಇವೆ ಎಂಬುದನ್ನು ನೋಡಿಕೊಂಡು ಈ ವ್ಯವಸ್ಥೆಯನ್ನು ಮಾಡಿದ್ದಾರೆ. ಸಣ್ಣಪುಟ್ಟ ಕೆರೆ ಇದ್ದರೆ ಅದರಲ್ಲಿ 10 ಹುಡುಗರಿಗೆ ಈಜುವ ತರಬೇತಿ ಕೊಡುವುದು, ಒಂದು ಮೈದಾನ ಇದ್ದರೆ ಅದನ್ನೇ ಸ್ಟೇಡಿಯಂ ತರಹ ಮಾಡಿ ಕೊಡುವಂತಹ ತರಬೇತಿ ವ್ಯವಸ್ಥೆ ಮಾಡಿದ್ದಾರೆ. ನಮ್ಮಲ್ಲಿ ದೊಡ್ಡ ತೊಂದರೆ ಏನೆಂದರೆ, ಗ್ರಾಮೀಣ ಭಾಗದಲ್ಲಿ ಈ ಕ್ರೀಡೆಗೆ ತರಬೇತಿ ಕೊಡುವುದಕ್ಕೆ ಯಾರೂ ಇಲ್ಲ. ಇವತ್ತು ಗ್ರಾಮೀಣ ಭಾಗದಲ್ಲಿ ಇರತಕ್ಕ ಅನುಕೂಲತೆಗಳೇ ಸಾಕು. ಇವತ್ತು ನಾವು ಯುವಕರಿಗೆ ಈ ಬಗ್ಗೆ ತರಬೇತಿಯನ್ನು ಕೊಡುವಂಥ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ರೂಪಿಸದೇ ಹೋದರೆ, ಗ್ರಾಮೀಣ ಭಾಗ ಎಂದು ಬರೀ ಭಾಷಣ ಮಾಡಬಹುದೇ ಹೊರತು, ನಮ್ಮ ಕಾಲಕ್ಕೆ ಆಗದೇ ಹೋದರೂ ನಮ್ಮ ಮೊಮ್ಮಕ್ಕಳ ಕಾಲಕ್ಕಾದರೂ ಆಗಬೇಕಾದ ವ್ಯವಸ್ಥೆಯ ಬಗ್ಗೆ ನಾವು ಚಿಂತನೆ ಮಾಡಿಲ್ಲ. ವಿದೇಶೀ ರಾಷ್ಟ್ರಗಳವರು ಎಲ್ಲಾ ಸೌಲಭ್ಯಗಳಿರುವ ಕಡೆಯಲ್ಲಿಯೇ ಈಜುವ ಕೊಳ ಕೊಟ್ಟಿಲ್ಲ. ಎಲ್ಲೆಲ್ಲಿ ಏನೇನು ಸೌಲಭ್ಯಗಳು ಇವೆ, ಏನೇನು ಅನುಕೂಲತೆಗಳು ಇವೆ. ಅವುಗಳನ್ನು ಉಪಯೋಗಿಸಿಕೊಂಡು ತರಬೇತಿ ಕೊಟ್ಟಿದ್ದಾರೆ. ಇವತ್ತು ಯಾವುದೇ ಒಬ್ಬ ಪ್ರತಿಭಾವಂತ ಕ್ರೀಡಾಪಟು, ಅವನು ರೆಗ್ಯುಲರ್ ತರಬೇತಿ ಪಡೆದು ಮುಂದೆ ಬಂದಿಲ್ಲ. ಸಣ್ಣಪುಟ್ಟ ಅವಕಾಶವನ್ನು ಉಪಯೋಗ ಮಾಡಿಕೊಂಡು ಅವನು ಮುಂದೆ ಬಂದಿರುತ್ತಾನೆ. ಇಂತಹ ಒಂದು ಫೆಸಿಲಿಟೀಸ್ ಕೊಡುವುದಕ್ಕೆ ಹಳ್ಳಿಗಳಲ್ಲಿ ಸಿಗತಕ್ಕ ಅನುಕೂಲಗಳನ್ನು ಉಪಯೋಗಿಸಿ, ಕ್ರೀಡೆಗಳ ಬಗ್ಗೆ ತರಬೇತಿಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು, ಇದರ ಬಗ್ಗೆ ಒಂದು ಅಧ್ಯಯನ ಮಾಡಿ, ಪರಿಶೀಲನೆ ಮಾಡಿ, ಸರ್ಕಾರದ ಒಂದು ಯೋಜನೆಯನ್ನು ರೂಪಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆದರೆ ಒಂದು ಮಾತು, ಪ್ರತಿಯೊಂದು ಹಳ್ಳಿಗಳಲ್ಲಿಯೂ ಈ ವ್ಯವಸ್ಥೆ ಮಾಡುವಂತೆ ಹೇಳಿದ್ದಾರೆ. ಇದು ಸ್ವಲ್ಪ ಕಷ್ಟದಾಯಕವಾದ ಕೆಲಸ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲಾ ಕಡೆಗಳಲ್ಲಿಯೂ ಕ್ರೀಡಾಂಗಣವನ್ನು ಮಾಡುವುದಕ್ಕಾಗುವುದಿಲ್ಲ. ಒಂದೊಂದು ಕೋಚ್‌ಗಳಿಗೆ ಬೇಕಾದರೆ, ಒಂದೊಂದು ಮೋಟಾರ್ ಸೈಕಲ್ ಕೊಡಿ. ಈವನ್ ಸ್ಟೈಫೆಂಡರಿ ಮೇಲೆ ಮಾಡಿದರೂ ಆಗುತ್ತದೆ. ವಿಲೇಜ್ ಮಂಡಲ್ಸ್‌ಗೂ ಕೂಡಾ ದುಡ್ಡು ಕೊಟ್ಟು ಮಾಡಿಸುವುದಕ್ಕೆ ಸಾಧ್ಯ ಇದೆ. ಎರಡು ಮೂರು ಮಂಡಲ್ ಪಂಚಾಯತಿಗಳು ಸೇರಿ ೧೫–೨೦ ದಿವಸಗಳ ಕಾಲ ತರಬೇತಿ ಶಿಬಿರ ಮಾಡುವುದಕ್ಕೆ ಸಾಧ್ಯ ಇದೆ.

ಶ್ರೀ ರಮೇಶ್ ಸಿ. ಜಿಗಜಿನಗಿ.—ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆಮಾಡಿ, ಇದನ್ನು ಮಾಡಲಿಕ್ಕೆ ಬರುವ ಅವಕಾಶ ಇದ್ದರೆ ಅದನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಜ್ಞಾನದೇವ್ ಎನ್. ದೊಡ್ಡಮೇಟಿ (ರೋಣ).—ಮಲ್ಲಗಂಬದ ಆಟ ಮುಂತಾದ ಗ್ರಾಮೀಣ ಕ್ರೀಡೆಗಳು ನಾವು ಸಣ್ಣವರಿದ್ದಾಗ ನಡೆಯುತ್ತಿದ್ದವು. ಈಗ ಅವು ಕಾಣಿಸುವುದಿಲ್ಲ. ಈ ರೀತಿಯ ಗ್ರಾಮೀಣ ಕ್ರೀಡೆಗಳ ಹಾಗೂ ಕ್ರೀಡಾ ಚಟುವಟಿಕೆಗಳ ಉತ್ತೇಜನಕ್ಕೆ ತಾವು ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತೀರಾ? ಹೇಗೆ?

ಶ್ರೀ ರಮೇಶ್ ಸಿ. ಜಿಗಜಿನಗಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುತ್ತಿರತಕ್ಕಂಥ ಕ್ರೀಡೆಗಳಿಗೆ ನಮ್ಮ ಇಲಾಖೆಯಲ್ಲಿ ಸಾಕಷ್ಟು ಅನುಕೂಲ ಮಾಡಿಕೊಡಲಾಗಿದೆ. ಇದು ಇಲ್ಲ ಎಂದು ಅವರ ಭಾವನೆಯಾಗಿದ್ದರೆ, ನಾಳೆಯೇ ನನ್ನ ಹತ್ತಿರ ಬರಲಿ, ಅವರ ಜೊತೆ ಚರ್ಚೆ ಮಾಡಿ ಏನು ವ್ಯವಸ್ಥೆ ಮಾಡಬೇಕು ಮಾಡುತ್ತೇನೆ.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಯಾವ ಯಾವ ಚಟುವಟಿಕೆಗಳು ಇವೆ ಹೆಸರು ಹೇಳಿ ನೋಡೋಣ. ಗ್ರಾಮೀಣ ಕ್ರೀಡಾ ಚಟುವಟಿಕೆಗಳು ಯಾವುವು ಎಂಬುದನ್ನು ಹೇಳಿ. ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಕಬ್ಬಡಿ, ಕೋಕೋ ಮುಂತಾದ ಕ್ರೀಡಾ ಚಟುವಟಿಕೆಗಳು ನಡೆಯುತ್ತಿವೆ. ಮಾನ್ಯ ಸದಸ್ಯರು ಯಾವ ರೀತಿ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದಾರೆ, ಅದೇರೀತಿ ನಾನೂ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೇನೆ. ಗ್ರಾಮೀಣ ಕ್ರೀಡೆಗಳ ಬಗ್ಗೆ ನನಗೆ ಅನುಭವ ಇದೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಭಿಯಾಚಕ ಕ್ರಮಾಂಕ ೭ ಮತ್ತು ೧೩

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೭ ಮತ್ತು ೧೩ ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಮಂಜೂರು ಮಾಡುವುದು"

ಪ್ರಸ್ತಾವನೆ ಅಂಗೀಕೃತವಾಯಿತು ಮತ್ತು ಬೇಡಿಕೆಗಳಿಗೆ ಅನುಮೋದನೆ ದೊರೆಯಿತು.

(ಸಭಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೭–ಗಣಿಗಳು ಮತು ಭೂ ವಿಜಾ ನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂವಿಜ್ಞಾನ ಖಾತೆಗೆ ಸಂದಾಯು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೮,೦೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩–ಯುವಜನಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವಾ ಖಾತೆಗೆ ಸಂದಾಯು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೪೧,೯೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಧ್ಯಕ್ಷರು.—ಈಗ ಬೇಡಿಕೆಗಳ ಮಂಡನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮೊದಲು ನಾನು ಈ ಮೊದಲೇ ರಿಕ್ವೆಸ್ಟ್ ಮಾಡಿದ ಹಾಗೆ, ಈ ದಿನ ಇಂಡಸ್ಟ್ರೀಸ್ ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮೂವ್ ಮಾಡಲಿ. ಕೋ ಅಪರೇಷನ್‌ಗೆ ಸಂಬಂಧಪಟ್ಟ ಬೇಡಿಕೆಯನ್ನು ಸೆಪರೇಟ್ ಆಗಿ ಮೂವ್ ಮಾಡಲಿ.

ಅಧ್ಯಕ್ಷರು.—ಹಾಗಾದರೆ ಈಗ ೬, ೯ ಮತ್ತು ೮ನೇ ಬೇಡಿಕೆಗಳನ್ನು ಮಂಡಿಸಲಿ, ಸಹಕಾರ ಮತ್ತು ಸಹಕಾರ ಉದ್ಯಮಕ್ಕೆ ಸಂಭಂಧಪಟ್ಟ ೫೬ ಮತ್ತು ೯ನೇ ಬೇಡಿಕೆಗಳನ್ನು ನಾಳೆ ಮಂಡಿಸಲಿ

ಬೇಡಿಕೆ ಸಂಖ್ಯೆ ೬– ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ರೇಷ್ಮೆ ವ್ಯವಸಾಯು ಮತ್ತು ಸಹಕಾರಿ ಉದ್ಯಮಗಳ ಹೊರತು ಬೇಡಿಕೆ ಸಂಖ್ಯೆ ೯–ವಿದ್ಯುತ್‌ಚಕ್ತಿ

ಯೋಜನೆಗಳು.

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ ಖಾತೆಯ ಮಂತ್ರಿಗಳು),—ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯುದ ಹೊರತು) ಸಂದಾಯು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು, ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೬೩,೦೦,೦೦೦ ರೂ,ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೦೦,೦೦೦ ರೂ,ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂದಾಯು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೫೧,೫೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೬೨,೫೮,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—೬ ಮತ್ತು ೯ ನೇ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಅಭಿಯಾಚನೆ ಕ್ರಮಾಂಕ ೮–ಚಿಕ್ಕಪುಟ್ಟ ಉದ್ಯಮಗಳು

ಶ್ರೀ ಎಂ. ರಘುಪತಿ (ಬಂದರುಗಳು, ಮೀನುಗಾರಿಕೆ ಹಾಗೂ ಸಣ್ಣಕೈಗಾರಿಕೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೩೪,೯೩,೧೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೮೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆ ಸಂಖ್ಯೆ ೮ನ್ನು ಸಭೆಯ ಮುಂದೆ ಮಂಡಿಸಲಾಗಿದೆ. ೫೬ ಮತ್ತು ೯ನೇ ಬೇಡಿಕೆಗಳನ್ನು ನಾಳೆ ತೆಗೆದುಕೊಳ್ಳೋಣ. ಇಂದಿನ ಸಭೆಯನ್ನು ನಾಳೆ ಬೆಳಗ್ಗೆ ೧೧ ಘಂಟೆಗೆ ಮುಂದೂಡಲಾಗಿದೆ,

(ಸದನವು ಸಾಯಂಕಾಲ ೫ ಘಂಟೆ ೫೦ ನಿಮಿಷಕ್ಕೆ ಮುಕ್ತಾಯವಾಗಿ ಪುನ: ದಿನಾಂಕ ೨–೬–೧೯೮೮ನೇ ಗುರುವಾರ ಬೆಳಗ್ಗೆ ೧೧–೦೦ ಘಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

WD 7086